ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 26 ಶನಿವಾರ 2025

ಸಂಪುಟ: 46 | ಸಂಚಿಕೆ: 11 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಸರ್ಕಾರದ ಅನುಮತಿ ಇಲ್ಲದೆ ಬಡಾವಣೆ ನಿರ್ಮಿಸಿದರೆ ಆ


ಭೂಮಿ ಮುಟ್ಟುಗೋಲು

- ಜಿಲ್ಲಾಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ಕಟ್ಟಾಜ್ಞೆ
- ರೈತರೂ ಅನುಮತಿ ಇಲ್ಲದೆ ತಮ್ಮದೇ ಜಮೀನಲ್ಲಿ ಬಡಾವಣೆ ನಿರ್ಮಿಸಲು ಮುಂದಾದರೂ ಜಪ್ತಿ ಗ್ಯಾರಂಟಿ
- ಅಕ್ರಮ ಬಡಾವಣೆಗಳು ತಲೆ ಎತ್ತಿದರೆ ಅಧಿಕಾರಿಗಳ ವಿರುದ್ಧವೂ ಕಠಿಣ ಕ್ರಮ

ಬೆಂಗಳೂರು, ಏ.25 (ಕೆಎಂಶಿ)– ಸರ್ಕಾರದ ಅನುಮತಿ ಇಲ್ಲದೆ ಅಕ್ರಮ ಬಡಾವಣೆ ನಿರ್ಮಿಸಿದಲ್ಲಿ ಅಂತಹ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಇಂದಿಲ್ಲಿ ಪ್ರಕಟಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇನ್ನು ಮುಂದೆ ಕರ್ನಾಟಕದಲ್ಲಿ ಅಕ್ರಮ ಬಡಾವಣೆಗಳು ತಲೆ ಎತ್ತಲು ಬಿಡುವುದಿಲ್ಲ. ಒಂದು ವೇಳೆ ರೈತರು ತಮ್ಮ ಜಮೀನುಗಳಲ್ಲಿ ಸರ್ಕಾರದ ಅನುಮತಿ ಇಲ್ಲದೆ, ನಿವೇಶನಗಳನ್ನು ನಿರ್ಮಿಸಿ, ಮಾರಾಟ ಮಾಡಲು ಮುಂದಾದರೂ ಅಂತಹವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಅಕ್ರಮ ಬಡಾವಣೆಗಳಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಎಲ್ಲ ರಾಜ್ಯ ಸರ್ಕಾರಗಳಿಗೂ ಚಾಟಿ ಬೀಸಿದೆ. ಇಂತಹ ಬಡಾವಣೆಗಳು ತಲೆ ಎತ್ತಿದರೆ ಅಧಿಕಾರಿಗಳನ್ನು ಶಿಕ್ಷೆಗೆ ಗುರಿಪಡಿಸಿ ಎಂದೂ ಆದೇಶ ಮಾಡಿದೆ. ಇದುವರೆಗೂ ಏನಾಗಿದೆಯೋ ಗೊತ್ತಿಲ್ಲ. ಆದರೆ ಮುಂದೆ ಸರ್ಕಾರದ ಅಧಿಕೃತ ಅನುಮತಿ ಇಲ್ಲದೆ, ಯಾರಾದರೂ ಬಡಾವಣೆಗಳನ್ನು, ಇಲ್ಲವೆ ವಸತಿ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ಹೊರಟರೆ ಅಂತಹವರ ಜಮೀನು ಸರ್ಕಾರದ ಪಾಲಾಗುತ್ತದೆ ಎಂದು ವಿವರಿಸಿದರು.



ಸರ್ಕಾರದ ಅನುಮತಿ ಇಲ್ಲದೆ ಬಡಾವಣೆಗಳನ್ನು ನಿರ್ಮಿಸಿ, ನಿವೇಶನ ಪಡೆದ ಜನರಿಗೆ ಮೂಲ ಸೌಕರ್ಯಗಳನ್ನು ಕೊಡದೇ ವಂಚಿಸಿದ್ದಾರೆ. ಅಂತಹ ಬಡಾವಣೆಗಳಲ್ಲಿ ಒಂದು ಅಂಬುಲೆನ್ಸ್ ಸಹ ಹೋಗಲು ಸಾಧ್ಯವಾಗುತ್ತಿಲ್ಲ. ಅವರು ಅಕ್ರಮವಾಗಿ ನಿರ್ಮಿಸಿದ ಬಡಾವಣೆಗಳಿಗೆ ಸರ್ಕಾರ ಮೂಲಭೂತ ಸೌಕರ್ಯ ಕಲ್ಪಿಸಬೇಕಾಗುತ್ತದೆ. ಇದು ಯಾವ ಗ್ರಹಚಾರ. ಮುಂದೆ ಇಂತಹದ್ದಕ್ಕೆ ಅವಕಾಶವಿಲ್ಲ. ರಾಜ್ಯಾದ್ಯಂತ ಅಕ್ರಮವಾಗಿ ನಿರ್ಮಾಣಗೊಂಡಿರುವ ಬಡಾವಣೆಗಳಲ್ಲಿ ನಿವೇಶನ ನೋಂದಣಿ ಮಾಡಿಕೊಂಡಿದ್ದರೆ ಮಾತ್ರ ವಾರಸುದಾರರಿಗೆ ಬಿ–ಖಾತೆ ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಮೇ 20ಕ್ಕೆ ಎರಡು ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ 3221 ಜನವಸತಿ ಪ್ರದೇಶಗಳ ಒಂದು ಲಕ್ಷ ಕುಟುಂಬಗಳಿಗೆ ಹಕ್ಕುಪತ್ರಗಳನ್ನು ನೀಡುವುದಾಗಿ ಇದೇ ಸಂದರ್ಭದಲ್ಲಿ ಘೋಷಣೆ ಮಾಡಿದರು. ■6ನೇ ಪುಟಕ್ಕೆ

ಉಂಡಬತ್ತಿ ಕೆರೆಗೆ ಟೆಂಪೋ ಉರುಳಿ ಬಿದ್ದ ಘೋರ ದುರಂತ ಪ್ರಕರಣ


31 ಮಂದಿ ಸಾವಿಗೆ ಕಾರಣರಾದ ಚಾಲಕ, ವಾಹನದ ಮಾಲೀಕನಿಗೆ 15 ವರ್ಷದ ಬಳಿಕ ಶಿಕ್ಷೆ!

ಮೈಸೂರು, ಏ. 25(ಆರ್‌ಕೆ)– ಮೈಸೂರು–ನಂಜನಗೂಡು ರಸ್ತೆ ಉಂಡಬತ್ತಿ ಕೆರೆಗೆ 15 ವರ್ಷದ ಹಿಂದೆ ಟೆಂಪೋ ಉರುಳಿ ಬಿದ್ದಿದ್ದ ಪ್ರಕರಣದಲ್ಲಿ ಇಬ್ಬರಿಗೆ ಈಗ ಶಿಕ್ಷೆಯಾಗಿದೆ. ಅತೀ ವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿ 31 ಮಂದಿ ಸಾವಿಗೆ ಕಾರಣನಾದ ವಾಹನ ಚಾಲಕ ಹಾಗೂ ಅದರ ಮಾಲೀಕನಿಗೆ ಮೈಸೂರು ಕೋರ್ಟ್ ಶಿಕ್ಷೆ ವಿಧಿಸಿದೆ. ಪ್ಯಾಸೆಂಜರ್ ಟೆಂಪೋ ಚಾಲಕ ಚೇತನ್‌ಕುಮಾರ್ ಮತ್ತು ಆ ವಾಹನದ ಮಾಲೀಕ ಸಂಜೀವ್‌ಕುಮಾರ್ ಶಿಕ್ಷೆಗೊಳಗಾದ ಆರೋಪಿಗಳು. 2010ರ ಡಿಸೆಂಬರ್ 14ರಂದು ಸಂಜೆ 5 ಗಂಟೆ ವೇಳೆಗೆ ನಂಜನಗೂಡು ಕಡೆಯಿಂದ ಮೈಸೂರು ಕಡೆಗೆ ಬರುತ್ತಿದ್ದ ಪ್ಯಾಸೆಂಜರ್ ಟೆಂಪೋ (ಕೆಎ 09–4622) ಚಾಲಕನ ನಿಯಂತ್ರಣ ಕಳೆದುಕೊಂಡು ಉಂಡಬತ್ತಿ ಕೆರೆಗೆ ಉರುಳಿ ಬಿದ್ದಿತ್ತು. ನಿಗದಿತ ಸೀಟುಗಳಿಗಿಂತ, ಸಾಮರ್ಥ್ಯ ಮೀರಿ 40 ಮಂದಿಯನ್ನು ತುಂಬಿಕೊಂಡು ಬರುತ್ತಿದ್ದ ಚೇತನ್‌ಕುಮಾರ್, ಅಜಾಗರೂಕ ಚಾಲನೆಯಿಂದಾಗಿ ಟೆಂಪೋ ■6ನೇ ಪುಟಕ್ಕೆ

ಕೆಆರ್‌ಎಸ್‌ನಲ್ಲಿ ದಸರಾ ವೇಳೆ 'ಕಾವೇರಿ ಆರತಿ'; ವಾರದಲ್ಲಿ ನೀಲಿನಕ್ಷೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಹಿತಿ

- ನಾಡಿನ ಬಹು ಸಂಸ್ಕೃತಿ ಪ್ರತೀಕವಾಗಿ ಆಚರಣೆ
- ರಾಜ್ಯ ಸರ್ಕಾರದಿಂದ 92 ಕೋಟಿ ಅನುದಾನ



ಕಾವೇರಿ ಆರತಿ ಸಂಬಂಧ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೆಆರ್‌ಎಸ್‌ನಲ್ಲಿ ಸ್ಥಳ ಪರಿಶೀಲನೆ ನಡೆಸಿದರು.

ಮಂಡ್ಯ, ಏ.25– ನಾಡಿನ ವಿವಿಧ ಸಂಸ್ಕೃತಿ ಒಳಗೊಂಡಂತೆ ಕಾವೇರಿ ಆರತಿ ಕಾರ್ಯಕ್ರಮಕ್ಕೆ ಸಮಿತಿಯು ನೀಲಿನಕ್ಷೆ ರೂಪಿಸುತ್ತಿದ್ದು, ವಾರದಲ್ಲಿ ಸಿದ್ಧವಾಗಲಿದೆ. ದಸರಾ ವೇಳೆ ಕಾರ್ಯಕ್ರಮ ನಡೆಸುವ ಉದ್ದೇಶವಿದೆ ಎಂದು ಭಾರೀ ನೀರಾವರಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಮಂಡ್ಯ ಜಿಲ್ಲೆಯ ಕೆಆರ್‌ಎಸ್‌ನಲ್ಲಿ 'ಕಾವೇರಿ ಆರತಿ' ನಡೆಸುವ ಸಂಬಂಧ ಅವರು ಶುಕ್ರವಾರ, ಸ್ಥಳ ಪರಿಶೀಲನೆ ನಡೆಸಿ, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಜತೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ನಮ್ಮ ಸಂಸ್ಕೃತಿ, ಧಾರ್ಮಿಕ ಆಚರಣೆ ಸೇರಿಸಿ ಕಾರ್ಯಕ್ರಮ ರೂಪಿಸಲು ಸಚಿವ ಚಲುವರಾಯಸ್ವಾಮಿ ಅವರ ನೇತೃತ್ವದ ಸಮಿತಿಗೆ ಸಲಹೆ ನೀಡಿದ್ದೇನೆ. ಈ ಸಮಿತಿ ವಾರದಲ್ಲಿ ಕಾರ್ಯಕ್ರಮದ ನೀಲಿನಕ್ಷೆ ಸಿದ್ಧಪಡಿಸಲಿದೆ ಎಂದು ತಿಳಿಸಿದರು. ಕೊಡಗಿನಿಂದ ಹಿಡಿದು, ದಕ್ಷಿಣ ಕನ್ನಡ, ಕರಾವಳಿ, ಮಲೆನಾಡು, ಬೆಂಗಳೂರು, ಮೈಸೂರು, ಚಾಮರಾಜನಗರ ಭಾಗದ ಜನರು ಈ ■6ನೇ ಪುಟಕ್ಕೆ

ಡಾ.ರಾಜ್‌ಕುಮಾರ್ ಹುಟ್ಟುಹಬ್ಬ



ವರನಟ ಡಾ.ರಾಜ್‌ಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರು ನಗರ ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಸಿಹಿ ವಿತರಿಸಲಾಯಿತು. ವೇದಿಕೆ ಅಧ್ಯಕ್ಷ ಮಿಲ್ಕ್ ಮಂಜು, ಡಾ. ರಾಜ್‌ಕುಮಾರ್ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ಉಪಾಧ್ಯಕ್ಷ ನಾಗರಾಜು, ಪ್ರಧಾನ ಕಾರ್ಯದರ್ಶಿಗಳಾದ ಬಾಲಕೃಷ್ಣೇಗೌಡ, ಮೋಹನ್‌ಕುಮಾರ್, ಕಾರ್ಯದರ್ಶಿಗಳಾದ ಸರ್ಧಾರ್ ಮಂಕೇಶ್, ಮಂಜುನಾಥ್ (ಮುನ್ನ), ಸಹ ಕಾರ್ಯದರ್ಶಿ ಮೋಹನ್‌ಸಿಂಗ್, ಉಪಸ್ಥಿತರಿದ್ದರು.

ಶೂಟೌಟ್ ಪ್ರಕರಣ; ರಿಕ್ಕಿ ರೈ ಅಂಗರಕ್ಷಕ ಬಂಧನ

ರಾಮನಗರ, ಏ.25– ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲಿನ ಶೂಟೌಟ್ ಪ್ರಕರಣಕ್ಕೆ ಸಂಬಂಧಿಸಿ ಅವರ ಅಂಗರಕ್ಷಕ ಮೋನಪ್ಪ ವಿಠಲ ಎಂಬವರನ್ನು ಬಿಡದಿ ಪೊಲೀಸರು ಬಂಧಿಸಿದ್ದಾರೆ.



ಬಂಧಿತನನ್ನು ರಾಮನಗರ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ಹೆಚ್ಚಿನ ವಿಚಾರಣೆಗಾಗಿ 10 ದಿನಗಳ ಕಾಲ ಪೊಲೀಸ್ ವಶಕ್ಕೆ ಪಡೆಯಲಾಗಿದೆ.

ಏ.22ರಂದು ಮೋನಪ್ಪನನ್ನು ಪೊಲೀಸರು ಠಾಣೆಗೆ ಕರೆಸಿ ವಿಚಾರಣೆ ನಡೆಸಿದ್ದರು. ವಿಚಾರಣೆ ವೇಳೆ ಆತ ಎದೆ ನೋವು ಎಂದು ಹೇಳಿದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಗ್ಯದಲ್ಲಿ ಚೇತರಿಕೆ ಕಂಡ ಬಳಿಕ ಬಂಧಿಸಲಾಗಿದೆ.

ರಿಕ್ಕಿ ರೈ ಅಂಗರಕ್ಷರಾಗಿದ್ದ ಮೋನಪ್ಪ ವಿಠಲ್ ಬಗ್ಗೆ ಗುಮಾನಿ ಬಲವಾಗಿದ್ದು, ಈತ ಬಳಸುತ್ತಿದ್ದ ಬಂದೂಕನ್ನು ವಶಪಡಿಸಿಕೊಳ್ಳಲಾಗಿದೆ. ಈತನಲ್ಲಿದ್ದ ಗುಂಡುಗಳಲ್ಲಿ ವ್ಯತ್ಯಾಸವಾಗಿದ್ದು, ಈತನ ನಡವಳಿಕೆ ಬಗ್ಗೆ ಸಂಶಯ ಬಂದ ಹಿನ್ನೆಲೆಯಲ್ಲಿ ಬಂಧಿಸಲಾಗಿದೆ. ರಿಕ್ಕಿ ರೈ ಅಂಗರಕ್ಷಕರಿಂದ 7 ಬಂದೂಕುಗಳನ್ನು ಪೊಲೀಸರು ವಶಪಡಿಸಿಕೊಂಡು ತಪಾಸಣೆ ನಡೆಸುತ್ತಿದ್ದಾರೆ. ಈ ಪೈಕಿ ಯಾರ ಬಂದೂಕಿನಿಂದ ಗುಂಡು ಹಾರಿದೆ ಎಂಬುದು ವಿಧಿವಿಜ್ಞಾನ ಪ್ರಯೋಗಾಲಯದ ವರದಿಯಿಂದ ಖಚಿತವಾಗಬೇಕಿದೆ. ಮುತ್ತಪ್ಪ ರೈ ಮಾಜಿ ಆಪ್ತ ರಾಕೇಶ್ ಮಲ್ಲಿ ಅವರನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ. ಮೂರನೇ ಆರೋಪಿ ನಿತೀಶ್ ಶೆಟ್ಟಿ ಅವರನ್ನು ವಿಚಾರಣೆ ನಡೆಸಲಾಗಿದ್ದು, 2 ಮತ್ತು 4ನೇ ಆರೋಪಿಗಳಾದ ಮುತ್ತಪ್ಪ ರೈ ಅವರ 2ನೇ ಪತ್ನಿ ಅನುರಾಧಾ ಮತ್ತು ವೈದ್ಯನಾಥನ್ ಕಾಲಾವಕಾಶ ಕೇಳಿರುವುದಾಗಿ ಎಸ್‌ಪಿ ತಿಳಿಸಿದ್ದಾರೆ.

ಐಶ್ವರ್ಯ ಗೌಡ ಇಡಿ ಬಂಧನಕ್ಕೆ

ಬೆಂಗಳೂರು, ಏ.25– 9.82 ಕೋಟಿ ಮೊತ್ತದ ಚಿನ್ನಾಭರಣ ವಂಚಿಸಿದ ಪ್ರಕರಣದಲ್ಲಿ ಐಶ್ವರ್ಯ ಗೌಡ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು 14 ದಿನಗಳ ಕಸ್ಟಡಿಗೆ ಪಡೆದಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಈಚೆಗೆ ಇಸಿಐಆರ್ ದಾಖಲಿಸಿಕೊಂಡಿದ್ದ ಇ.ಡಿ ಅಧಿಕಾರಿಗಳು ಗುರುವಾರ ಐಶ್ವರ್ಯ ಗೌಡ ಅವರ ಆರ್‌ಎಂಸಿ ಯಾರ್ಡ್ ನಿವಾಸ ಮತ್ತು ಮಂಡ್ಯದ ಕಿರುಗಾವಲಿನ ನಿವಾಸದ ಮೇಲೆ ದಾಳಿ ನಡೆಸಿದ್ದರು.

ಸಿದ್ದಮ್ಮ ನಿಧನ

ಮೈಸೂರು: ಮೈಸೂರಿನ ಕುವೆಂಪುನಗರ ನಿವಾಸಿ ಸಿದ್ದಮ್ಮ (85) ಶುಕ್ರವಾರ ನಿಧನರಾದರು.



ಮೃತರು ಪುತ್ರ ಮಹದೇವ ಸ್ವಾಮಿ, ಸೊಸೆ ಯಶೋದಾ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆಯು ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್ ರುದ್ರಭೂಮಿಯಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಟೌನ್‌ಶಿಪ್ ಪಿತಾಮಹರು!

ಮೈಸೂರಿನಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಗಂಭೀರ ಆರೋಪ

- ಹಿಂದೆಲ್ಲಾ ಟೌನ್‌ಶಿಪ್ ಯೋಜನೆ ರೂಪಿಸಿದ್ದರು; ಈಗ ಅವರಿಂದಲೇ ವಿರೋಧ
- ಡಿಎಲ್‌ಎಫ್‌ನಿಂದ 300 ಕೋಟಿ ಪಡೆದಿದ್ದರು; ನಾನೇನು ಹೊಸ ತೀರ್ಮಾನ ಮಾಡುತ್ತಿಲ್ಲ

ಮೈಸೂರು ದಸರಾದಲ್ಲಿ ಹಳೆಯ ಆಚರಣೆಗಳಿಗೆ ಕೊಕ್; ಕಂಬಳ ಸೇರ್ಪಡೆ

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಒಂದಷ್ಟು ಹಳೆಯ ಆಚರಣೆಗಳನ್ನು ಕೈ ಬಿಟ್ಟು, ಹೊಸ ಪೀಳಿಗೆ ಆಕರ್ಷಿಸುವ ಕಾರ್ಯಕ್ರಮ ರೂಪಿಸಲು ಚಿಂತನೆ ನಡೆಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಾಡಹಬ್ಬ ಮೈಸೂರು ದಸರಾವನ್ನು ವಿನೂತನವಾಗಿ ಆಚರಿಸಲು ಚರ್ಚೆ ನಡೆಸಲಾಗಿದೆ. ಈ ಬಗ್ಗೆ ಶೀಘ್ರದಲ್ಲೆ ಸಮಾಲೋಚನೆ ನಡೆಸಲು ಸಭೆ ಕರೆಯುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಹೇಳಿದ್ದಾರೆ ಎಂದರು. ಕಂಬಳ ನಮ್ಮ ಕರಾವಳಿ ಭಾಗದ ವಿಶೇಷವಾದ ಆಚರಣೆ. ಈ ಹಿನ್ನೆಲೆಯಲ್ಲಿ ಮೈಸೂರು ದಸರಾದಲ್ಲಿ ಕಂಬಳವನ್ನು ಸೇರಿಸಲಾಗುವುದು. ಕಂಬಳ ನಡೆಸಲು ಜಾಗ ಹುಡುಕಲು ಜಿಲ್ಲಾಧಿಕಾರಿಗೆ ಸೂಚನೆ ನೀಡಲಾಗಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಮೈಸೂರು, ಏ.25(ಬಿಎಲ್‌ಯು)– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರುಗಳೇ ಟೌನ್‌ಶಿಪ್ ಪಿತಾಮಹರು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆರೋಪಿಸಿದ್ದಾರೆ.

ಮೈಸೂರಿನ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಇಂದು ಪತ್ರಕರ್ತರೊಡನೆ ಮಾತನಾಡಿದ ಅವರು, ರೈತರ ಭೂಮಿ ಸ್ವಾಧೀನ ಮಾಡಿಕೊಂಡು ಟೌನ್‌ಶಿಪ್ ನಿರ್ಮಾಣ ಮಾಡಲು ದೇವೇಗೌಡರು ಹಾಗೂ ಕುಮಾರಸ್ವಾಮಿ ಮುಂದಾಗಿದ್ದರು. ಹಾಗಾಗಿ ಇವರೇ ಟೌನ್‌ಶಿಪ್ ಪಿತಾಮಹರು ಎಂದು ಟೀಕಿಸಿದರು.

ಅಂದು ಟೌನ್‌ಶಿಪ್ ನಿರ್ಮಾಣಕ್ಕೆ ಯೋಜನೆ ರೂಪಿಸಿದ್ದವರೇ ಈಗ ವಿರೋಧ ಮಾಡುವುದು ಯಾವ ನ್ಯಾಯ ಎಂದು ಡಿಕೆಶಿ ಪ್ರಶ್ನಿಸಿದರು. ಬಿಡದಿ ಟೌನ್ ಶಿಪ್‌ಗೆ ದೇವೇಗೌಡರು ವಿರೋಧ ವ್ಯಕ್ತಪಡಿಸಿರುವುದಕ್ಕೆ ಪ್ರತಿಕ್ರಿಯೆ ನೀಡಿದ ಡಿ.ಕೆ.ಶಿವಕುಮಾರ್, ದೇವೇಗೌಡರು ದೊಡ್ಡವರು. ಪಾಪ ಅವರು ಹಿಂದಿನ ತಮ್ಮ ತೀರ್ಮಾನಗಳನ್ನು ಮರೆತಿರಬೇಕು ಅನ್ನಿಸುತ್ತದೆ. ಈಗ ಅದನ್ನು ನಾನು ಅವರಿಗೆ ನೆನಪಿಸುತ್ತೇನೆ ಎಂದರು.

ಡಿಎಲ್‌ಎಫ್‌ನಿಂದ ಹಣ ಪಡೆದಿದ್ದರು: ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ಬಿಡದಿ, ಸಾತನೂರು ಹಾಗೂ ನಂದ ಗುಡಿ ಭಾಗದಲ್ಲಿ ಟೌನ್‌ಶಿಪ್‌ಗಾಗಿ ನೋಟಿಫಿಕೇಷನ್ ಹೊರಡಿಸಿದ್ದರು. ಟೌನ್‌ಶಿಪ್ ನಿರ್ಮಾಣಕ್ಕಾಗಿ ಡಿಎಲ್‌ಎಫ್ ಕಂಪನಿಯಿಂದ 300 ಕೋಟಿ ರೂಪಾಯಿ ಪಡೆದಿದ್ದರು. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗ ಟೌನ್ ಶಿಪ್ ನಿರ್ಮಾಣ ಸಾಧ್ಯವಿಲ್ಲ ಎಂಬುದನ್ನು ಅರಿತು ಡಿಎಲ್‌ಎಫ್ ಕಂಪನಿಗೆ ಹಣ ವಾಪಸ್ಸು ನೀಡಿದ್ದರು ಎಂದು ಆಪಾದಿಸಿದರು.

ದೇವೇಗೌಡರು ಆರೋಪ ಮಾಡಿರುವಂತೆ ನಾನು ಈಗ ಯಾವುದೇ ಜಮೀನು ಡಿನೋಟಿಫಿಕೇಷನ್ ಮಾಡಲು ತಯಾರಿಲ್ಲ.



ಒಂದು ವೇಳೆ ಡಿ ನೋಟಿಫಿಕೇಷನ್ ಮಾಡಿದರೆ ಹಣ ಲೂಟಿ ಮಾಡಿದರು ಎಂಬ ಆರೋಪ ಬರುತ್ತದೆ. ಆದರಿಂದ ಇಂತಹ ಯಾವುದೇ ಪ್ರಯತ್ನಕ್ಕೆ ನಾನು ಕೈ ಹಾಕುವುದಿಲ್ಲ ಎಂದರು.

ದೇವೇಗೌಡರ ಪುತ್ರ ಕುಮಾರಸ್ವಾಮಿ ಅವರು ಕೈಗೊಂಡ ತೀರ್ಮಾನವನ್ನು ಈಗ ಸಾಕಾರಗೊಳಿಸುತ್ತಿದ್ದೇವೆ. ಇದು ಬಿಟ್ಟು ಯಾವುದೇ ಹೊಸ ನಿರ್ಧಾರ ಕೈಗೊಳ್ಳುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ರಾಮನಗರ ಹೆಸರನ್ನು ಹೇಗೆ ಬದಲಾವಣೆ ಮಾಡಬೇಕೆಂದು ನನಗೆ ಗೊತ್ತಿದೆ. ಇದನ್ನು ನಾನು ಮಾಡಿಯೇ ಸಿದ್ಧ. ನಾವೇನು ಹೊರಗಿನಿಂದ ಬಂದವರಲ್ಲ, ನಮ್ಮ ಭೂಮಿ, ನಮ್ಮ ನೆಲದ ಬಗ್ಗೆ ನಮಗೆ ಅರಿವಿದೆ ಡಿ.ಕೆ.ಶಿವಕುಮಾರ್ ಹೇಳಿದರು.

ಇದು ಕೆಸರೆರಚಾಟದ ಸಂದರ್ಭವಲ್ಲ

ಪಹಲ್ಗಾಮ್ ಪ್ರಕರಣದಲ್ಲಿ ಒಬ್ಬರಿಗೊಬ್ಬರು ರಾಜಕೀಯವಾಗಿ ಕೆಸರೆರಚಾಡುವ ಸಂದರ್ಭ ಇದಲ್ಲ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಕಾಶ್ಮೀರದಲ್ಲಿ ಭದ್ರತಾ ಲೋಪವಾಗಿದೆ ಎಂದು ಕೇಂದ್ರ ಸರ್ಕಾರವೇ ಒಪ್ಪಿಕೊಂಡ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಕಾಂಗ್ರೆಸ್ ಪಕ್ಷ ಈ ವಿಚಾರದಲ್ಲಿ ಯಾವುದೇ ಟೀಕೆ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಪಕ್ಷದ ಅಧ್ಯಕ್ಷನಾಗಿ ಜವಾಬ್ದಾರಿಯಿಂದ ಮಾತನಾಡಬೇಕು. ಈ ಸಂದರ್ಭದಲ್ಲಿ ನಾನು ಏನೇ ಮಾತನಾಡಿದರೂ ವಿವಾದವಾಗುತ್ತದೆ. ಆದ ಕಾರಣ ಈ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು. ದೇಶದಲ್ಲಿ ಶಾಂತಿ ಸುವ್ಯವಸ್ಥೆ ಇರಬೇಕು. ಇದಕ್ಕಾಗಿ ದುಷ್ಕರ್ಮಿಗಳನ್ನು ಮುಗಿಸಬೇಕು ಎಂದು ಕೇಂದ್ರ ಸರ್ಕಾರ ಸಂಕಲ್ಪ ಮಾಡಿದೆ. ಇದಕ್ಕೆ ನಾವು ಸಮ್ಮತಿಸಿದ್ದೇವೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಕೋರ್ಟು, ಕಚೇರಿ ಅಲೆದು, ಜೈಲು ವಾಸ ಕೂಡ ಅನುಭವಿಸಿದ್ದೇನೆ

ಈಗಾಗಲೇ ನಾನು ಕೋರ್ಟು, ಕಚೇರಿ ಅಲೆದು, ಜೈಲು ವಾಸ ಕೂಡ ಅನುಭವಿಸಿದ್ದೇನೆ. ಆದ ಕಾರಣ ಟೌನ್‌ಶಿಪ್‌ಗಾಗಿ ವಶಪಡಿಸಿಕೊಂಡಿರುವ ಭೂಮಿಯು ಡಿ ನೋಟಿಫಿಕೇಷನ್ ಮಾಡುವ ಯಾವುದೇ ನಿರ್ಧಾರ ಮಾಡುವುದಿಲ್ಲ ಎಂದು ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.

ಒಂದು ವೇಳೆ ಡಿ ನೋಟಿಫಿಕೇಶಷನ್ ಮಾಡಿದರೆ ದುಡ್ಡು ಕಾಸು ಲೂಟಿ ಮಾಡಿದ ಎಂಬ ಆರೋಪ ಬರುತ್ತದೆ. ಆದ ಕಾರಣ ಇದೆಲ್ಲಾ ನನಗೆ ಬೇಡದಿರುವ ವಿಚಾರ ಎಂದರು. ನನ್ನ ಸ್ವಂತ ಜಮೀನಿನ ಬಗ್ಗೆ ಯಾವುದಾದರೂ ತೀರ್ಮಾನ ಕೈಗೊಂಡರೂ ಅದಕ್ಕೂ ನಿರಾಧಾರ ಆರೋಪ ಮಾಡುತ್ತಾರೆ. ಆದ ಕಾರಣ ಡಿ ನೋಟಿಫಿಕೇಷನ್ ಉಸಾಬರಿಯೆಲ್ಲಾ ನನಗೆ ಬೇಕಿಲ್ಲ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಗ್ರೇಟರ್ ಬೆಂಗಳೂರು ಯೋಜನೆ ಇಡೀ ದೇಶಕ್ಕೆ ಮಾದರಿಯಾಗುತ್ತದೆ. ದೆಹಲಿ, ಚಂಡೀಗಢ್‌ಗಿಂತ ಉತ್ತಮವಾಗಿ ಗ್ರೇಟರ್ ಬೆಂಗಳೂರು ರಚನೆ ಮಾಡುತ್ತೇವೆ. ಇದಕ್ಕಾಗಿ 10 ಸಾವಿರ ಕೋಟಿ ವೆಚ್ಚ ಮಾಡುತ್ತಿದ್ದು, ಯೋಜನೆ ಸಿದ್ಧವಾಗುತ್ತಿದೆ ಎಂದರು. ರೈತರ ಭೂಮಿ ಮಾರಾಟವಾಗುತ್ತಿಲ್ಲ, ಅಭಿವೃದ್ಧಿ ಕೂಡ ಸಾಧ್ಯವಾಗುತ್ತಿಲ್ಲ. ಆದ ಕಾರಣ ಏನಾದರೊಂದು ತೀರ್ಮಾನ ಮಾಡಿ ಎಂದು ರೈತರೇ ನನ್ನ ಬಳಿ ಮನವಿ ಮಾಡಿದ್ದಾರೆ. ಭೂಮಿ ಹೋದರೆ ನ್ಯಾಯಯುತ ಪರಿಹಾರ ನೀಡಲಾಗುವುದು ಎಂದು ರೈತರಿಗೆ ಭರವಸೆ ನೀಡಿದ್ದೇನೆ ಎಂದು ಡಿಕೆ ಶಿವಕುಮಾರ್ ಹೇಳಿದರು.

ಇಸ್ರೋ ಮಾಜಿ ಅಧ್ಯಕ್ಷ ಕೆ.ಕಸ್ತೂರಿರಂಗನ್ ಇನ್ನಿಲ್ಲ


ನಾಳೆ ಬೆಂಗಳೂರು ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಅಂತಿಮ ದರ್ಶನಕ್ಕೆ ಅವಕಾಶ

ಬೆಂಗಳೂರು, ಏ.25– ಇಸ್ರೋ ಮಾಜಿ ಅಧ್ಯಕ್ಷ, ದೇಶದ ಪ್ರಧಾನಿ ಹಾಗೂ ಸರ್ಕಾರಕ್ಕೆ ನಿರಂತರವಾಗಿ ಸಲಹೆ, ಮಾರ್ಗದರ್ಶನ ನೀಡುತ್ತಿದ್ದ ಕೃಷ್ಣಸ್ವಾಮಿ ಕಸ್ತೂರಿ ರಂಗನ್(64) ಅವರು ಇಂದು(ಏ.25) ಬೆಂಗಳೂರಿನ ಸ್ವಗೃಹದಲ್ಲಿ ನಿಧನರಾಗಿದ್ದಾರೆ.

ಎನ್‌ಇಪಿ ಕರಡು ಸಮಿತಿಯ ಅಧ್ಯಕ್ಷರೂ ಆಗಿದ್ದ ಕೆ.ಕಸ್ತೂರಿ ರಂಗನ್, ಜವಾಹರ ಲಾಲ್ ನೆಹರು ವಿಶ್ವವಿದ್ಯಾಲಯದ ಕುಲಪತಿ ಮತ್ತು ಕರ್ನಾಟಕ ಜ್ಞಾನ ಆಯೋಗದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಕರ್ನಾಟಕವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ವ್ಯಾಪಿಸಿರುವ ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ರಚಿಸಲಾಗಿದ್ದ ಸಮಿತಿಗೆ ಡಾ.ಕಸ್ತೂರಿ ರಂಗನ್ ನೇತೃತ್ವ ವಹಿಸಿದ್ದರು. ಅವರು ನೀಡಿದ ವರದಿಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕಾರ್ಯೋನ್ಮುಖವೂ ಆಗಿದೆ. ಕರ್ನಾಟಕದಲ್ಲಿ ಕೆಲವು ಬದಲಾವಣೆಗಳೊಂದಿಗೆ ಕಸ್ತೂರಿ ರಂಗನ್ ವರದಿ ಯನ್ನು ಜಾರಿ ಮಾಡಲು ಅನುಮತಿ ನೀಡಲಾಗಿದೆ.

ಕಸ್ತೂರಿರಂಗನ್ ಇಸ್ರೋದ ಅಧ್ಯಕ್ಷರೂ ಆಗಿ 1994 ಮತ್ತು 2003 ಅವಧಿಯಲ್ಲಿ ಕೆಲಸ ಮಾಡಿದ್ದರು. ಬಾಹ್ಯಾಕಾಶ ಆಯೋಗದ ಅಧ್ಯಕ್ಷರಾಗಿ, ಭಾರತ ಸರ್ಕಾರದ ಬಾಹ್ಯಾಕಾಶ ಇಲಾಖೆ ಕಾರ್ಯದರ್ಶಿಯಾಗಿ 9 ವರ್ಷಗಳಿಗೂ ಹೆಚ್ಚು ಕಾಲ ಭಾರತೀಯ ಬಾಹ್ಯಾಕಾಶ ಕಾರ್ಯಕ್ರಮವನ್ನು ಅತ್ಯುತ್ತಮವಾಗಿ ಮುನ್ನಡೆಸಿದ್ದರು.



ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್ (PSLV) ಯೋಜನೆಯನ್ನು ಅಭಿವೃದ್ಧಿಪಡಿಸುವ ಉಸ್ತುವಾರಿ ವಹಿಸಿದ್ದರು. ಭಾರತದ ಮೊದಲ ಭೂ ವೀಕ್ಷಣಾ ಉಪಗ್ರಹಗಳಾದ ಭಾಸ್ಕರ–I ಮತ್ತು ಭಾಸ್ಕರ್–II ಕಾರ್ಯಕ್ರಮಗಳಿಗೆ ಯೋಜನಾ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದರು.

ಅವರ ದೂರದೃಷ್ಟಿಯ ನಾಯಕತ್ವದಲ್ಲಿ, ಇಸ್ರೋ ಪಿಎಸ್‌ಎಲ್‌ವಿಯ ಯಶಸ್ವಿ ಉಡಾವಣೆ, ಕಾರ್ಯಾಚರಣೆ ಹಾಗೂ ಜಿಎಸ್‌ಎಲ್‌ವಿಯ ಮೊದಲ ವಿಮಾನ ಸೇರಿದಂತೆ ಪ್ರಮುಖ ಮೈಲಿಗಲ್ಲುಗಳನ್ನು ಸಾಧಿಸಿದೆ. ಐಆರ್‌ಎಸ್ ಸಿ 1ಮತ್ತು 1ಡಿ ನಂತಹ ಮುಂದುವರಿದ ನಾಗರಿಕ ದೂರ ಸಂವೇದಿ ಉಪಗ್ರಹಗಳ ಅಭಿವೃದ್ಧಿ ಮತ್ತು ಉಡಾವಣೆ, ಹೊಸ ತಲೆಮಾರಿನ ಇನ್ಸಾಟ್ ಸಂವಹನ ಉಪಗ್ರಹಗಳು, ಮತ್ತು ಸಮುದ್ರ ವೀಕ್ಷಣೆ ಉಪಗ್ರಹಗಳ ಐಆರ್ ಎಸ್–ಪಿ3/ಪಿ4 ಅನ್ನು ಜಾರಿಗೊಳಿಸಿದ್ದು ಇವರ ಕಾಲದಲ್ಲಿಯೇ. ಬಾಹ್ಯಾಕಾಶ ವಿಷಯದಲ್ಲಿ ವಿಶ್ವದ ಪ್ರಮುಖ ರಾಷ್ಟ್ರಗಳ ನಡುವೆ ಭಾರತವೂ ನಿಲ್ಲುವಂತೆ ಮಾಡುವಲ್ಲಿ ಕಸ್ತೂರಿ ರಂಗನ್ ಅವರ ಪಾತ್ರ ಹಿರಿದಾದುದು.

ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕುಲಪತಿಯಾಗಿ, ಕರ್ನಾಟಕ ಜ್ಞಾನ ಆಯೋಗದ ಅಧ್ಯಕ್ಷರಾಗಿ, ಶಿಕ್ಷಣ ತಜ್ಞ, ಪರಿಸರವಾದಿ, ರಾಜ್ಯಸಭಾ ಸದಸ್ಯರಾಗಿಯು ಹಲವು ಕ್ಷೇತ್ರಗಳಲ್ಲಿ ಅನನ್ಯ ಸೇವೆ ಸಲ್ಲಿಸಿರುವ ಇವರಿಗೆ ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣ ಸೇರಿದಂತೆ ಹತ್ತಾರು ಪ್ರಶಸ್ತಿಗಳು ಸಂದಿವೆ. ಸಿಂದಗಿಯ ಶ್ರೀ ಚೆನ್ನವೀರ ಸ್ವಾಮೀಜಿ ಪ್ರತಿಷ್ಠಾನದ ಭಾಸ್ಕರಾಚಾರ್ಯ ಪ್ರಶಸ್ತಿಯನ್ನು ಆರು ವರ್ಷದ ಹಿಂದೆ ಕಸ್ತೂರಿ ರಂಗನ್ ಅವರಿಗೆ ಪ್ರದಾನ ಮಾಡಲಾಗಿತ್ತು.

ಭಾರತದ ಬಾಹ್ಯಾಕಾಶ ಸಂಸ್ಥೆಗೆ ಕಠಿಣ ಸಮಯದ ಅವಧಿಯಲ್ಲಿ ಕಸ್ತೂರಿ ರಂಗನ್ ಅಧ್ಯಕ್ಷರಾಗಿ ಮಹತ್ತರ ಬದಲಾವಣೆಗೆ ನಾಂದಿ ಹಾಡಿದರು. ಕ್ರಯೋಜೆನಿಕ್ ತಂತ್ರಜ್ಞಾನಕ್ಕೆ ಪ್ರವೇಶ ಸೇರಿದಂತೆ ಅಂತರರಾಷ್ಟ್ರೀಯ ನಿರ್ಬಂಧಗಳನ್ನು ಎದುರಿಸಿದ ಸಮಯದಲ್ಲಿ ಅವರು ಗಟ್ಟಿಯಾಗಿ ಕೆಲಸ ಮಾಡಿದರು. ಅದರಲ್ಲೂ 1998 ರಲ್ಲಿ ಭಾರತದ ಪರಮಾಣು ಪರೀಕ್ಷೆಯ ನಂತರ ನಿರ್ಬಂಧಗಳು ಮತ್ತಷ್ಟು ಬಿಗಿಯಾದಾಗ ಕಸ್ತೂರಿ ರಂಗನ್ ಅವರು ಭಾರತದ ವಿಜ್ಞಾನ, ತಂತ್ರಜ್ಞಾನ ವಲಯಕ್ಕೆ ಬಲ ತುಂಬಿದರು.

ಬೆಂಗಳೂರಿನ ಸದಾಶಿವನಗರ ಮೇಕ್ರಿ ಸರ್ಕಲ್ ಬಳಿ ಇರುವ ರಾಮನ್ ರಿಸರ್ಚ್ ಇನ್ಸಿಟ್ಯೂಟ್‌ನಲ್ಲಿ ಎಪ್ರಿಲ್ 27ರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನವರೆಗೆ ಕೆ ಕಸ್ತೂರಿರಂಗನನ್ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಪ್ರಧಾನಿ ಮೋದಿ ಸಂತಾಪ

ಕೆ.ಕಸ್ತೂರಿರಂಗನ್ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.

ಕಸ್ತೂರಿರಂಗನ್ ನಿಧನ ವಾರ್ತೆ ನೋವು ತಂದಿದೆ. ಭಾರತದ ವಿಜ್ಞಾನ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ, ದೇಶಕ್ಕಾಗಿ ಸಲ್ಲಿಸಿದ ನಿಸ್ವಾರ್ಥ ಸೇವೆಯನ್ನು ಭಾರತ ಯಾವತ್ತೂ ಮರೆಯುವುದಿಲ್ಲ. ಕಸ್ತೂರಿರಂಗನ್ ಅಧ್ಯಕ್ಷತೆಯಲ್ಲಿ ಇಸ್ರೋ ಮಹತ್ತರ ಸಾಧನೆ ಮಾಡಿತ್ತು ಎಂದು ಮೋದಿ ಟ್ವೀಟ್ ಮಾಡಿದ್ದಾರೆ. ಇದೇ ವೇಳೆ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸುವಾಗ ಕಸ್ತೂರಿರಂಗನ್ ನೀಡಿದ ಕೊಡುಗೆಯನ್ನು ಮೋದಿ ಸ್ಮರಿಸಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ದೇಶದ ಹೆಮ್ಮೆಯ ವಿಜ್ಞಾನಿ ಕೊಡುಗೆಯನ್ನು ಈ ಸಂದರ್ಭದಲ್ಲಿ ಸ್ಮರಿಸಿದ್ದಾರೆ. ವಿಜ್ಞಾನಿಯಾಗಿ, ಶಿಕ್ಷಣ ತಜ್ಞರಾಗಿ, ಇಸ್ರೋ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಭಾರತ ಈ ಹೆಮ್ಮೆಯ ವಿಜ್ಞಾನಿಯನ್ನು ಯಾವತ್ತೂ ನೆನಪಿನಲ್ಲಿ ಇಟ್ಟುಕೊಳ್ಳಲಿದೆ ಎಂದು ದೇವೇಗೌಡರು ಟ್ವೀಟ್ ಮಾಡಿದ್ದಾರೆ.

ನಿಧನ



ಶ್ರೀಮತಿ ಮಹಾಲಕ್ಷ್ಮಮ್ಮ.ಡಿ
ನಿವೃತ್ತ ಮುಖ್ಯ ಶಿಕ್ಷಕಿ

(ಶ್ರೀ ಕುನ್ನೇಗೌಡ ಎಸ್ ರವರ ಧರ್ಮಪತ್ನಿ & ಶ್ರೀ ದೊಡ್ಡಯ್ಯ ಡಿ ಎಲೆಕ್ಟ್ರಿಕಲ್ ಕಂಟ್ರಾಕ್ಟರ್ ರವರ ಜೇಷ್ಠ ಪುತ್ರಿ) ಇವರು ದಿನಾಂಕ 25/04/2025 ಶುಕ್ರವಾರ ದೈವಾದೀನರಾಗಿದ್ದು. ಮೃತರ ಅಂತ್ಯ ಕ್ರಿಯೆಯನ್ನುಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತರು: ಮೃತರ ಮಕ್ಕಳು ಹಾಗೂ ಕುಟುಂಬವರ್ಗದವರು.

PUBLIC NOTICE

Notice is hereby issued to the General Public that (1) Smt. JAYAMMA, W/O. Late. Bhujagaiah N, residing at No. # 194, 2nd Stage, Neethi Marga. Siddartha Nagar, Mysuru-570 011 (2) Sri. B. SHIVAKUMAR, S/O. Late. N. Bhujagaiah, residing at No. # 905, 1st Floor, SVP Nagar, Police Layout 2nd Stage, Mysuru 570 028 (3) Smt. B. MAHADEVAMMA, W/O. Sri. B. Lingaraju & D/O. Late. Bhujagaiah N, residing at No. # 703, 14th Cross, 80 Feet Road, Chandra Layout, Bengaluru North, Bengaluru 560 072 (4) Sri. RAVI KUMAR B. S/O. Late. N. Bhujagaiah, Residing at No. # 194, 2nd Stage, Neethi Marga, Siddartha Nagar, Mysuru 570 011 (5) Smt. B. HEMALATHA, W/O. Sri. C. Chandru & D/O. Late. Bhujagaiah N. residing at No. # 691, 28 Main Road, 2nd Stage, J. P. Nagara, Mysuru 570 008 and (6) Sri. CHANDRA KUMAR S/O. Late. N. Bhujagaiah, residing at No. # D3/15, Jothi Apartment, Palatakkadu North, Tirupur, T. N. -541 501 have agreed to Sell the Schedule Property to my client/s.

Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within SEVEN (07) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE : ALL THAT PIECE AND PARCEL OF RESIDENTIAL PROPERTY BEARING No. 194, E-AASTHI No. 63-2-567-697, MEASURING EAST TO WEST 45 FEET (13.716 MTS) AND NORTH TO SOUTH 60 FEET (18.288 MTS), TOTALLY MEASURING 2700 SQUARE FEET (250.8381 SQUARE METERS), SITUATED AT NEETHI MARGA, SIDDARTHA LAYOUT, NAZARBAD MOHALLA, MYSURU COMPRISING OF BUILDING ON GROUND AND FIRST FLOOR &

BOUNDED ON:

EAST BY : PROPERTY BEARING NO. 193, WEST BY :PROPERTY BEARING NO. 195, NORTH BY : PROPERTY BEARING NO. 187 , SOUTH BY : ROAD

Sd/- M. Sanjay Jain
BBM, LLB, CCL, CMJFS
Advocate , #L-50/2A, 1st Floor, Ashoka Road, Mysuru-570001
E-mail: msj186@yahoo.co.in.
Cell: 9341464636

Place: Mysuru Date: 24/04/2025

ಸಾರ್ವಜನಿಕ ತಿಳುವಳಿಕೆ ಪತ್ರ

ಈ ಮೂಲಕ ಸಮಸ್ತ ಸಾರ್ವಜನಿಕರ ಗಮನಕ್ಕೆ/ ತಿಳುವಳಿಕೆಗೆ ಪ್ರಚಾರ ಪಡಿಸುತ್ತಿರುವುದೇನೆಂದರೆ :– ನನ್ನ ಕಕ್ಷಿದಾರರಾದ ಶ್ರೀಮತಿ ನರಸಮ್ಮ. ಎನ್ ಕೋಂ ಶ್ರೀ ಉದಯಕುಮಾರ್, ಬಿ, ಟಿ, ಬೇಯ್ರ ಗ್ರಾಮ ಮತ್ತು ಅಂಚೆ, ಮಿರ್ಲೆ ಹೋಬಳಿ, ಸಾಲಿಗ್ರಾಮ ತಾಲೂಕು. ಮೈಸೂರು ಜಿಲ್ಲೆ ರವರು ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ, ಅಂದರೆ, ಶ್ರೀ.ಎ.ಎಸ್ ಶಿವರುದ್ರಪ್ಪ, ಬಿನ್ ದಿ॥ ಶಿವಪ್ಪ, ಮತ್ತು ಇವರ ಮಗಳಾದ ಕು॥ ಲಾಹಿತ್ಯ ಎ.ಎಸ್. ಇಬ್ಬರ ವಾಸ ಅಹಲ್ಯ ಗ್ರಾಮ, ರಾಂಪುರ ಅಂಚೆ, ನಂಜನಗೂಡು ತಾ॥, ಮೈಸೂರು ಜಿಲ್ಲೆ, ಹಾಗೂ ಶ್ರೀ ಜಗದೀಶ್ ಹೆಚ್.ಬಿ. ಬಿನ್ ದಿ॥ ಬಸವರಾಜು, ಮನೆ ನಂ.572, ಮಾರೀಗುಡಿ ಹಿಂಭಾಗ, ಹಿನಕಲ್ ಗ್ರಾಮ, ಕಸಬಾ ಹೋ॥, ಮೈಸೂರು ತಾ॥ ರವರುಗಳಿಂದ ಸೂಕ್ತ ಮೌಲ್ಯಯುತವಾದ ಪ್ರತಿಫಲಕ್ಕೆ ಖರೀದಿಸುವ ಈರಾದೆಯನ್ನು ಹೊಂದಿರುವುದು ಸರಿಯಷ್ಟೆ. ಮೇಲೆ ತಿಳಿಸಿರುವ ಮಾಲೀಕರು ಮಾತ್ರ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಿಗೂ ಒಳಪಟ್ಟು ಸ್ವಾಧೀನದಲ್ಲಿದ್ದು, ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವಂತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದು ಅನುಸೂಚಿ ಸ್ವತ್ತಿನ ಸಂಭಂಧವಾಗಿ ಬೇರೆ ಯಾರಿಗಾದರೂ ಯಾವುದೇ ಹಕ್ಕು, ಆಸಕ್ತಿ, ಸ್ವಾಮ್ಯಗಳು, ತಕರಾರು ಹಾಗೂ ಹಕ್ಕೊತ್ತಾಯಗಳು ಇದ್ದಲ್ಲಿ ಈ ತಿಳುವಳಿಕೆ ಪತ್ರವು ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ದಾಖಲೇ ಸಹಿತ ನನಗೆ ಈ ಕೆಳಕಂಡ ವಿಳಾಸಕ್ಕೆ ಲಿಖಿತವಾಗಿ ತಿಳಿಸತಕ್ಕದ್ದು, ಒಂದು ವೇಳೆ ಯಾವುದೇ ತಕರಾರು ಬಾರದೇ ಇದ್ದಲ್ಲಿ ಯಾರಿಂದಲೂ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ನೋಂದಾಯಿತ ದಸ್ತಾವೇಜು ಮೂಲಕ ಕ್ರಯಕ್ಕೆ ಪಡೆಯುವವರಿದ್ದು, ಆ ನಂತರ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನನ್ನ ಕಕ್ಷಿದಾ ರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು,

ಅನುಸೂಚಿ : ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಿನಕಲ್ ಗ್ರಾಮದ ಸ್ವತ್ತಿನ ಸಂಖ್ಯೆ : 765/619, ನಿರ್ದರಣಾ ಸಂಖ್ಯೆ :765/619, ಹೂಟಗಳ್ಳಿ ನಗರಸಭೆ ದಾಖಲೆ ನಮೂನೆ 3ಎ ಪ್ರಕಾರ ಸ್ವತ್ತಿನ ಸಂಖ್ಯೆ : 9992685438, ಇದರ ವಿಸ್ತೀರ್ಣ ಪೂರ್ವ– ಪಶ್ಚಿಮ : 12.192024 ಮೀಟರ್, ಉತ್ತರ – ದಕ್ಷಿಣ : 21.336043 ಮೀಟರ್ ಒಟ್ಟು 260.1295 ಚದರ ಮೀಟರ್‌ಗಳುಳ್ಳ, ನಿವೇಶನಕ್ಕೆ ಚೆಕ್ಕುಬಂದಿ : ಪೂರ್ವಕ್ಕೆ: ಖಾಸಗಿ ಸ್ವತ್ತು ಪಶ್ಚಿಮಕ್ಕೆ : ಕೆ. ಶ್ರೀಧರ್ ರವರ ಸ್ವತ್ತು, ಉತ್ತರಕ್ಕೆ: ನಂಜಪ್ಪ ರವರ ಸ್ವತ್ತು ದಕ್ಷಿಣಕ್ಕೆ: ರಸ್ತೆ

ಸಹಿ/– ಪಿ.ವಿ. ಮನುಕುಮಾರ್
ವಕೀಲರು, ನಂ.66/1 – ಬಿ1, 1ನೇ ಮಹಡಿ,
3ನೇ ಮುಖ್ಯ ರಸ್ತೆ, 5ನೇ ಕ್ರಾಸ್ ರಸ್ತೆ,
ಸರಸ್ವತಿಪುರಂ, ಮೈಸೂರು–570 009 .
ಮೈಸೂರು: 94482 22306

ದಿನಾಂಕ: 24.04.2025
ಸ್ಥಳ: ಮೈಸೂರು

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಮಕ್ಕಳೇ, ಸಾವಿತ್ರಿ ತನ್ನ ಪತಿಗಾಗಿ ಸಾವಿನ ದೇವರು ಯಮನ ಬಳಿ ಹೋರಾಡಿ ಪತಿಯನ್ನು ಉಳಿಸಿಕೊಂಡಳು. ಈ ಕಥೆಯ ನೀತಿ ಪಾಠವೇನು?

ಗುಂಡ : ಹೆಂಡತಿಯಿಂದ ಪತಿಯನ್ನು ಬಚಾವ್ ಮಾಡಲು ಯಾವ ಯಮನಿಂದಲೂ ಸಾಧ್ಯವಿಲ್ಲ.

ಮೈಸೂರು ಮಿತ್ರ
ಶನಿವಾರ, 26 ಏಪ್ರಿಲ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಕೊಟ್ಟು ಹುಟ್ಟಲಿಲ್ಲ, ಮುಟ್ಟಿ ಪೂಜಿಸಲಿಲ್ಲ, ಸಿಟ್ಟಿನಲ್ಲಿ ಶಿವ ಬೈದರೆ, ಶಿವ ತಾನು ರೊಟ್ಟಿ ಕೊಡುವನೆ ಸರ್ವಜ್ಞ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹನಿ ಹನಿ ಸೇರಿದರೆ ಹಳ್ಳ, ತೆನೆ ತೆನೆ ಸೇರಿದರೆ ಬಳ್ಳ

ಜಾತಿ ಗಣತಿ ಅಷ್ಟೊಂದು ಕಷ್ಟವೇ!





ಮಿರ್ಲೆ ಚಂದ್ರಶೇಖರ
ಮೊ: 9916129654

> ಅಷ್ಟಕ್ಕೂ ಜಾತಿಗಣತಿ ಯಾಕಾದರೂ ಬೇಕು!, ಜಾತಿಗಳ ನಡುವೆ, ಧರ್ಮಗಳ ನಡುವೆ ವಿರಸ ಮೂಡಿಸಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದಕ್ಕಲ್ಲದೆ ಬೇರೆ ಕಾರಣ ಏನಿದೆ? ಗಣತಿ ಮಾಡಬೇಕಾಗಿರುವುದು ಜಾತಿಗಳನ್ನಲ್ಲ. ಅದಕ್ಕೂ ಮೀರಿದ ಗಣತಿಗಳು ಬಹಳಷ್ಟಿವೆ. ಅಭಿವೃದ್ಧಿಗಾಗಿ, ತ್ವರಿತ ಹಾಗೂ ವೈಜ್ಞಾನಿಕವಾಗಿ ಅಂತಹವುಗಳು ಆಗಬೇಕಾಗಿದೆ.

ಅಷ್ಟಕ್ಕೂ ಜಾತಿಗಣತಿ ಯಾಕಾದರೂ ಬೇಕು!, ಜಾತಿಗಳ ನಡುವೆ, ಧರ್ಮಗಳ ನಡುವೆ ವಿರಸ ಮೂಡಿಸಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದಕ್ಕಲ್ಲದೆ ಬೇರೆ ಕಾರಣ ಏನಿದೆ? ಗಣತಿ ಮಾಡಬೇಕಾಗಿರುವುದು ಜಾತಿಗಳನ್ನಲ್ಲ. ಅದಕ್ಕೂ ಮೀರಿದ ಗಣತಿಗಳು ಬಹಳಷ್ಟಿವೆ. ಅಭಿವೃದ್ಧಿಗಾಗಿ, ತ್ವರಿತ ಹಾಗೂ ವೈಜ್ಞಾನಿಕವಾಗಿ ಅಂತಹವುಗಳು ಆಗಬೇಕಾಗಿದೆ.

ಕೆಲವು ದಿನಗಳಿಂದ ಜಾತಿಗಣತಿಯ ಅಂಕಿ–ಸಂಖ್ಯೆಗಳ ಕುರಿತಾಗಿ ಪರ–ವಿರೋಧ ಹೇಳಿಕೆಗಳು ರಾಜ್ಯದ ಎಲ್ಲಾ ಜಾತಿಯವರಿಂದಲೂ ಬರುತ್ತಿವೆ. ಸಲ್ಲಿಸಿರುವ ವರದಿಯಲ್ಲಿ ಸಂಖ್ಯೆ ಹೆಚ್ಚಿದ್ದವರು ಗಣತಿ ಸರಿಯಾಗಿದೆ ಎಂದು ಹಾಗೂ ಕಡಿಮೆ ಇದ್ದವರು ವರದಿಯಲ್ಲಿ ತಪ್ಪಿದೆ ಎನ್ನುವುದು ಕೇಳಿ ಬರುತ್ತಿರುವ ಕೂಗು. ಮಾಧ್ಯಮಗಳಲ್ಲಿ ನಿತ್ಯವೂ ಅದೇ ದೊಡ್ಡ ಸುದ್ದಿ. ಆದರೆ ಸಮಸ್ಯೆಯ ಇತ್ಯರ್ಥದ ಬಗ್ಗೆ ಯಾರೂ ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಬಹುಶಃ ರಾಜಕೀಯದಲ್ಲಿ ಇದೊಂದು ಅಸ್ತ್ರವಾಗಿರುವುದರಿಂದ ಇದು ಬಗೆಹರಿಯುವುದು ಬೇಕಿಲ್ಲದಿರ ಬಹುದು. ನಮ್ಮ ರೈತರ ಸಮಸ್ಯೆಯೂ ಹಾಗೇ ಅಲ್ಲವೇ. ಸಮಸ್ಯೆಯು ಜೀವಂತವಾಗಿದ್ದರೆ ರಾಜಕೀಯ ಚದುರಂಗದಾಟಕ್ಕೆ ಅನುಕೂಲವಾಗಬಹುದೇನೊ!.

ಕುವೆಂಪುರವರು ನೀಡಿರುವ ಸಂದೇಶದಂತೆ ವಿಶ್ವಮಾನವನಾಗಿ ಹುಟ್ಟಿದ ಮಗುವನ್ನು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿಗಳಿಂದ ಬಂಧಿಸಿ ಅಲ್ಪಮಾನವನನ್ನಾಗಿಸುವ ಬದಲು ಅವುಗಳಿಂದ ಮುಕ್ತಗೊಳಿಸಿ ವಿಶ್ವಮಾನವನನ್ನಾಗಿಸುವುದು ಒಳಿತಲ್ಲವೇ.

ಪ್ರಜಾಪ್ರಭುತ್ವವನ್ನು ಜಾತಿಯ ವಿಂಗಡಣೆ ಇಲ್ಲದೆ ನಡೆಸಲಾಗದಂತೆ ವ್ಯವಸ್ಥಿತವಾಗಿ ನಿರ್ಮಿಸಿ ಆಗಿದೆ. ಜಾತಿಯ ಹೆಸರಿನಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು, ಜಾತಿಯ ಹೆಸರಿನಲ್ಲಿ ಮತ ಕೇಳುವುದು, ಜಾತಿಯ ಹೆಸರಿನಲ್ಲಿ ಅಧಿಕಾರ ಪಡೆಯುವುದನ್ನು ನಿಲ್ಲಿಸುವವರೆಗೂ ಜಾತಿ ಜೀವಂತವಾಗಿರುತ್ತದೆ. ಹಾಗಾಗಿ ಬಹುಶಃ ಜಾತಿ ಚಿರಾಯು!.

ನಾವು ಗಣತಿ ಮಾಡಬೇಕಾದವು ಬೇರೆಯೇ ಇವೆ. ಮೊದಲು ಎರಡು ದಶಕಗಳಿಂದ ಆತ್ಮಹತ್ಯೆಗೆ ಶರಣಾದ ಅನ್ನದಾತರ ಗಣತಿ. ಹಾಗೆಯೇ ಕೃಷಿಕನ ಜೀವನವನ್ನು ಹೇಗೆ ಉಜ್ವಲಗೊಳಿಸಬಹುದು ಎಂಬುದರ ಗಣತಿ.

ಪದವಿಗಳನ್ನು ಪಡೆದು ನಿರುದ್ಯೋಗಿಯಾಗಿ ವಯಸ್ಸು ಏರುತ್ತಿರುವ ಯುವಕರ ಗಣತಿಯೂ ಆಗಬೇಕಾಗಿದೆ. ಕಾಲೇಜಿನಲ್ಲಿ ಕಲಿತ ವಿದ್ಯೆಯ ಜೊತೆಗೆ ಸ್ವತಂತ್ರವಾಗಿ ಉದ್ಯೋಗ ಸೃಷ್ಟಿಸಿಕೊಳ್ಳುವ ಕೌಶಲ್ಯವನ್ನು ಕಲಿಸಿಯೂ ಪ್ರಾರಂಭಿಕ ಹಣಕಾಸಿನ ಸಹಾಯ ಕೊಟ್ಟು ದುಡಿಮೆಯ ದಾರಿ ತೋರಿಸುವ ಬಗ್ಗೆಯೂ ಗಣತಿಯಾಗಬೇಕಿದೆ.

ಮಿತವಾಗಿ ನೀರನ್ನು ಬಳಸಿ ಅನ್ನುವ ಬದಲು ಜನಸಂಖ್ಯೆಗೆ ಅನುಗುಣವಾಗಿ ಸಾಕಷ್ಟು ನೀರಿನ ಲಭ್ಯತೆ ಹಾಗೂ ಸಂಗ್ರಹಣೆಯ ಕುರಿತ ಗಣತಿ.

ಅತಿವೃಷ್ಟಿ, ಅನಾವೃಷ್ಟಿ, ನೈಸರ್ಗಿಕ ವಿಕೋಪಗಳ ವಿರುದ್ಧ ಹೋರಾಡುವ ಸಾಮರ್ಥ್ಯ ಹಾಗೂ ಹೇಗೆ ವೈಜ್ಞಾನಿಕವಾಗಿ ಪರಿಹರಿಸಿಕೊಳ್ಳಬಹುದು ಎಂಬುದರ ಗಣತಿ ಆದರೆ ಒಳ್ಳೆಯದು.

ಪ್ರತೀ ವರ್ಷ ಮುಚ್ಚುತ್ತಿರುವ ಸರ್ಕಾರಿ ಕನ್ನಡ ಶಾಲೆಗಳ ಗಣತಿ ಹಾಗೂ ಕನ್ನಡ ಮಾಧ್ಯಮದಲ್ಲಿ ವಿದ್ಯೆ ಕಲಿತ ಮಕ್ಕಳ ಭವಿಷ್ಯಕ್ಕೆ ಭದ್ರತೆ ನೀಡುವ ಗಣತಿ ಅನಿವಾರ್ಯ.

ಹಣಕಾಸಿನ ಬಲಾಢ್ಯತೆ ಇಲ್ಲದವರು ಚಿಕಿತ್ಸೆ ಪಡೆಯಲು ಸಾಧ್ಯವಾಗದೆ ಅನಾರೋಗ್ಯದಿಂದ ನರಳುತ್ತಿದ್ದಾರೆ. ಮೊದಲು ಆ ಗಣತಿ ಆಗಲಿ. ತಾರತಮ್ಯವಿಲ್ಲದೆ ಎಲ್ಲರಿಗೂ ಉಚಿತ ಚಿಕಿತ್ಸೆ ನೀಡುವ ಕುರಿತು ಗಣತಿ.

ಶಾಸಕರು, ಸಂಸದರು, ಮಂತ್ರಿ ಮಹೋದಯರ ಆಸ್ತಿ ಎಷ್ಟು ಹೆಚ್ಚಾಗಿದೆ ಎಂಬುದರ ಗಣತಿ ಅವಶ್ಯಕವಾಗಿ ಆಗಬೇಕಲ್ಲವೆ. ಅಧಿಕಾರಿಗಳು ಭ್ರಷ್ಟಾಚಾರ ಎಸಗಿ ಲೂಟಿ ಮಾಡಿದ ಹಣದ ಗಣತಿ ಹಾಗೂ ಇವರುಗಳು ಸಮಾಜಕ್ಕೆ ಮಾಡಿದ ಸೇವೆಯ ಪ್ರಮಾಣ ಕುರಿತಾದ ಗಣತಿ ಅತ್ಯವಶ್ಯವಲ್ಲವೆ!

ರಾಜ್ಯದಲ್ಲಿ ಬೃಹತ್ ಯೋಜನೆಯ ಹೆಸರಲ್ಲಿ ಕೈಗೊಳ್ಳುವ ಹೊಸಹೊಸ ಕಾಮಗಾರಿಗಳಲ್ಲಿ ಅಪವ್ಯಯವಾದ ಇಲ್ಲವೆ ಕೊಳ್ಳೆ ಹೊಡೆದ ಹಣದ ಗಣತಿ ಬೇಕೇ ಬೇಕು. ಅದರ ಜೊತೆಗೆ ಅವಶ್ಯಕವಿಲ್ಲದ ಕಡೆಗಳಲ್ಲಿ ಅನಾವಶ್ಯಕವಾಗಿ ಹಾಗೂ ಪ್ರತಿಷ್ಠೆಗಾಗಿ ಕೈಗೊಂಡು ವಿಫಲವಾಗಿರುವ ಬಾರೀ ಯೋಜನೆಗಳ ಗಣತಿ ಆಗಲಿ ಬಿಡಿ.

ಬೆಂಗಳೂರನ್ನೇ ಕೇಂದ್ರೀಕರಿಸಿ ಹೊಸ ಉದ್ಯಮವನ್ನು ಸ್ಥಾಪಿಸುವ ಬದಲು ತಾಲೂಕು ಕೇಂದ್ರಗಳಲ್ಲಿ ಅಲ್ಲಿನ ಸಂಪನ್ಮೂಲಗಳಿಗೆ ಪೂರಕವಾದ ಉದ್ಯಮಗಳನ್ನು ಸ್ಥಾಪಿಸುವ ಗಣತಿಯಾಗಲಿ.

ಮತಕ್ಕಾಗಿ ಕಣ್ಣಿಗೆ ಮಣ್ಣೆರಚಿ ನೀರು ಕೊಡುವೆನೆಂದು ಕೋಟಿಕೋಟಿ ಹಣ ಖರ್ಚು ಮಾಡಿ ತೋಡಿದ ಬಾವಿ, ನಾಲೆಗಳು ನೀರು ಕಾಣದೆ ವ್ಯರ್ಥವಾಗಿರುವ ಉದ್ದದ ಗಣತಿ ಹಾಗೂ ಜಲಾಶಯಗಳ ನಿರ್ವಹಣೆಯಲ್ಲಿ ಆಗುತ್ತಿರುವ ಲೋಪಗಳ ಗಣತಿ.

ಅಕ್ರಮವಾಗಿ ಕಬಳಿಸಿರುವ ಸರ್ಕಾರಿ ಜಮೀನು, ಗೋಮಾಳಗಳು, ಸ್ಮಶಾನಗಳು, ಕೆರೆಯಂಗಳ ಮುಂತಾದವುಗಳ ಗಣತಿ... ಹೀಗೆ ಬೇಕಾದಷ್ಟು ಅವಶ್ಯವಾಗಿ ಆಗಬೇಕಾದ ಗಣತಿ ಬಿಟ್ಟು ಈಗ ಅರೆಬೆಂದ ಅನ್ನದಂತಹ ಗಣತಿ ಬೇಕಿತ್ತಾ!

ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಮಾಡಬೇಕಾಗಿರುವ ಗಣತಿಗಳು ಬಹಳಷ್ಟಿವೆ, ಅವುಗಳೆಲ್ಲವನ್ನು ಬದಿಗಿಟ್ಟು ಸರ್ವಸಮ್ಮತವಲ್ಲದ ಜಾತಿಗಣತಿಯು ವೈಮನಸ್ಸಿಗೆ ಕಾರಣವಾಗಿದೆ. ಇದೊಂದು ಸಮಾಜಕ್ಕೆ ಇಕ್ಕಮದ್ದು ಹಾಕಿದಂತಾಗಿದೆ. ಇಟ್ಟ ಮದ್ದಿನಿಂದ ಸುಧಾರಿಸಿಕೊಳ್ಳಲು ಕಾಲಾವಕಾಶ ಬೇಕಾಗುತ್ತದೆ. ಇಲ್ಲಿ ಹೂಸೂರು ಕೃಷ್ಣಮೂರ್ತಿ ರಚನೆಯ ಕಾವ್ಯ ನೆನಪಾಗುವುದು; ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ, ಮತದಲ್ಲಿ ಮೇಲ್ಯಾವುದೋ, ಹುಟ್ಟಿ ಸಾಯುವ ಮನ್ಸಾ ಮನ್ಸಾನ್ ಮಧ್ಯ ಕೀಳ್ಯಾವ್ದು ಮೇಲ್ಯಾವುದೋ!.

ಜಾತಿ ವ್ಯವಸ್ಥೆಗೆ ರಾಜಕೀಯ ಪಕ್ಷಗಳು ಅಷ್ಟೊಂದು ಮಹತ್ವ ಕೊಡುತ್ತಿರು ವಾಗ ಮಾಡುವ ಗಣತಿಯು ಅಷ್ಟೇ ನಿಖರವಾಗಿ ಭಿನ್ನಾಭಿಪ್ರಾಯ ಬರದ ಹಾಗೆ ಇರಬೇಕಲ್ಲವೇ? ನಾಲ್ಕೈದು ದಶಕಗಳ ಹಿಂದಿನ ಕಾಲಘಟ್ಟದಲ್ಲಿ ಕಂಪ್ಯೂ ಟರ್ ಹಾಗೂ ಅಂತರ್ಜಾಲದ ಉಪಯೋಗ ಇಂದಿನಂತೆ ಅಭಿವೃದ್ಧಿಗೊಂಡಿರಲಿಲ್ಲ.

ಇಂದು ಡಿಜಿಟಲ್ ಯುಗ, ಹಾಗಾಗಿ ಎಲ್ಲವೂ ಸರಳವಾಗಿದೆ. ಚುನಾವಣೆಗಳನ್ನು ನಡೆಸುವಾಗ ಬಹಳಷ್ಟು ದಿನಗಳ ಸಿದ್ದತೆ ನಡೆಸಿ, ಸ್ಪಷ್ಟವಾಗಿ ಫಲಿತಾಂಶ ಘೋಷಿಸಿ ಸರ್ಕಾರವನ್ನು ರಚಿಸುವ ಸಾಮರ್ಥ್ಯ ಇರುವ ನಮಗೆ ಜನಗಣತಿ ಕೆಲಸವು ಅದರ ಮುಂದೆ ಏನೇನೂ ಅಲ್ಲ.

ಅಂಕಿಅಂಶಗಳ ಪ್ರಕಾರ ಶೇಕಡ ನೂರರಷ್ಟು ಜನರಿಗೆ ಆಧಾರ್ ಕಾರ್ಡ್ ವಿತರಣೆಯಾಗಿದೆ. ಜಾತಿವಾರು ಜನಗಣತಿಗಾಗಿ ಬೇಕಾಗುವ ಅಂಶಗಳನ್ನು ಅಳವಡಿಸಿ ವಿಶೇಷವಾದ ಸಾಫ್ಟ್‌ವೇರ್ ಅಭಿವೃದ್ಧಿಗೊಳಿಸಿ, ರಾಜ್ಯದಲ್ಲಿ ಇರುವ ಎಲ್ಲಾ ಮತಕೇಂದ್ರಗಳಿಗೆ(ಚುನಾವಣಾ ಆಯೋಗದ ಅನುಸಾರ ಮತಗಟ್ಟೆಗಳ ಸಂಖ್ಯೆ 58282) ಡಿಜಿಟಲ್ ಉಪಕರಣದೊಂದಿಗೆ ಅಧಿಕಾರಿಗಳನ್ನು ನಿಯೋಜಿಸಿ, ಅಗತ್ಯ ಇದ್ದಷ್ಟು ಕಾಲಾವಕಾಶ ಕೊಟ್ಟು ಆಧಾರ್ ಲಿಂಕ್ ನೊಟ್ಟಿಗೆ ಫೋಟೋ ಸಹಿತ ನೋಂದಾಯಿಸಿಕೊಳ್ಳುವುದರಿಂದ ಗಣತಿ ಸುಗಮವಾಗುವುದು.

ಈಗಾಗಲೇ 160 ಕೋಟಿ ಖರ್ಚು ಮಾಡಿಯೂ ಮಾಡಿದ ಗಣತಿಯು ಸರ್ವಸಮ್ಮತವಾಗಿಲ್ಲ ಹಾಗೂ ಸ್ಪಷ್ಟತೆಯನ್ನು ನಿರೂಪಿಸಿಕೊಳ್ಳುವುದಕ್ಕೂ ಸಾಧ್ಯ ಇಲ್ಲದಂತಾಗಿದೆ. ಅಭಿವೃದ್ಧಿಪಡಿಸಿದ ಸಾಫ್ಟ್‌ವೇರ್ ಮೂಲಕ ರಾಜ್ಯದ ಪ್ರತಿಯೊಬ್ಬ ಪ್ರಜೆಯು ಕುಳಿತಲ್ಲಿಯೇ ತನ್ನ ಹೆಸರು ಸೇರಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬಹುದು. ಆಧಾರ್ ನಂಬರು ಇರುವಾಗ ಅದರೊಟ್ಟಿಗೆ ನಮ್ಮ ಇಡೀ ಕುಲವನ್ನೇ ಲಿಂಕ್ ಮಾಡಿಸುವುದರಿಂದ ಎಲ್ಲವೂ ತೆರೆದ ಪುಟದಂತಿರುವುದು. ಸರ್ಕಾರದ ಇಲಾಖೆಗಳಿಗೆ ಇದು ಸಾಧ್ಯವಾಗದಿದ್ದರೆ ನಮ್ಮಲ್ಲಿ ಪರಿಣಿತಿ ಹೊಂದಿರುವ ಸಾಫ್ಟ್‌ವೇರ್ ಕಂಪನಿಗಳಿಗೆ ವಹಿಸುವುದರಿಂದ 100% ಸರಿಯಾದ ಫಲಿತಾಂಶವನ್ನು ಸಿದ್ದಪಡಿಸಿ ಅಂಜಿಕೆ ಅಳುಕು ಇಲ್ಲದೆ ಸಾರ್ವಜನಿಕವಾಗಿ ಜಾತಿಗಣತಿ ವರದಿಯನ್ನು ವೆಬ್‌ಸೈಟ್‌ನಲ್ಲಿ ಬಿಡಬಹುದಾಗಿದೆ. ಭದ್ರತೆ ಎನ್ನುವುದಾದರೆ ಲಾಕ್ ಮಾಡಿ ಇಟ್ಟಿಸಿದವರು, ಸಂಶಯಕ್ಕೆ ಒಳಗಾಗುವವರು ತಮ್ಮ ಆಧಾರ್ ಸಂಖ್ಯೆ ನಮೂದಿಸಿ ಮಾಹಿತಿ ಪಡೆಯುವಂತೆ ತಂತ್ರಾಂಶ ಸಿದ್ದಪಡಿಸಲಿ. ಇವತ್ತಿನ ತಂತ್ರಜ್ಞಾನವು ನಿಖರತೆಯಲ್ಲಿ ಎಷ್ಟೊಂದು ಮುಂದುವರಿದಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವಂತಹದ್ದೆ. ಅಂಥದ್ದರಲ್ಲಿ ಜಾತಿಗಣತಿಯಲ್ಲಿ ಏಕಿಷ್ಟು ಗೊಂದಲ, ನಿಮಗೆ ಅನಿಸುತ್ತಿಲ್ಲವೆ ಇಲ್ಲಿ ಏನೋ ಮರ್ಮ ಅಡಗಿದೆ, ಗಣತಿಯೂ ಅಣತಿಯಂತೆ ನಡೆದಿದೆ ಎಂದು!.

ನಿಮ್ಮ ಪತ್ರಗಳು

ರಾಜ್ಯ ಸರ್ಕಾರಕ್ಕೆ ನನ್ನದೊಂದು ಮನವಿ

ಮಾನ್ಯರೆ,

ಕರ್ನಾಟಕ ಸರ್ಕಾರ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಹಾಗೂ ಕೇಂದ್ರ ಸರ್ಕಾರ ಪಡಿತರ ಚೀಟಿದಾರರಿಗೆ ನೀಡುತ್ತಿರುವ ಅಕ್ಕಿಯನ್ನು ಪ್ರತಿ ತಿಂಗಳು ಪಡೆಯಬೇಕಾದರೆ ಹೆಬ್ಬೆಟ್ಟಿನ ಗುರುತನ್ನು ಕಡ್ಡಾಯ ಮಾಡಿದ್ದು ಅನೇಕ ಪಡಿತರ ಚೀಟಿದಾರರಿಗೆ ತುಂಬಾ ಅನಾನುಕೂಲವಾಗಿದೆ.

ಇದಲ್ಲದೆ ಓಟಿಪಿ ನಿಯಮವನ್ನು ರದ್ದುಗೊಳಿಸಿದ್ದು ತುಂಬಾ ಸಮಸ್ಯೆಯಾಗಿದೆ. ಗ್ರಾಮೀಣ ಭಾಗದ ಜನರು ಪ್ರತಿನಿತ್ಯ ಬೇರೆ ಬೇರೆ ಪ್ರದೇಶಗಳಿಗೆ ಕೂಲಿಗಾಗಿ ತೆರಳುವುದರಿಂದ ಈ ಕೂಲಿಯನ್ನೇ ಬಿಟ್ಟು ಒಂದು ದಿನ ಅಕ್ಕಿ ಪಡೆಯಲೆಂದೇ ನ್ಯಾಯಬೆಲೆ ಅಂಗಡಿಗೆ ಅಲೆಯಬೇಕಾಗಿರುತ್ತದೆ. ಒಂದು ದಿನವಾದರೆ ಸರಿ ನೆಟ್‌ವರ್ಕ್ ಸಮಸ್ಯೆ ಆದರೆ ಮತ್ತೊಂದು ದಿನ ಹೋಗಬೇಕಾಗುತ್ತದೆ. ಇದರಿಂದ ಎರಡು ಮತ್ತು ಮೂರು ದಿನಗಳು ಒಂದು ತಿಂಗಳಿನಲ್ಲಿ ಇದಕ್ಕೆ ಮೀಸಲಿಡುವುದರಿಂದ ಆ ಮೂರು ದಿನಗಳ ಕೂಲಿ ಇವರಿಗೆ ದೊರೆಯುವುದಿಲ್ಲ. ಕೂಲಿಯನ್ನೇ ನಂಬಿಕೊಂಡು ಜೀವನ ನಡೆಸುವವರು ಸಂಕಷ್ಟಕ್ಕೀಡಾಗುತ್ತಿದ್ದಾರೆ. ನ್ಯಾಯಬೆಲೆ ಅಂಗಡಿಗಳಿಗೆ ಅಕ್ಕಿ ತೆಗೆದುಕೊಳ್ಳಲು ಮೂರ್ನಾಲ್ಕು ದಿನ ಅಲೆಯಬೇಕಾಗುತ್ತದೆ. ಇದು ಒಂದು ಕಡೆ ಸಮಸ್ಯೆ ಆದರೆ ಮತ್ತೊಂದು ಸಮಸ್ಯೆ ಏನೆಂದರೆ ಗ್ರಾಮೀಣ ಭಾಗದಿಂದ ನಗರ ಪ್ರದೇಶಗಳಿಗೆ ಬದುಕು ಕಟ್ಟಿಕೊಳ್ಳಲು ವಲಸೆ ಹೋಗಿರುತ್ತಾರೆ. ಅದರಲ್ಲೂ ದೂರದ ಬೆಂಗಳೂರಿನಲ್ಲಿರುವ ಪಡಿತರ ಚೀಟಿದಾರರು ತುಂಬಾ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ. ಪಡಿತರ ಚೀಟಿದಾರ ಸದಸ್ಯರೇ ಹೋಗಿ ಹೆಬ್ಬೆಟ್ಟಿನ ಗುರುತನ್ನು ನೀಡಿ ಅಕ್ಕಿಯನ್ನು ಪಡೆಯಬೇಕಾಗಿರುತ್ತದೆ.

ಭಾರತದ ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಚೀಟಿದಾರರು ಅಕ್ಕಿಯನ್ನು ತೆಗೆದುಕೊಳ್ಳಬಹುದು ಎಂಬ ನಿಯಮವಿದ್ದರೂ, ಕೆಲವು ನ್ಯಾಯಬೆಲೆ ಅಂಗಡಿಗಳಲ್ಲಿ ದಾಸ್ತಾನು ಇಲ್ಲವೆಂದು ಪಡಿತರದಾರರಿಗೆ ಅಕ್ಕಿಯನ್ನು ನೀಡುತ್ತಿಲ್ಲ. ತಮ್ಮ ಸ್ವ ಗ್ರಾಮಗಳಿಗೆ ತೆರಳಿ ಅಕ್ಕಿಯನ್ನು ಪಡೆಯಬೇಕಾಗಿರುತ್ತದೆ. ಇದರಿಂದ ಅವರಿಗೆ ತುಂಬಾ ಅನಾನುಕೂಲವಾಗುತ್ತಿದೆ. ಆದ್ದರಿಂದ ಪಡಿತರ ಚೀಟಿದಾರರು ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದು ಮೊದಲೆಲ್ಲಾ ಓಟಿಪಿ ಮುಖಾಂತರ ಅಕ್ಕಿಯನ್ನು ನೀಡುತ್ತಿದ್ದರು. ಇದು ಪಡಿತರ ಚೀಟಿದಾರರಿಗೆ ಸುಲಭ ಮತ್ತು ಅನುಕೂಲವಾಗಿತ್ತು. ಆದರೆ ಮೂರ್ನಾಲ್ಕು ತಿಂಗಳಿಂದ ಓಟಿಪಿ ರದ್ದುಗೊಳಿಸಿದ್ದು ತುಂಬಾ ತೊಂದರೆಯಾಗಿದೆ. ಆದ್ದರಿಂದ ಮೊದಲಿನ ನಿಯಮವನ್ನೇ ಜಾರಿಗೊಳಿಸಬೇಕೆಂದು ಪಡಿತರ ಚೀಟಿದಾರರು ತಮ್ಮ ನೋವನ್ನು ಹೊರ ಹಾಕುತ್ತಿದ್ದಾರೆ. ಜನರಲ್ಲಿ ಇನ್ನೂ ಒಂದು ಜಿಜ್ಞಾಸೆ ಮೂಡಿದೆ. ಅದೇನೆಂದರೆ ಸರ್ಕಾರವು ಅಕ್ಕಿಯನ್ನು ಕೊಡಬೇಕಾಗುತ್ತದೆ ಎಂಬ ನಾಟಕ ಮಾಡುತ್ತಿದೆ ಎಂಬ ಸರ್ಕಾರದ ವಿರುದ್ಧ ಆರೋಪಗಳು ಅಲ್ಲಲ್ಲಿ ಕೇಳಿ ಬರುತ್ತಿವೆ. ಸರ್ಕಾರ ಯಾವುದೇ ನಿಯಮಗಳನ್ನು ಮಾಡಿದರು ಸಾರ್ವಜನಿಕರಿಗೆ ಜನಸ್ನೇಹಿಯಾಗಿ ಅನುಕೂಲವಾಗುವಂತೆ ಇರಬೇಕೇ ವಿನಃ ಅದರಿಂದ ತೊಂದರೆಯನ್ನು ಅನುಭವಿಸಬಾರದು ಎಂಬುದೇ ನನ್ನ ಅನಿಸಿಕೆ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಶ್ರೀ ರಾಚಪ್ಪಾಜಿ ಹಾಗೂ ಶ್ರೀ ಸಿದ್ದಪ್ಪಾಜಿ ಕ್ಷೇತ್ರಗಳ ಅಭಿವೃದ್ಧಿ ಪ್ರಾಧಿಕಾರ ರಚನೆ ಸಲ್ಲದು

ಮಾನ್ಯರೆ,

ಶ್ರೀ ಕ್ಷೇತ್ರ ಮಲೆಮಾದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿಗಳು ಕೊಳ್ಳೇಗಾಲ ತಾಲೂಕಿನ ಚಿಕ್ಕಲೂರಿನ ಶ್ರೀಕ್ಷೇತ್ರ ಮಂಟೇಸ್ವಾಮಿ ಶ್ರೀ ರಾಚಪ್ಪಾಜಿ ಹಾಗೂ ಶ್ರೀ ಸಿದ್ದಪ್ಪಾಜಿ ಕ್ಷೇತ್ರಗಳ ಅಭಿವೃದ್ಧಿ ಪ್ರಾಧಿಕಾರ ರಚಿಸಲು ತೀರ್ಮಾನಿಸಿರುವುದು ಖಂಡನೀಯ.

ಈ ಕ್ಷೇತ್ರಗಳು ಜನಪ್ರಿಯವಾಗಿದ್ದು ಹಾಗೂ ಕ್ಷೇತ್ರ ಬಗ್ಗೆ ಈ ಭಾಗದ ಜನರಲ್ಲಿ ಅಪಾರವಾದ ಭಕ್ತಿ ಭಾವವಿದೆ. ಈ ಭಾಗದ ಜನರ ಭಾವನೆಗಳಿಗೆ ಬೆಲೆ ಕೊಟ್ಟು ಮುಖ್ಯಮಂತ್ರಿಗಳು ಸಚಿವ ಸಂಪುಟದ ನಿರ್ಧಾರವನ್ನು ಮರುಪರಿಶೀಲಿಸಿ ಪ್ರಾಧಿಕಾರ ರಚನೆ ನಿರ್ಣಯವನ್ನು ಹಿಂಪಡೆದು ಈ ಭಾಗದ ಭಕ್ತರ ಭಾವನೆಗಳನ್ನು ಗೌರವಿಸಬೇಕೆಂದು ಹಾಗೂ ಪ್ರಾಧಿಕಾರ ರಚನೆ ನಿರ್ಧಾರದಿಂದ ಹಿಂದೆ ಸರಿಯಬೇಕೆಂದು ಈ ಮೂಲಕ ಮನವಿ. –ಜಿ. ಸತೀಶ್ ಕುಮಾರ್, ತಿಲಕ್ ನಗರ, ಮೈಸೂರು

ಸಂಚಾರ ವಿಭಾಗದ ಪೊಲೀಸರಿಗೆ ಮನವಿ



ಮಾನ್ಯರೇ,

ಈ ಚಿತ್ರದಲ್ಲಿ ಆಟೋ ಚಲಾಯಿಸುತ್ತಿರುವ ಬಾಲಕನ ವಯಸ್ಸು 15ರ ಆಸುಪಾಸಿನಲ್ಲಿರಬಹುದು. ಹೊರ ವರ್ತುಲ ರಸ್ತೆಯಲ್ಲಿ ಕಂಡು ಬಂದ ದೃಶ್ಯವಿದು. ಈ ರೀತಿಯ ಚಾಲನೆ ಪೂರ್ವ ಭಾಗದ ರಿಂಗ್ ರಸ್ತೆಯಲ್ಲಿ ಸರ್ವೇ ಸಾಮಾನ್ಯ. ಇನ್ನು ಸಮವಸ್ತ್ರ ಧರಿಸದ ಚಾಲಕರನ್ನಂತೂ ಲೆಕ್ಕ ಹಾಕಲು ಸಾಧ್ಯವಿಲ್ಲ. ಈ ರೀತಿಯ ಚಾಲನೆಯಿಂದ ಅನಾಹುತ ಆಗುವ ಮುನ್ನ ತಡೆಯಬೇಕೆಂದು ಸಂಚಾರ ವಿಭಾಗದ ಪೊಲೀಸರಿಗೆ ಈ ಮೂಲಕ ಮನವಿ.

– ಜಗದೀಶ ಬಿ ಹೊಸೂರು, ಜೆಎಸ್‌ಎಸ್ ನಗರ, ಮೈಸೂರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಅವಮಾನ ಖಂಡನೀಯ



ಮಾನ್ಯರೆ,

ಮೈಸೂರು ತಾಲೂಕು ವಾಜಮಂಗಲದಲ್ಲಿ ಇತ್ತೀಚೆಗೆ ಸಂವಿಧಾನ ಶಿಲ್ಪಿ, ಭಾರತರತ್ನ, ವಿಶ್ವಜ್ಞಾನಿ, ಮಹಾಮಾನವತಾವಾದಿ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಶಾಂತಿ ಸ್ವರೂಪಿ ಬುದ್ಧರ ಭಾವಚಿತ್ರವನ್ನು ವಿರೂಪಗೊಳಿಸಿರುವುದು ಖಂಡನೀಯ. ಇದು ಸಂವಿಧಾನಕ್ಕೆ ತೋರಿದ ಅಗೌರವ. ಇಂತಹ ಹೀನ ಮನಸ್ಸಿನ ಸಮಾಜಘಾತುಕ ವ್ಯಕ್ತಿಗಳನ್ನು ಕೂಡಲೇ ಬಂಧಿಸಿ ಶಿಕ್ಷೆ ನೀಡಬೇಕು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಸರಿ ಸಮಾನರು. ಜಾತಿ–ಭೇದ, ವರ್ಗವನ್ನು ಬಿಟ್ಟು ಸಾಮರಸ್ಯದೊಂದಿಗೆ ಬದುಕನ್ನು ನಡೆಸಬೇಕು ಎಂದು ಸಂವಿಧಾನದಲ್ಲಿಯೇ ನಮೂದಿಸಿರುವ ಬಾಬಾ ಸಾಹೇಬರ ತತ್ವ ಸಿದ್ಧಾಂತಗಳನ್ನು ಪಾಲಿಸಬೇಕು. ಇಲ್ಲದಿದ್ದರೆ ಸಮಾಜದ ಕಟ್ಟಕಡೆಯ ವ್ಯಕ್ತಿ ಜೀವನ ನಡೆಸಲು ಸಾಧ್ಯವಿಲ್ಲ. ಇದನ್ನು ನಾವುಗಳು ಮೊದಲು ಅರಿತು ನಡೆಯಬೇಕು. ಆಗಾಗ್ಗೆ ಇಂತಹ ಶಾಂತಿಕದಡುವ ಕೆಲಸ ಮಾಡುತ್ತಿರುವ ದುಷ್ಕರ್ಮಿಗಳನ್ನು ಬಂಧಿಸಿ ಶಿಕ್ಷೆ ನೀಡಬೇಕು ಇಲ್ಲದಿದ್ದರೆ ರಾಜ್ಯಾದ್ಯಂತ ಶಾಂತಿ ಪ್ರತಿಭಟನೆ ನಡೆಸಲಾಗುವುದು ಎಂದು ಸರ್ಕಾರಕ್ಕೆ ಎಚ್ಚರಿಸುತ್ತೇವೆ.

–ಸ್ವಾಮಿ ಎಂ. (ರವಿ) ಧನಗಳ್ಳಿ, ಚಾಮುಂಡೇಶ್ವರಿ ಕ್ಷೇತ್ರ ಬಿಜೆಪಿ ಎಸ್.ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ

ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದೇ ಕಾಂಗ್ರೆಸ್: ಡಿಕೆಶಿ ಘಂಟಾಘೋಷಣೆ

ಪಕ್ಷದ ಯುವ ಕಾರ್ಯಕರ್ತರಿಗೆ ಕಾಂಗ್ರೆಸ್ ಪಾಠ



ಯುವ ಕಾಂಗ್ರೆಸ್‌ನ 'ಯುವ ಕ್ರಾಂತಿ ಬುನಿಯಾದಿ' ತರಬೇತಿ ಕಾರ್ಯಾಗಾರದಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿದರು.

ಮೈಸೂರು, ಏ.25(ಎಂಕೆ)– ಕಾಂಗ್ರೆಸ್ ಶಕ್ತಿಯೇ ಈ ದೇಶದ ಶಕ್ತಿ. ಕಾಂಗ್ರೆಸ್ ಇತಿಹಾಸ ಈ ದೇಶದ ಇತಿಹಾಸವಾಗಿದ್ದು, ಈ ದೇಶಕ್ಕೆ ರಾಷ್ಟ್ರ ಧ್ವಜ, ರಾಷ್ಟ್ರಗೀತೆ ಹಾಗೂ ಸಂವಿಧಾನ ಕೊಟ್ಟಿದ್ದು ಕಾಂಗ್ರೆಸ್. ಸ್ವಾತಂತ್ರ್ಯ ತಂದುಕೊಟ್ಟಿದ್ದು ಕೂಡ ಕಾಂಗ್ರೆಸ್ ಪಾರ್ಟಿಯೇ ಎಂಬುದನ್ನು ಮೊದಲು ಅರ್ಥಮಾಡಿಕೊಳ್ಳಬೇಕು ಎಂದು ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಯುವ ಕಾಂಗ್ರೆಸ್ ಕಾರ್ಯಕರ್ತರಿಗೆ ಪಾಠ ಮಾಡಿದರು.

ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿರುವ 3 ದಿನಗಳ 'ಯುವ ಕ್ರಾಂತಿ ಬುನಿಯಾದಿ' ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಅಂಗನವಾಡಿ ಕಾರ್ಯಕ್ರಮ ತಂದಿದ್ದು ಇಂದಿರಾಗಾಂಧಿ, ಆಶಾ ಕಾರ್ಯಕರ್ತೆ ಕಾರ್ಯಕ್ರಮ ತಂದಿದ್ದು ಮನಮೋಹನ್ ಸಿಂಗ್, ಸಿಇಟಿ ಪರೀಕ್ಷೆ ಬಂದಿದ್ದು ವೀರಪ್ಪ ಮೊಯ್ಲಿ ಅವರು ಸಿಎಂ ಆಗಿದ್ದಾಗ. ಇಂತಹ ಒಂದೇ ಒಂದು ಸ್ಮರಿಸುವ ಕಾರ್ಯಕ್ರಮವನ್ನು ಬಿಜೆಪಿ ತಂದಿಲ್ಲ. ಬಿಜೆಪಿ ಜನರ ಭಾವನೆಗಳ ಮೇಲೆ ರಾಜಕೀಯ ಮಾಡುತ್ತಿದೆ. ಆದರೆ ಕಾಂಗ್ರೆಸ್ ಜನರ ಬದುಕನ್ನು ಸುಧಾರಿಸುವ ನಿಟ್ಟಿನಲ್ಲಿ ರಾಜಕೀಯ ಮಾಡುತ್ತಿದೆ ಎಂದರು.

ಕಾಂಗ್ರೆಸ್ ಪಕ್ಷ ಯಾವಾಗಲೇ ಅಧಿಕಾರಕ್ಕೆ ಬಂದರೂ ಎಲ್ಲಾ ವರ್ಗದವರಿಗೂ ಅವಕಾಶ ನೀಡಿದೆ. ಪಂಚ ಗ್ಯಾರಂಟಿಗಳನ್ನು ಕೊಟ್ಟಿರುವುದು ಎಲ್ಲರಿಗಾಗಿಯೇ ಹೊರತು ಕೆಲವರಿಗಾಗಿ ಅಲ್ಲ. ಕಲಂ 371ಜೆ ಕಾಯ್ದೆ ಜಾರಿಗೊಳಿಸಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಗಣನೀಯವಾಗಿ ಅಭಿವೃದ್ಧಿಯ ಕ್ರಾಂತಿಗೆ ನೆರವಾಗಿದ್ದು ಕಾಂಗ್ರೆಸ್ ಎಂದು ತಿಳಿಸಿದರು.

ರಾಜಕೀಯ ಸಾಧ್ಯತೆಗಳ ಕಲೆ: ರಾಜಕೀಯದಲ್ಲಿ ಯಾರಿಗೆ ಯಾರೂ ಶತ್ರುಗಳಿಲ್ಲ. ಎಲ್ಲರೂ ಮಿತ್ರರೇ. ಯಾರು ಯಾವಾಗ ಬೇಕಾದರೂ ರಾಜಿಯಾಗಬಹುದು. ರಾಜಕೀಯ ಸಾಧ್ಯತೆಗಳ ಕಲೆಯಾಗಿದ್ದು, ಎಲ್ಲರ ವಿಶ್ವಾಸದೊಂದಿಗೆ ಕಾಂಗ್ರೆಸ್ ಪಕ್ಷದ ಸಿದ್ಧಾಂತದಡಿಯಲ್ಲಿ ಸಂಘಟನೆ ಮಾಡಬೇಕೇ ಹೊರತು ಜಾತಿ, ಧರ್ಮ ಮತ್ತು ವಿಚಾರಗಳಿಗೆ ಸಿಕ್ಕಿಹಾಕಿಕೊಳ್ಳಬಾರದು. ಜಾತಿ–ಧರ್ಮಗಳಿಗಿಂತ ಮಾನವ ಧರ್ಮ, ಮಾನವೀಯತೆ ಮುಖ್ಯ. ಹಾಗಾಗಿ ನಮ್ಮದು ಜಾತಿ ಒಂದೇ, ಅದು ಕಾಂಗ್ರೆಸ್ ಜಾತಿ. ಕಾಂಗ್ರೆಸ್ ನೆರಳಿನಡಿ ಸಂಘಟನೆ ಮಾಡಿ ಎಂದು ಕಿವಿಮಾತು ಹೇಳಿದರು.

ಹೊಸದಾಗಿ ಪಕ್ಷದ ಸದಸ್ಯರಾದವರ ಪಟ್ಟಿ ಬಿಡುಗಡೆ ಮಾಡಬೇಕು. ನಾನು ಕಾಂಗ್ರೆಸಿಗ ಎಂಬ ಭಾವನೆ ಅವರಲ್ಲಿ ಬರುವಂತೆ ವಿಶ್ವಾಸ ತುಂಬಿ. ಜೊತೆಗೆ ಒಂದೊಂದು ಬೂತ್ ಡಿಜಿಟಲ್ ಬೂತ್‌ಗಳಾಗಬೇಕು. ಪ್ರತೀ ಬೂತ್‌ಗೂ ಬಿಎಲ್‌ಎಗಳನ್ನು ನೇಮಿಸಿ ಸೂಕ್ತ ತರಬೇತಿ ನೀಡಬೇಕು. ಸಾಮಾಜಿಕ ಜಾಲತಾಣಗಳ ಸದ್ಬಳಕೆ ಮಾಡಿಕೊಂಡು ಹೆಚ್ಚೆಚ್ಚು ಜನರಿಗೆ ಕಾಂಗ್ರೆಸ್ ಸರ್ಕಾರದ ಜನಪರ ಕಾರ್ಯಗಳನ್ನು ತಿಳಿಸುವ ಕೆಲಸ ಮಾಡಿದರೆ ಪಕ್ಷ ಸಂಘಟನೆ ಜೊತೆಗೆ ಮುಂದಿನ ದಿನಗಳ'ಲ್ಲಿಯೂ ಜನರ ವಿಶ್ವಾಸಗಳಿಸಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೋಳಿ, ಶಾಸಕರಾದ ಕೆ.ಹರೀಶ್ ಗೌಡ, ರವಿಶಂಕರ್, ದರ್ಶನ್, ಮಾಜಿ ಸಂಸದ ಉಗ್ರಪ್ಪ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯ ರಾಜ್ಯ ಉಸ್ತುವಾರಿ ನಿಗಂ ಭಂಡಾರಿ, ರಾಜ್ಯಾಧ್ಯಕ್ಷ ಮಂಜುನಾಥ್‌ಗೌಡ, ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಡಿ.ಎಂ. ನಿಶಾಂತ್ ಪಟೇಲ್ ಮತ್ತಿತರರಿದ್ದರು.

ಬೆಂಗಳೂರಿಂದ ಕೆ.ಆರ್.ನಗರಕ್ಕೆ ಹೊರಟ ವ್ಯಕ್ತಿ ತನ್ನಿಬ್ಬರು ಮಕ್ಕಳೊಂದಿಗೆ ನಾಪತ್ತೆ



ಮಕ್ಕಳೊಂದಿಗೆ ಕುಮಾರ್ ಸ್ವಾಮಿ

ಮೈಸೂರು, ಏ.25–ಬೆಂಗಳೂರಿನಲ್ಲಿ ವಾಸವಾಗಿರುವ ಮೂಲ ಕೆ.ಆರ್.ನಗರದ ವ್ಯಕ್ತಿಯೊಬ್ಬರು ತನ್ನಿಬ್ಬರೂ ಮಕ್ಕಳೊಂದಿಗೆ ನಿಗೂಢ ರೀತಿ ನಾಪತ್ತೆಯಾಗಿರುವ ಪ್ರಕರಣ ವರದಿಯಾಗಿದ್ದು, ಬೆಂಗಳೂರಿನ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆ.ಆರ್.ನಗರದ ವಿನಾಯಕ ಬಡಾವಣೆಯ ರಾಮೇಗೌಡರ ಪುತ್ರ ಕುಮಾರ್ ಸ್ವಾಮಿ(39), ಈತನ ಇಬ್ಬರು ಮಕ್ಕಳಾದ ಅದ್ವೈತ್ (9) ಹಾಗೂ ಅಕ್ಷರ(6) ನಾಪತ್ತೆಯಾದವರಾಗಿದ್ದಾರೆ.

ತರಕಾರಿ ವ್ಯಾಪಾರಿಯಾದ ಕುಮಾರ ಸ್ವಾಮಿ ಬೆಂಗಳೂರಿನ ದಾಸನಪುರ ಹೋಬಳಿಯ ನಂದರಾಮಯ್ಯನ ಪಾಳ್ಯದಲ್ಲಿ ಪತ್ನಿ ಸುಷ್ಮಾ, ಮಕ್ಕಳಾದ ಅದ್ವೈತ್ ಮತ್ತು ಅಕ್ಷರಳ ಜೊತೆ ವಾಸವಾಗಿದ್ದರು. ಬೆಂಗಳೂರನ್ನು ಬಿಟ್ಟು ಸ್ವಂತ ಊರಾದ ಕೆ.ಆರ್.ನಗರಕ್ಕೆ ವಾಪಸ್ ಹೋಗಿ ವಾಸಿಸಲು ದಂಪತಿ ನಿರ್ಧರಿಸಿದ್ದರಂತೆ.

ಈ ಹಿನ್ನೆಲೆಯಲ್ಲಿ ಏ.17ರಂದು ಕೆ.ಆರ್.ನಗರಕ್ಕೆ ಹೋಗಿ ತಂದೆ–ತಾಯಿ ಮನೆಯಲ್ಲಿ ಮಕ್ಕಳನ್ನು ಬಿಟ್ಟು ಬರುವುದಾಗಿ ಕುಮಾರಸ್ವಾಮಿ ತನ್ನ ಕಾರಿನಲ್ಲಿ (ಕೆಎ 02 ಎಂಬಿ 6120) ಹೊರಟಿದ್ದಾರೆ. ಆದರೆ ರಾತ್ರಿಯಾದರೂ ಕೆ.ಆರ್.ನಗರಕ್ಕೆ ಹೋಗದೆ ಮಕ್ಕಳೊಂದಿಗೆ ಕೆಆರ್‌ಎಸ್‌ಗೆ ಹೋಗಿದ್ದು, ಪತ್ನಿಗೆ ಮೊಬೈಲ್ ಮೂಲಕ ಕರೆ ಮಾಡಿ ವಿಚಾರ ತಿಳಿಸಿದ್ದಾರೆ.

ನಾನು ಈಗ ಕೆ.ಆರ್.ನಗರಕ್ಕೆ ಹೋಗಿ ಮಕ್ಕಳನ್ನು ಬಿಟ್ಟು ನಾಳೆ (ಏ.18) ವಾಪಸ್ ಊರಿಗೆ ಬರುತ್ತೇನೆ ಎಂದು ಕುಮಾರಸ್ವಾಮಿ ತಿಳಿಸಿದ್ದು, ನಂತರ ಫೋನ್ ಸ್ವಿಚ್ ಆಫ್ ಆಗಿದೆ. ಇದೀಗ ಕುಮಾರಸ್ವಾಮಿ ತನ್ನ ತಂದೆ–ತಾಯಿ ಮನೆಗೂ ಹೋಗದೆ, ವಾಪಸ್ ಮನೆಗೂ ಬಾರದೆ, ನಿಗೂಢವಾಗಿ ಕಾಣೆಯಾಗಿದ್ದಾರೆ. ಕಾರು ಕೂಡ ಸಿಕ್ಕಿಲ್ಲ.

ಪೊಲೀಸರು ಪತ್ನಿ ಸುಷ್ಮಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದು, ಇವರುಗಳ ಬಗ್ಗೆ ಸುಳಿವು ಸಿಕ್ಕವರು ಮೊ: 9535820499, 7022800103 ಮೂಲಕ ಸಂಪರ್ಕಿಸಲು ಕೋರಲಾಗಿದೆ

ಪ್ರೀಪೇಯ್ಡ್ ಮೀಟರ್ ಶುಲ್ಕಕ್ಕೆ 'ಹೈಕೋರ್ಟ್'ನಿಂದ ಮಧ್ಯಂತರ ತಡೆ

ಬೆಂಗಳೂರು, ಏ.25– ಬೆಸ್ಕಾಂ ಪ್ರೀಪೇಯ್ಡ್ ಮೀಟರ್ ಶುಲ್ಕಕ್ಕೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ. ಈ ಮೂಲಕ ಬೆಸ್ಕಾಂ ಗ್ರಾಹಕರಿಗೆ ಬಿಗ್ ರಿಲೀಫ್ ನೀಡಿದೆ.

ಬೆಸ್ಕಾಂನಿಂದ ಸ್ಮಾರ್ಟ್ ಪ್ರೀಪೇಯ್ಡ್ ಮೀಟರ್ ಕಡ್ಡಾಯ ವಿಚಾರವಾಗಿ ಬೆಸ್ಕಾಂ ಕ್ರಮ ಪ್ರಶ್ನಿಸಿ ಜಯಲಕ್ಷ್ಮೀ ಎಂಬುವರಿಂದ ರಿಟ್ ಅರ್ಜಿ ಸಲ್ಲಿಸಿದ್ದರು. 2000 ರೂಪಾಯಿ ಇದ್ದ ಮೀಟರ್ ಈಗ 8910 ರೂ ಕೊಡಬೇಕಾಗಿದೆ. ಬೇರೆ ರಾಜ್ಯಗಳಲ್ಲಿ 900 ರೂ.ಗಳಿಗೆ ಪ್ರೀಪೇಯ್ಡ್ ಮೀಟರ್ ನೀಡಲಾಗುತ್ತಿದೆ. ಕೆಇಆರ್‌ಸಿ ಸ್ಮಾರ್ಟ್ ಮೀಟರ್ ಕಡ್ಡಾಯವಲ್ಲವೆಂದಿತ್ತು. ಆದರೇ ಬೆಸ್ಕಾಂ ಸುತ್ತೋಲೆ ಸ್ಮಾರ್ಟ್ ಮೀಟರ್ ಕಡ್ಡಾಯ ಎಂದಿದೆ ಎಂಬುದಾಗಿ ಅರ್ಜಿದಾರರ ಪರ ಹಿರಿಯ ವಕೀಲ ಪ್ರಭುಲಿಂಗ ನಾವದಗಿ ವಾದ ಮಂಡಿಸಿದರು.

ಈ ವೇಳೆ ದುಬಾರಿ ಪ್ರೀಪೇಯ್ಡ್ ವಿದ್ಯುತ್ ಮೀಟರ್‌ಗೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತು. ನಿಮ್ಮಿಂದ ಯಾರು ಫ್ರೀ ವಿದ್ಯುತ್ ಕೇಳಿದ್ದರು ಎಂಬುದಾಗಿ ಹೈಕೋರ್ಟ್ ಪ್ರಶ್ನೆ ಮಾಡಿತು. ಬಡವರಿಂದ ಇಷ್ಟು ಹಣ ಕಿತ್ತರೆ ಎಲ್ಲಿಗೆ ಹೋಗಬೇಕು ಎಂಬುದಾಗಿ ಪ್ರಶ್ನಿಸಿತು.

ಎಲ್ಲರೂ ಸ್ಮಾರ್ಟ್ ಮೀಟರ್ ಹಾಕಬೇಕೆಂದರೇ ಬಡವರೇನು ಮಾಡಬೇಕು. ನ್ಯಾ. ಎಂ.ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ ಅಸಮಾಧಾನ ವ್ಯಕ್ತಪಡಿಸಿತು. ಅಲ್ಲದೇ ಬೆಸ್ಕಾಂ ಪ್ರೀಪೇಯ್ಡ್ ಮೀಟರ್ ಶುಲ್ಕಕ್ಕೆ ಹೈಕೋರ್ಟ್‌ನಿಂದ ಮಧ್ಯಂತರ ತಡೆಯಾಜ್ಞೆ ನೀಡಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರಿಗೆ ವಿಶ್ವಬ್ಯಾಂಕ್ ಅಧಿಕಾರಿಗಳ ಭೇಟಿ

ಮೂಲ ಸೌಕರ್ಯ, ಕುಡಿಯುವ ನೀರು, ಪಾರಂಪರಿಕ ಕಟ್ಟಡಗಳು, ಪ್ರವಾಸೋದ್ಯಮ, ಕೈಗಾರಿಕಾ ಪ್ರದೇಶಾಭಿವೃದ್ಧಿ ಕುರಿತು ಪಾಲಿಕೆ ಅಧಿಕಾರಿಗಳು, ತಜ್ಞರೊಂದಿಗೆ ಚರ್ಚೆ



ಮೈಸೂರು, ಏ. 25(ಆರ್‌ಕೆ)– ಝಿಯು ಜೆರ್ರಿ ಚೆನ್ ನೇತೃತ್ವದ ವಿಶ್ವಬ್ಯಾಂಕ್ ಅಧಿಕಾರಿಗಳ ತಂಡವು ಕಳೆದ ಮಂಗಳವಾರ ಮತ್ತು ಬುಧವಾರ ಮೈಸೂರಿಗೆ ಭೇಟಿ ನೀಡಿತ್ತು.

ಮಂಗಳವಾರ ಶಾರದಾದೇವಿನಗರದಲ್ಲಿ ನಿರ್ಮಿಸಿರುವ ಪಾಲಿಕೆ ವಲಯ ಕಚೇರಿ–3ರ ನೂತನ ಕಟ್ಟಡದ ಸಭಾಂಗಣದಲ್ಲಿ ಮೈಸೂರು ಮಹಾನಗರ ಪಾಲಿಕೆ ಸಿದ್ಧಪಡಿಸಿದ್ದ ಮೈಸೂರು ನಗರದಲ್ಲಿ ಅಗತ್ಯವಿರುವ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಅಗತ್ಯವಿರುವ ಅನುದಾನದೊಂದಿಗೆ ಪ್ರಸ್ತಾವನೆಯನ್ನು ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಪಾಲಿಕೆ ಇಂಜಿನಿಯರ್‌ಗಳು ವಿಶ್ವಬ್ಯಾಂಕ್ ಅಧಿಕಾರಿಗಳಿಗೆ ಪ್ರಸ್ತುತಪಡಿಸಿದರು.

ಮೈಸೂರು ನಗರದ ಲ್ಯಾಂಡ್‌ಸ್ಕೇಪ್ ಆಧುನೀಕರಣ ಸಂಬಂಧ ಸುಮಾರು 2,800 ಕೋಟಿ ರೂ. ವೆಚ್ಚದ ಪ್ರಸ್ತಾವನೆಯಲ್ಲಿ ರಸ್ತೆಗಳ ಅಭಿವೃದ್ಧಿ, ವಿದ್ಯುಚ್ಛಕ್ತಿ, ನೀರು, ಗ್ಯಾಸ್, ಒಳಚರಂಡಿ ಸಂಪರ್ಕವನ್ನು ಭೂಮಿ ಒಳಗೆ ಕಲ್ಪಿಸುವುದು, ಭವಿಷ್ಯದ ಅಗತ್ಯತೆಗೆ ತಕ್ಕಂತೆ ಮೂಲ ಸೌಕರ್ಯ ಕಲ್ಪಿಸುವುದು ಸೇರಿದೆ ಎಂದು ಪಾಲಿಕೆ ಇಂಜಿನಿಯರ್‌ಗಳು ತಿಳಿಸಿದರು.

ಸುರಕ್ಷತೆ ಮತ್ತು ಭದ್ರತೆ ದೃಷ್ಟಿಯಿಂದ ಸಿಟಿ ಸರ್ವಲೆನ್ಸ್ ಸಿಸ್ಟಂ (ಸಿಎಸ್‌ಎಸ್), ನಗರ ಪರಿಸರ ಸಂರಕ್ಷಣೆ, ರಿಯಲ್ ಟೈಂ ಮಾನಿಟರಿಂಗ್, ಡೇಟಾ ಡ್ರೈವ್, ಕುಡಿಯುವ ನೀರಿನ ಸಂಪರ್ಕ ಜಾಲ ಸದೃಢಪಡಿಸು ವುದು, ನೀರಿನ ಕೊರತೆ ಉಂಟಾಗದಂತೆ ಕ್ರಮ, ಸೋರಿಕೆ ತಡೆಗಟ್ಟಿ ಮೀಟರ್ ರಹಿತ ನೀರಿನ ಸಂಪರ್ಕ ಸ್ಥಗಿತಗೊಳಿಸುವ ಬಗ್ಗೆಯೂ ಪಾಲಿಕೆ ಅಧಿಕಾರಿಗಳು ಯೋಜನೆಯಲ್ಲಿ ಪ್ರಸ್ತಾಪಿಸಿದ್ದಾರೆ.

ನಂತರ ಪ್ರವಾಸೋದ್ಯಮ ಅಭಿವೃದ್ಧಿ, ಪಾರಂಪರಿಕ ಕಟ್ಟಡಗಳು, ಸ್ಮಾರಕಗಳು, ಕೆರೆಗಳ ಸಂರಕ್ಷಣೆ ಕುರಿತಂತೆ ಪಾರಂಪರಿಕ ತಜ್ಞ ಪ್ರೊ ಎನ್.ಎಸ್. ರಂಗರಾಜ್ ಹಾಗೂ ನಮ್ಮ ಮೈಸೂರು ಫೌಂಡೇಷನ್ (ಎನ್‌ಎಂಎಫ್) ಮುಖ್ಯಸ್ಥ ದಶರಥ ಹಾಗೂ ಟ್ರಸ್ಟಿಗಳೂ ವಿಶ್ವಬ್ಯಾಂಕ್ ಅಧಿಕಾರಿಗಳಿಗೆ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

ಬುಧವಾರ ಅಧಿಕಾರಿಗಳ ತಂಡ ಕರೆದೊಯ್ದು ಕಾರಂಜಿಕೆರೆ, ವಸಂತಮಹಲ್, ಸರ್ಕಾರಿ ಅತಿಥಿ ಗೃಹ, ದೊಡ್ಡ ಗಡಿಯಾರ, ಪುರಭವನ, ಗಾಂಧಿ ವೃತ್ತ ಕೆಆರ್. ಸರ್ಕಲ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್, ದೇವರಾಜ ಮಾರುಕಟ್ಟೆ ಸೇರಿದಂತೆ ಹಲವು ಪಾರಂಪರಿಕ ಕಟ್ಟಡಗಳನ್ನು ವೀಕ್ಷಿಸಿದ ಪ್ರೊ ರಂಗರಾಜು, ಕುಕ್ಕರಹಳ್ಳಿ ಕೆರೆಯ ವೈಶಿಷ್ಟ್ಯತೆಯನ್ನು ವಿವರಿಸಿದರು.

ನಂತರ ಮೈಸೂರು ಕೈಗಾರಿಕೆಗಳ ಸಂಘದ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್, ಹೆಬ್ಬಾಳು ಕೈಗಾರಿಕಾ ಪ್ರದೇಶದ ಅಭಿವೃದ್ಧಿ ಮತ್ತು ಮೂಲ ಸೌಕರ್ಯದ ಅಗತ್ಯತೆ ಬಗ್ಗೆ ಅಧಿಕಾರಿಗಳಿಗೆ ವಿವರಿಸಿದರು. ಅದೇ ವೇಳೆ ತಂಡದ ಸದಸ್ಯರು ಇನ್‌ಫೋಸಿಸ್ ಟೆಕ್ನಾಲಜೀಸ್‌ಗೂ ಭೇಟಿ ನೀಡಿದ್ದರು.

ವಂಡರ್ ಲಾದಲ್ಲಿ ಬಾಹ್ಯಾಕಾಶ ಯಾನದ ಅನುಭವ

ಮೈಸೂರು,ಏ.25(ಎಂಟಿವೈ)– ಬೆಂಗಳೂರಿನ 'ವಂಡರ್ ಲಾ'ದಲ್ಲಿ ಬಾಹ್ಯಾಕಾಶ ಯಾನದ ಅನುಭವ ನೀಡುವ ಇಮ್ಮರ್ಸಿವ್ ಸ್ಪೇಸ್ ಥಿಯೇಟರ್ ಆಧಾರಿತ ಮನೋರಂಜನಾ ವ್ಯವಸ್ಥೆ ಮಾಡಲಾಗಿದೆ. ಇದು ವಿಶ್ವ ದರ್ಜೆಯದ್ದಾಗಿರುವುದರಿಂದ ವಿಶಿಷ್ಟ ಅನುಭವ ನೀಡಲಿದೆ ಎಂದು ವಂಡರ್ ಲಾ ಸಂಸ್ಥೆಯ ಮುಖ್ಯಸ್ಥ ರುದ್ರೇಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಂಡರ್‌ಲಾದಲ್ಲಿ ವಾಸ್ತವಿಕ ಬಾಹ್ಯಾಕಾಶ ಯಾನದ ಅನುಭವ ದೊರೆಯಲಿದೆ. ಇಟಲಿಯಿಂದ ಇದಕ್ಕಾಗಿ ಹೈಡ್ರಾಲಿಕ್ ಲಿಫ್ಟ್ ಆಸನ ವ್ಯವಸ್ಥೆ ಮಾಡಿದ್ದು, ಕುಳಿತವರನ್ನು 40 ಅಡಿ ಎತ್ತರಕ್ಕೆ ಕೊಂಡೊಯ್ಯುತ್ತದೆ. ಜೊತೆಗೆ ಹೈಟೆಕ್ ಲೇಸರ್ ಪ್ರೊಜೆಕ್ಷನ್‌ಗಳಿವೆ. ಶಕ್ತಿಯುತ ಧ್ವನಿ ವ್ಯವಸ್ಥೆ ಇಲ್ಲಿನ ವೈಶಿಷ್ಟ್ಯತೆಯಾಗಿದೆ. 23 ಮೀಟರ್ ಎತ್ತರದ ಭಾವಣಿಯೊಂದಿಗೆ ಗುಮ್ಮಟವೊಂದನ್ನು ನಿರ್ಮಿಸಿದ್ದು, ಈ ರೀತಿಯ ವ್ಯವಸ್ಥೆ ಇಡೀ ದೇಶದಲ್ಲಿಯೇ ಮೊದಲಿನದಾಗಿದೆ. ಈ ವಿಷನ್ ಇಂಟರ್ ಸ್ಟೆಲ್ಲಾರ್ ಭೇಟಿ ನೀಡುವವರಿಗೆ ಅಪೂರ್ವ ಅನುಭವ ನೀಡುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ವಂಡರ್‌ಲಾದ ಅಧಿಕಾರಿಗಳಾದ ಫ್ರಾನ್ಸಿಸ್, ಸುರೇಶ್ ಬಾಬು ಇದ್ದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ನಗರ, ಗೋಕುಲಂ 3 ನೇ ಹಂತ, 15 ನೇ ಕ್ರಾಸ್, 3 ನೇ ಮೈನ್, ಮನೆ ನಂಬರ್: 634 ರ ನಿವಾಸಿ, ಚಂದ್ರಶೇಖರ್ ಬದಾಮಿ @ ಚಂದ್ರ ಶೇಖರ್ ವಸಂತ್ ಬದಾಮಿ ಬಿನ್: ವಸಂತ್ ಎಮ್. ವಿ. ಬದಾಮಿ, ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವದಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂದಿತರಾಗುವುದಿಲ್ಲ.

ಷೆಡ್ಯೂಲ್ : ಮೈಸೂರು ನಗರ, ದೇವರಾಜ ಮೊಹಲ್ಲಾ, ಯಾದವಗಿರಿ, 2ನೇ ಮುಖ್ಯ ರಸ್ತೆ, ಇಲ್ಲಿರುವ ಪೂರ್ವ–ಪಶ್ಚಿಮ: 36.88 ಮೀಟರ್, ಉತ್ತರ–ದಕ್ಷಿಣ: 17.83 ಮೀಟರ್, ಒಟ್ಟು ವಿಸ್ತೀರ್ಣ: 657.57 ಚದರ : ಮೀಟರ್ ಅಳತೆಯ ಆಸ್ತಿ ಸಂಖ್ಯೆ : **89/B D-1 (Form-2 Property No. 32-1-159-24)** ಮತ್ತು ಇದರಲ್ಲಿ ಕಟ್ಟಿರುವ 139.35 ಚದರ ಮೀಟರ್ ನೆಲ ಅಂತಸ್ತು ಮತ್ತು 139.35 ಚದರ ಮೀಟರ್ ಮೊದಲನೇ ಅಂತಸ್ತು ಕಟ್ಟಡ ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ:– ಸಾರ್ವಜನಿಕ ರಸ್ತೆ , ಪಶ್ಚಿಮಕ್ಕೆ:– ಕನ್ಸರ್ವನ್ಸಿ , ಉತ್ತರಕ್ಕೆ: ನಿವೇಶನ ಸಂಖ್ಯೆ: 88 , ದಕ್ಷಿಣಕ್ಕೆ:– ನಿವೇಶನ ಸಂಖ್ಯೆ: 89/ಎ

Sd/-Prakash Kalappa, Advocate
2-3, First Floor, PRI Complex, 67/7A,
New Sayyajirao Road, Fort Mohalla,
Mysore 570004 India ,
Cell: 93431 12535. E-mail:
mnprakashkalappa@gmail.com
ಮೈಸೂರು : 25.04.2025

ಸಾರ್ವಜನಿಕರ ಗಮನಕ್ಕಾಗಿ

ಏನೆಂದರೆ, ನನ್ನ ಕಕ್ಷಿದಾರರಾದ ಎಂ.ಎನ್. ರಜನಿಕಾಂತ್ ಬಿನ್ ಎಂ.ಎನ್. ನಾರಾಯಣಚಾರ್, ವಾಸ: ಮನೆ ನಂ. 31, ಬ್ಲಾಕ್ –1, ಬಿ.ಇ.ಎಂ.ಎಲ್. ಬಡಾವಣೆ, ಶ್ರೀರಾಂಪುರ 2ನೇ ಹಂತ, ಮೈಸೂರು ಇವರ ಇರ್ಯಾದೆಯ ಮೇರೆಗೆ, ಏನೆಂದರೆ ಷೆಡ್ಯೂಲ್ ಸ್ವತ್ತು ಬಸವರಾಜು ಬಿನ್ ಲೇಟ್ ಶಿವಪ್ಪ, ಇವರ ಪತ್ನಿ ಶ್ರೀಮತಿ ಸುಶೀಲಮ್ಮ, ಇವರ ಮಕ್ಕಳುಗಳಾದ ಶ್ರೀಮತಿ ಶಿಲ್ಪಾ ಬಿ. ಕೋಂ ರಾಜಶೇಖರ ಎಸ್., ಶ್ರೀಮತಿ ಬೇಬಿ ಬಿ. ಕೋಂ ನಾಗೇಶ್ ಕುಮಾರ್ ಎಸ್. ಮತ್ತು ಬಸವರಾಜುರವರ ತಾಯಿಯಾದ ಶ್ರೀಮತಿ ಗೌರಮ್ಮ ಹಾಗೂ ತಮ್ಮನಾದ ಮಹದೇವಸ್ವಾಮಿ, ಇವರ ವಾಸ: ಮನೆ ನಂ. 78, ಮದ್ಯದ ಬೀದಿ, ಪುರ ಗ್ರಾಮ, ಹಂಪಾಪುರ ಹೋಬಳಿ, ಹೆಚ್.ಡಿ. ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ, ಇವರುಗಳಿಗೆ ಸೇರಿದ ಸ್ವತ್ತಾಗಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷಿದಾರರಾಗಲೀ, ಅಥವಾ ಅವರು ಸೂಚಿಸಿದ ವ್ಯಕ್ತಿಯಾಗಲೀ ಖರೀದಿಸಲು ತೀರ್ಮಾನಿಸಿದ್ದು, ಅದಕ್ಕಾಗಿ ಸದರಿ ಮೇಲ್ಕಂಡ ಎಲ್ಲಾ ವ್ಯಕ್ತಿಗಳು ಸಹ ಒಪ್ಪಿದ್ದು, ಉಭಯತ್ರರು ಕ್ರಯಪತ್ರ ಮಾಡಿಕೊಳ್ಳಲು ಒಪ್ಪಿರುತ್ತಾರೆ.

ಸದರಿ, ಷೆಡ್ಯೂಲ್ ಸ್ವತ್ತಿನ ಸಂಬಂಧ ಸಾರ್ವಜನಿಕರು ಯಾವುದೇ ರೀತಿಯ ಹಕ್ಕು, ಮಾಲೀಕತ್ವ, ಸ್ವಾಧೀನ, ಹಿತಾಸಕ್ತಿ ಇತರೆ ಯಾವುದೇ ಹಕ್ಕು ಇದ್ದ ಪಕ್ಷದಲ್ಲಿ ಈ ಕೆಳಕಂಡ ವಕೀಲರ ಕಛೇರಿಗೆ ಸಂಬಂಧಪಟ್ಟ ದಾಖಲಾತಿಗಳೊಡನೆ ಹದಿನೈದು ದಿನದೊಳಗೆ ಹಾಜರುಪಡಿಸತಕ್ಕದ್ದು, ಅಥವಾ ತಮ್ಮ ಲಿಖಿತ ತಕರಾರನ್ನು ಸಲ್ಲಿಸತಕ್ಕದ್ದು. ಹದಿನೈದು ದಿನದೊಳಗೆ ಯಾ–ರಿಂದಲೂ ತಕರಾರು ಅಥವಾ ದಾಖಲಾತಿಗಳು ಬಾರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ತಕರಾರು ಇಲ್ಲವೆಂದು ಕ್ರಯಪತ್ರವನ್ನು ಮಾಡಿಕೊಳ್ಳಲಿದ್ದು, ನಂತರ ಬರತಕ್ಕ ಯಾವುದೇ ತಕರಾರು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಹಾಗೂ ಮುಂದಿನ ಯಾವುದೇ ಹಾಗೂ ಹೋಗುಗಳಿಗೆ ನಮ್ಮ ಕಕ್ಷಿದಾರರಿಗೆ ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು : ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಪುರ (ಕ) ಗ್ರಾಮದಲ್ಲಿರುವ ಸರ್ವೆ ನಂ. 61/5ರಲ್ಲಿ 27 (ಇಪ್ಪತ್ತೇಳು) ಗುಂಟೆ ವಿಸ್ತೀರ್ಣದ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಕರೆ, ಪಶ್ಚಿಮಕ್ಕೆ: ಸಿದ್ದಯ್ಯನಹುಂಡಿ ಇನ್‌ಪೆಕ್ಟರ್‌ರವರ ಜಮೀನು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಮಹದೇವಸ್ವಾಮಿರವರ ಜಮೀನು.

ಕಕ್ಷಿದಾರರ ಪರ ವಕೀಲರು.
Sd/- S. Somashekara, BBM, LL.B.,
ADVOCATE, KAR / 1792/2015
#645, 1st Floor, Narayanashastry Road, K.R. Mohalla, Mysuru-570 004 Mob: 9845101047

ಸಹಕಾರ ಸಂಘಗಳ ಉಪ ನಿಬಂಧಕರು(ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಸಂಚಾರಿ ಪೀಠ, 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ-590015

ವಾದಿ : ವ್ಯವಸ್ಥಾಪಕ ನಿರ್ದೇಶಕರು, ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್.ಕಾರವಾರ ಕೇಶವ ಶೇಟ ರಸ್ತೆ, 1ನೇ ಕ್ರಾಸ್, ಸೋನಾರವಾಡ, ಕಾರವಾರ–581 304 (ಉ.ಕ.) –:ವಿರುದ್ಧ:–

ಪ್ರತಿವಾದಿಗಳು : ವ್ಯಾಜ್ಯ ಸಂಖ್ಯೆ :ಜೆಆರ್‌ಡಿ/ಕ.ರಾ.ಸೌ.ಸಂ.ಸ.ನಿ./2957/2022–23.

1 .ಶ್ರೀ. ನಿತೇಶ ಎಸ್ ಆರ್, ಸಾ: # 769, 4ನೇ ಮುಖ್ಯ, 25ನೇ ರಸ್ತೆ, ಪೊ: ವಿದ್ಯಾರಣ್ಯಪುರ, ತಾ: ಮೈಸೂರು–570008

2 ಶ್ರೀ ಗುರು, ಸಾ: # 4735/2, ಗೌತಮ್ ರಸ್ತೆ, ನೀಲಕಂಠ ನಗರ, ಪೊ: ನಂಜನಗೂಡು ತಾ: ಮೈಸೂರು–571301

3. ಶ್ರೀ ಮನು ಪಿ.ಓ , ಸಾ: # 416, ದೊಡ್ಡ ಕೆರೆ, ಪೊ: ಪಿರಿಯಾಪಟ್ಟಣ ಟೌನ್ ಮೈಸೂರು–571107

4. ಶ್ರೀ ಎಚ್. ರಮೇಶ, ಸಾ: ಮುಖ್ಯರಸ್ತೆ, ವರುಣ ಹೋಬಳ, ಪೊ: ಯಡಗೋಳ, ಸಿದ್ದರಾಮನ ಹುಂಡಿ ತಾ: ಮೈಸೂರು–570010

ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟಿಸ್

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಪ್ರತಿವಾದಿಗಳ ದಾವಾ ಸಂಖ್ಯೆ:ಡಿಆರ್‌ಡಿ/ಕ.ರಾ.ಸೌ.ಸಂ.ಸ.ನಿ./2957/2022–23 ರಂತೆ ಸಹಕಾ–ರಿಗಳ ಜಂಟಿ ನಿಬಂಧಕರು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ (ನಿ.441) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಳಗಾವಿ ಪ್ರಾಂತೀಯ ಕಛೇರಿ, 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ್ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ನ್ಯಾಯಾಲಯದಲ್ಲಿ ಪರಿಹಾರ ಕರಾರು ಅಡಿಯಲ್ಲಿ ದಾವೆಯನ್ನು ಸಲ್ಲಿಸಿದ್ದು, ನೀವು ಪ್ರತಿವಾದಿಯಾಗಿರುತ್ತೀರಿ. ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ ದಿ: 02/05/2025 ರಂದು ಬೆಳಗ್ಗೆ 11.00 ಗಂಟೆಗೆ ಸರಿಯಾಗಿ ತಾವಾಗಲಿ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ಸದರಿ ಪ್ರಕಟಣೆಯನ್ನು ದಿ:21/03/2025 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹ–ರಿನೊಂದಿಗೆ ನೀಡಲಾಗಿದೆ.

ಸಹಿ/– ಸಹಕಾರಿಗಳ ಜಂಟಿ ನಿಬಂಧಕರು(ನಿ.441)(ಪ್ರ)
ದಾವಾ ಪಂಚಾಯ್ತಿ ನ್ಯಾಯಾಲಯ ಕ.ರಾ.ಸೌ.ಸಂ.ಸ.ನಿ. ಬೆಳಗಾವಿ ಸಂಚಾರಿ ಪೀಠ, ಬೆಳಗಾವಿ.

PM SHRI

ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ಮೈಸೂರು
ಜಿ.ಐ.ಟಿ.ಬಿ ಪ್ರೆಸ್ ಕ್ಯಾಂಪಸ್, ಸಿದ್ಧಾರ್ಥನಗರ, ಮೈಸೂರು–570011
पी.एम.श्री केन्द्रीय विद्यालय मैसूरु,
जी.आई.टी.बी प्रेस परिसर, सिद्धार्थनगर, मैसूरु – 570011
(शिक्षा मंत्रालय, भारत सरकार केअधीन एक स्वायत्त निकाय)
PM SHRI KENDRIYA VIDYALAYA, MYSURU,
GITB, PRESS CAMPUS, SIDDHARTHNAGAR, MYSURU – 570011
(An Autonomous Body Under MOE, Government of India)
☎:0821-2473515, : https://mysore.kvs.ac.in ✉: kvmysore@gmail.com

F.84/PM SHRI KVMysuru/2025-26/ **Date:23.4.2025**

ಬಳಕೆಯಲ್ಲಿಲ್ಲದ ವಸ್ತುಗಳ ಸಾರ್ವಜನಿಕ ಹರಾಜಿನ ಪ್ರಕಟಣೆ

ನಮ್ಮ ವಿದ್ಯಾಲಯಕ್ಕೆ ಸಂಬಂಧಪಟ್ಟ ಬಳಕೆಯಲ್ಲಿಲ್ಲದ ವಸ್ತುಗಳ ಹರಾಜನ್ನು ಮೈಸೂರಿನ ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯದ ಆವರಣದಲ್ಲಿ ದಿನಾಂಕ:05-05-2025ರಂದು ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಆಸಕ್ತರು ಹರಾಜಿನ ಪ್ರಕ್ರಿಯೆ ಪ್ರಾರಂಭವಾಗುವ ಒಂದು ದಿನ ಮೊದಲು ಅಥವಾ ಅದೇ ದಿನ ರೂ.1000/- (ಒಂದು ಸಾವಿರ ರೂಪಾಯಿಗಳನ್ನು ಮಾತ್ರ) ಮುಂಗಡವಾಗಿ ಪಾವತಿಸಿ, ಹರಾಜಿನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹರಾಜಿನ ಪ್ರಕ್ರಿಯೆಯಲ್ಲಿ ವಸ್ತುಗಳನ್ನು ಅಧಿಕ ಮೊತ್ತಕ್ಕೆ ಖರೀದಿಸಿದ ವ್ಯಕ್ತಿ ಅಥವಾ ಸಂಸ್ಥೆ, ಅದೇ ದಿನ ಹರಾಜಿನ ಮೊತ್ತವನ್ನು ವಿದ್ಯಾಲಯಕ್ಕೆ ಪಾವತಿಸಿ, ಆ ದಿನ ಸಂಜೆ 5 ಗಂಟೆಯ ಒಳಗೆ ಹರಾಜಿನಲ್ಲಿ ಪಡೆದ ವಸ್ತುಗಳನ್ನು ಸ್ವಂತ ಖರ್ಚಿನಲ್ಲಿ ಶಾಲೆಯ ಆವರಣದಿಂದ ತೆಗೆದುಕೊಂಡು ಹೋಗತಕ್ಕದ್ದು. ಹರಾಜಿನಲ್ಲಿ ನಿರ್ಧಾರಿತವಾದ ಹಣವನ್ನು ನೀಡಲು ಅಸಮರ್ಥರಾದರೆ ಅಥವಾ ಹರಾಜಿನಿಂದ ಹಿಂದೆ ಸರಿದರೆ ಸಂಸ್ಥೆಗೆ ನೀಡಿದ ಮುಂಗಡ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.

ಹರಾಜಿನಲ್ಲಿ ಮಾರಾಟಕ್ಕಿಟ್ಟಿರುವ ವಸ್ತುಗಳು: 1. ಕಂಪ್ಯೂಟರ್ ಸಂಬಂಧಿತ ವಸ್ತುಗಳು
2. ಸಂಗೀತ ವಿಭಾಗಕ್ಕೆ ಸಂಬಂಧಿಸಿದ ವಸ್ತುಗಳು 3. ಪೀಠೋಪಕರಣಗಳು
4. ಧ್ವನಿವರ್ಧಕ ಸಂಬಂಧಿ ವಸ್ತುಗಳು 5.ಗ್ರಂಥಾಲಯಕ್ಕೆ ಸಂಬಂಧಪಟ್ಟ ವಸ್ತುಗಳು
6. ಭೌತಶಾಸ್ತ್ರ ಪ್ರಯೋಗಾಲಯಕ್ಕೆ ಸಂಬಂಧಪಟ್ಟ ವಸ್ತುಗಳು
7. ಶಿಕ್ಷಣ ಸಹಾಯಕ ಸಾಮಗ್ರಿಗಳು 8. ಕಾರ್ಯೋಪಯೋಗಿ ವಿಭಾಗಕ್ಕೆ ಸಂಬಂಧಪಟ್ಟ ವಸ್ತುಗಳು
ವಸ್ತುಗಳ ವಿಸ್ತೃತ ವಿವರಕ್ಕೆ ನಮ್ಮ ವಿದ್ಯಾಲಯದ ವೆಬ್ಸೈಟ್ https://mysore.kvs.ac.in/ ಸಂಪರ್ಕಿಸಬಹುದು.

ಸಹಿ/– ಡಾ. ನೂತನ್ ಪುಂಜ್, ಪ್ರಾಂಶುಪಾಲರು

ಬಂಡಿಪೋರಾ ಎನ್‌ಕೌಂಟರ್‌ನಲ್ಲಿ ಲಷ್ಕರ್ ಟಾಪ್ ಕಮಾಂಡರ್ ಅಲ್ತಾಫ್ ಲಲ್ಲಿ ಹತ್ಯೆ

ಶ್ರೀನಗರ, ಏ.25– ಜಮ್ಮು ಮತ್ತು ಕಾಶ್ಮೀರದ ಬಂಡಿಪೋರಾದಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಲಷ್ಕರ್–ಎ–ತೋಯ್ಬಾ (ಎಲ್‌ಇಟಿ) ಸಂಘಟನೆಯ ಉನ್ನತ ಕಮಾಂಡರ್ ಅಲ್ತಾಫ್ ಲಲ್ಲಿ ಮೃತಪಟ್ಟಿರುವುದಾಗಿ ವರದಿಯಾಗಿದೆ.

ಏಪ್ರಿಲ್ 22 ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 28 ಪ್ರವಾಸಿಗರು ಮೃತಪಟ್ಟ ಹಿನ್ನೆಲೆಯಲ್ಲಿ, ಉಗ್ರರನ್ನು ಸೆದೆಬಡಿಯುವ ಕೆಲಸದಲ್ಲಿ ಭಾರತೀಯ ಸೇನೆ ನಿರತವಾಗಿದೆ ನಿರಂತರವಾಗಿ ಕಾರ್ಯಾಚರಣೆ ನಡೆಯುತ್ತಿದ್ದು, ಇಂದು ಬೆಳಗ್ಗೆ ಲಷ್ಕರ್–ಎ–ತೋಯ್ಬಾ (ಎಲ್‌ಇಟಿ) ಸಂಘಟನೆಯ ಉನ್ನತ ಕಮಾಂಡರ್ ಅಲ್ತಾಫ್ ಲಲ್ಲಿಯನ್ನು ಹೊಡೆದುರುಳಿಸಲಾಗಿದೆ.

ಭಯೋತ್ಪಾದಕರ ಉಪಸ್ಥಿತಿಯ ಬಗ್ಗೆ ನಿರ್ದಿಷ್ಟ ಗುಪ್ತಚರ ಮಾಹಿತಿ ಸಿಕ್ಕ ಮೇರೆಗೆ ಭಾರತೀಯ ಸೇನೆ ಮತ್ತು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಶುಕ್ರವಾರ ಬೆಳಗ್ಗೆ ಬಂಡಿಪೋರಾದಲ್ಲಿ ಜಂಟಿ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿದರು. ಈ ವೇಳೆ ಭಯೋತ್ಪಾದಕರು ಇರುವ ಜಾಗವನ್ನು ಪತ್ತೆಹಚ್ಚಲಾಯಿತು. ಬಳಿಕ ಗುಂಡಿನ ಚಕಮಕಿ ನಡೆದು, ಎಲ್‌ಇಟಿ ಕಮಾಂಡರ್ ಅನ್ನು ಹೊಡೆದುರುಳಿಸಲಾಯಿತು.

ಇದೇ ವೇಳೆ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಶ್ರೀನಗರಕ್ಕೆ ಆಗಮಿಸಿದ್ದಾರೆ. ಬಂಡಿಪೋರಾದಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯ ಬಗ್ಗೆ ಮಾಹಿತಿ ಪಡೆದಿದ್ದಾರೆ. ಪರಿಸ್ಥಿತಿಯ ಸಮಗ್ರ ಭದ್ರತಾ ಪರಿಶೀಲನೆ ನಡೆಸುತ್ತಿದ್ದಾರೆ.

ಭಯೋತ್ಪಾದಕರು ಅಲ್ಲಿ ಅಡಗಿರುವ ಬಗ್ಗೆ ಸ್ಪಷ್ಟ ಮಾಹಿತಿ ಪಡೆದ ಸೇನೆ ಅಲ್ಲಿಗೆ ತೆರಳಿತ್ತು. ಭಾರತೀಯ ಸೇನೆ ಮತ್ತು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಬಂಡಿಪೋರಾದಲ್ಲಿ ಜಂಟಿ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದರು. ಮೊದಲು ಉಗ್ರರು ಸೇನೆಯ ಮೇಲೆ ಗುಂಡು ಹಾರಿಸಿದ್ದರು. ಅದಕ್ಕೆ ಪ್ರತಿಯಾಗಿ ಸೇನೆಯು ಕೂಡ ದಾಳಿ ನಡೆಸಿತು. ಭದ್ರತಾ ಪಡೆಗಳು ಬೆನ್ನಟ್ಟುತ್ತಿದ್ದ ಭಯೋತ್ಪಾದಕರಲ್ಲಿ ಒಬ್ಬನಿಗೆ ಆರಂಭಿಕ ಗುಂಡಿನ ಚಕಮಕಿಯಲ್ಲಿ ಗಾಯಗಳಾಗಿವೆ ಎಂದು ವರದಿಯಾಗಿತ್ತು.

ಒಂದನೇ ಪುಟದಿಂದ

ಭೂಮಿ ಮುಟ್ಟುಗೋಲು

ಕಳೆದ ಐದು ವರ್ಷದಲ್ಲಿ ಜನವಸತಿ ಪ್ರದೇಶಗಳ ಒಂದು ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗಿದೆ. ನಾವು ಅಧಿಕಾರಕ್ಕೆ ಬಂದ ನಂತರ 1.50 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡಿದ್ದೇವೆ. ಇನ್ನು ರಾಜ್ಯದಲ್ಲಿ ಹಾಡಿ, ಹಟ್ಟಿ, ತಾಂಡ ಸೇರಿದಂತೆ 3616 ವಸತಿ ಪ್ರದೇಶಗಳಲ್ಲಿ ಎರಡು ಲಕ್ಷ ಕುಟುಂಬಗಳಿಗೆ ಯಾವುದೇ ಹಕ್ಕುಪತ್ರ ದೊರೆತಿಲ್ಲ. ಮೇ 20ರಂದು ಒಂದು ಲಕ್ಷ ಕುಟುಂಬಗಳಿಗೆ ಡಿಜಿಟಲ್ ಮಾದರಿಯ ಹಕ್ಕುಪತ್ರ ನೀಡಲಾಗುವುದು. ವರ್ಷಾಂತ್ಯಕ್ಕೆ ಉಳಿದೆಲ್ಲ ಜನವಸತಿಯ ಕುಟುಂಬ ವರ್ಗದವರಿಗೆ ಸರ್ಕಾರ ತನ್ನ ಅಧಿಕೃತ ದಾಖಲೆ ನೀಡಿ, ಆ ಗ್ರಾಮಕ್ಕೆ ಮೂಲಸೌಕರ್ಯಗಳನ್ನು ಕಲ್ಪಿಸುವುದಾಗಿ ತಿಳಿಸಿದರು. ರೈತರಿಗೆ ಸರ್ಕಾರದಿಂದ ಮಂಜೂರಾಗಿರುವ ಭೂಮಿಗಳಿಗೆ ಪೋಡಿ ದಾಖಲೆಗಳನ್ನು ವರ್ಷಾಂತ್ಯದೊಳಗೆ ನೀಡಲಾಗುವುದು. 88880 ರೈತರು ದಾಖಲೆಗೆ ಅರ್ಜಿಗಳನ್ನು ಹಾಕಿಕೊಂಡಿದ್ದು, ಅವರೆಲ್ಲರಿಗೂ ಅಧಿಕೃತ ದಾಖಲೆಗಳನ್ನು ನೀಡುವ ಪ್ರಕ್ರಿಯೆ ಚಾಲನೆಯಲ್ಲಿದೆ.

'ಕಾವೇರಿ ಆರತಿ': ವಾರದಲ್ಲಿ ನೀಲಿನಕ್ಷೆ

ತಾಯಿಗೆ ನಮಿಸಲು ಅವಕಾಶ ಮಾಡಿಕೊಡಲಾಗುತ್ತಿದೆ. ಕಾವೇರಿ ನೀರು ಬಳಸುವ ತಮಿಳುನಾಡಿನ ಜನರೂ ಬಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಲಾಗುವುದು. ಈ ಕಾವೇರಿ ಆರತಿ ಕಾರ್ಯಕ್ರಮ ವಿನ್ಯಾಸ, ಸ್ವರೂಪ ಸೇರಿದಂತೆ ಇತರೆ ರೂಪು-ರೇಷೆಗಳ ಕುರಿತಾಗಿ ಅಧಿಕಾರಿಗಳು ಹಾಗೂ ನಮ್ಮ ನಾಯಕರ ಜತೆ ಚರ್ಚೆ ಮಾಡಿದ್ದೇನೆ ಎಂದು ಹೇಳಿದರು.

ಚೆಸ್ಕಾಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಪ್ರವಾಸೋದ್ಯಮ, ಧಾರ್ಮಿಕ ದತ್ತಿ ಇಲಾಖೆ, ಇಬ್ಬರು ಜಿಲ್ಲಾಧಿಕಾರಿಗಳು, ಇಬ್ಬರು ಸ್ಥಳೀಯ ಶಾಸಕರು ಹಾಗೂ ಪರಿಷತ್ ಸದಸ್ಯರು, ಸಿಇಓಗಳು, ಬಿಡಬ್ಲ್ಯೂಎಸ್‌ಬಿ ಮುಖ್ಯಸ್ಥರು ಒಳಗೊಂಡ ಸಮಿತಿ ರಚಿಸಲಾಗಿದೆ. ನೀರಾವರಿ ಇಲಾಖೆ ಅಧಿಕಾರಿಗಳು ಮೂಲಸೌಕರ್ಯ ಕಲ್ಪಿಸುವ ಕೆಲಸ ಮಾಡಲಿದ್ದಾರೆ. ಚೆಸ್ಕಾಂ ಸಂಸ್ಥೆ ದೀಪಾಲಂಕಾರ ವ್ಯವಸ್ಥೆ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

92 ಕೋಟಿ ಅನುದಾನ: ಈ ಕಾವೇರಿ ಆರತಿಗೆ ಸರ್ಕಾರ 92 ಕೋಟಿ ನೀಡಲು ತೀರ್ಮಾನಿಸಿದ್ದು, ಇದರ ಜತೆಗೆ ಬೇರೆ ಇಲಾಖೆಗಳು ಸಹಕಾರ ನೀಡಲಿವೆ. ಕನಿಷ್ಠ ಸುಮಾರು 10 ಸಾವಿರ ಜನರು ಕೂತು ಈ ಕಾರ್ಯಕ್ರಮ ವೀಕ್ಷಿಸಲು ಅವಕಾಶ ಕಲ್ಪಿಸಬೇಕು. ಎಷ್ಟು ದಿನ ಕಾರ್ಯಕ್ರಮ ಮಾಡಬೇಕು ಎಂಬುದನ್ನು ಸಮಿತಿ ತೀರ್ಮಾನ ಮಾಡಲಿದೆ. ಪಿಡಬ್ಲ್ಯೂಡಿ ಇಲಾಖೆ ಅಧಿಕಾರಿಗಳ ಜತೆ ಚರ್ಚೆ ಮಾಡಿ ಇಲ್ಲಿನ ರಸ್ತೆಗಳ ಅಭಿವೃದ್ಧಿ ಬಗ್ಗೆ ಚರ್ಚಿಸುತ್ತೇನೆ. ಧಾರ್ಮಿಕ ದತ್ತಿ ಇಲಾಖೆಯವರು ಕಾರ್ಯಕ್ರಮದಲ್ಲಿ ಯಾವ ರೀತಿ ಪೂಜೆ, ವೇದ ಗೋಷ್ಠಿ ಮಾಡಬೇಕು ಎಂದು ವರದಿ ನೀಡಿದ್ದು, ಎಲ್ಲವನ್ನು ಕ್ರೋಢೀಕರಿಸಿ ಅಂತಿಮ ರೂಪು-ರೇಷೆ ನಿರ್ಧರಿಸಲಾಗುವುದು. ಈ ವಿಚಾರವಾಗಿ ಯಾವುದಾದರೂ ಸಂಘಟನೆಗಳು ನಮ್ಮ ಜತೆ ಚರ್ಚೆ ಮಾಡಲು ಇಚ್ಛಿಸಿದರೆ ಕರೆದು ಮಾತನಾಡುತ್ತೇವೆ. ಬೇರೆಯವರ ಸಲಹೆಗಳನ್ನು ಸ್ವೀಕರಿಸಲು ಸರ್ಕಾರ ಸಿದ್ಧವಿದೆ ಎಂದು ಹೇಳಿದರು.

ಬೃಂದಾವನ ಉನ್ನತೀಕರಣಕ್ಕಾಗಿ ಯೋಜನಾ ಪ್ರಾಧಿಕಾರ: ಇನ್ನು ಬೃಂದಾವನ ಉದ್ಯಾನವನ ಉನ್ನತೀಕರಣಕ್ಕೆ ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಅಲ್ಲಿ ಯೋಜನಾ ಪ್ರಾಧಿಕಾರ ಮಾಡಲು ತೀರ್ಮಾನಿಸಲಾಗಿದೆ. ನಾಲ್ಕು ಪಂಚಾಯಿತಿ ಸೇರಿಸಲಾಗುತ್ತಿದೆ. ಈ ಪಂಚಾಯಿತಿಗಳ ಅಸ್ತಿತ್ವಕ್ಕೆ ತೊಂದರೆ ಆಗುವುದಿಲ್ಲ. ಅವುಗಳು ತಮ್ಮ ಕಾರ್ಯ ಮುಂದುವರಿಸಲಿವೆ. ಅವರ ಅಧಿಕಾರ ಮೊಟಕುಗೊಳಿಸುವುದಿಲ್ಲ. ರಸ್ತೆ, ಪಾರ್ಕ್ ಸೇರಿದಂತೆ ಅಭಿವೃದ್ಧಿ ಕಾರ್ಯಗಳಿಗೆ ಕಾನೂನು ಪ್ರಕಾರ ಜಾಗ ನೀಡುವ ಕೆಲಸವನ್ನು ಯೋಜನಾ ಪ್ರಾಧಿಕಾರ ಮಾಡಲಿದೆ. ಇದು ಅಭಿವೃದ್ಧಿ ಪ್ರಾಧಿಕಾರವಲ್ಲ, ಯೋಜನಾ ಪ್ರಾಧಿಕಾರ ಮಾತ್ರ. ಚಾಮುಂಡಿ ಬೆಟ್ಟ, ಮಲೆ ಮಹದೇಶ್ವರ ದೇವಾಲಯಕ್ಕೆ ಸಂಬಂಧಿಸಿದಂತೆ ಮಾಡಲಾಗಿರುವ ಯೋಜನಾ ಪ್ರಾಧಿಕಾರದಂತೆ ಇದು ಇರಲಿದೆ. ಇಲ್ಲಿಂದ ಬಂದ ಹಣವನ್ನು ಇಲ್ಲಿನ ಅಭಿವೃದ್ಧಿಗೆ ವಿನಿಯೋಗಿಸಲು ಈ ಪ್ರಾಧಿಕಾರ ಯೋಜನೆ ರೂಪಿಸಲಿದೆ ಎಂದು ತಿಳಿಸಿದರು.

ಬೃಂದಾವನ ಉದ್ಯಾನವನ ಉನ್ನತೀಕರಣಕ್ಕೆ 7 ಸಂಸ್ಥೆಗಳು ಮುಂದಾಗಿದ್ದು, ಈ ಬಗ್ಗೆ ಚರ್ಚೆ ನಡೆಯುತ್ತಿದೆ. ಸದ್ಯದಲ್ಲೇ ಇದರ ರೂಪು-ರೇಷೆ ಸಿದ್ಧಪಡಿಸಲಾಗುವುದು. ಈ ಭಾಗದಲ್ಲಿ ಏನೇ ಉದ್ಯೋಗ ಸೃಷ್ಟಿಯಾದರೂ ಈ ಭಾಗದ ಪಂಚಾಯಿತಿ ವ್ಯಾಪ್ತಿಯ ಜನರಿಗೆ ಮೊದಲು ಆದ್ಯತೆ ನೀಡಲು ಷರತ್ತು ಹಾಕಲಾಗಿದೆ. ಸ್ಥಳೀಯ ಯುವಕರಿಗೆ ಈ ಸಂಸ್ಥೆಗಳು ತರಬೇತಿ ನೀಡಿ ಉದ್ಯೋಗ ನೀಡಬೇಕು ಎಂದು ಸೂಚಿಸಲಾಗಿದೆ ಎಂದರು.

ಕಾವೇರಿ ಆರತಿಯನ್ನು ಈ ದಸರಾ ವೇಳೆ ಮಾಡಲು ತರಾತುರಿಯಲ್ಲಿದ್ದೇನೆ. ಈ ವಿಚಾರವಾಗಿ ಸಚಿವ ಚೆಲುವರಾಯ ಸ್ವಾಮಿ ಅವರ ನೇತೃತ್ವದಲ್ಲಿ ಸಮಿತಿ ಮಾಡಲಾಗಿದೆ. ಈ ಸಮಿತಿ ರೂಪು-ರೇಷೆಗಳನ್ನು ಎಷ್ಟು ಬೇಗ ನೀಡುತ್ತಾರೋ ನೋಡೋಣ ಎಂದು ತಿಳಿಸಿದರು. ಎಲ್ಲಿ ಮಾಡಲಾಗುವುದು ಎಂದು ಕೇಳಿದಾಗ, ನಾನು ಜಾಗ ಪರಿಶೀಲನೆ ಮಾಡಿದ್ದೇನೆ. ಈ ವಿಚಾರವಾಗಿ ತಾಂತ್ರಿಕ ಸಮಿತಿ ಅಭಿಪ್ರಾಯ ಪಡೆಯಲಾಗಿದೆ. ನೀರು ಸಂಗ್ರಹವಿರಬೇಕು, ಅಣೆಕಟ್ಟಿನಿಂದ ಸ್ವಲ್ಪ ದೂರದಲ್ಲಿ ಮಾಡಬೇಕು. ಪಾರ್ಕಿಂಗ್ ವ್ಯವಸ್ಥೆ, ಕಲಾವಿದರು, ಪೂಜೆ ಮಾಡುವವರಿಗೆ ಜಾಗ ಕಲ್ಪಿಸಬೇಕು. ಇದಕ್ಕಾಗಿಯೇ ಪ್ರತ್ಯೇಕ ಜಾಗ ಕಲ್ಪಿಸಲಾಗುವುದು. ಬೋಟಿಂಗ್ ವ್ಯವಸ್ಥೆ ಜಾಗವೇ ಬೇರೆ, ಈ ಕಾರ್ಯಕ್ರಮದ ಜಾಗವೇ ಪ್ರತ್ಯೇಕವಾಗಿರಲಿದೆ. ಸಮಿತಿಯು ಈ ವಿಚಾರವಾಗಿ ತೀರ್ಮಾನ ಮಾಡಲಿದೆ ಎಂದರು.

ಟಿಕೆಟು ಉಂಟು, ಉಚಿತವೂ ಹೌದು: ಟಿಕೆಟ್ ವ್ಯವಸ್ಥೆ ಮಾಡಲಾಗುತ್ತದೆಯೇ ಎಂದು ಕೇಳಿದಾಗ, ಹೌದು, ಆದರೆ ಉಚಿತ ಪ್ರವೇಶವೂ ಇರುತ್ತದೆ. ಬಡವ ಆರತಿ ನೋಡಲು ಬಂದರೆ ಬೇಡ ಎನ್ನಲು ಸಾಧ್ಯವೇ. ದಸರಾದಲ್ಲಿ ಕೆಲವರು ಟಿಕೆಟ್ ಪಡೆದು ವೀಕ್ಷಣೆ ಮಾಡುತ್ತಾರೆ, ಮತ್ತೆ ಕೆಲವರು ಉಚಿತವಾಗಿ ವೀಕ್ಷಣೆ ಮಾಡುತ್ತಾರೆ. ಅದೇ ರೀತಿ ಇಲ್ಲೂ ವ್ಯವಸ್ಥೆ ಕಲ್ಪಿಸಲಾಗುವುದು. ಸಾರ್ವಜನಿಕರು ಪೂಜೆ ಸಲ್ಲಿಸಲು ಅವಕಾಶ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಬೃಂದಾವನ ಉದ್ಯಾನ ಅಭಿವೃದ್ಧಿಯಿಂದ ಅಣೆಕಟ್ಟೆಗೆ ತೊಂದರೆಯಾಗಲಿದೆ ಎಂದು ಕೆಲವು ಸಂಘಟನೆಗಳು ವಿರೋಧ ಮಾಡುತ್ತಿರುವ ಬಗ್ಗೆ ಕೇಳಿದಾಗ, ಈ ವಿಚಾರವಾಗಿ ಸಂಘಟನೆಗಳನ್ನು ಕರೆದು ಚರ್ಚೆ ಮಾಡಲಾಗುವುದು. ಅನುಮಾನಗಳು ಮೂಡುವುದು ಸಹಜ. ಇದರಲ್ಲಿ ಅವರ ತಪ್ಪೇನು ಇಲ್ಲ. ಅಣೆಕಟ್ಟು ಉಳಿಸಬೇಕಾಗಿರುವುದು ನಮ್ಮ ಕರ್ತವ್ಯ. ಅವರು ಹೇಳುವ ಮುನ್ನವೇ ರಾಜ್ಯದ ಎಲ್ಲಾ ಅಣೆಕಟ್ಟುಗಳ ಗೇಟ್ ಬದಲಾವಣೆಗೆ ನಾನು ತೀರ್ಮಾನ ಮಾಡಿದ್ದೇನೆ. ಈ ವಿಚಾರವಾಗಿ ಯಾರಾದರೂ ನಮಗೆ ಹೇಳಿದ್ದರಾ. ಟಿಬಿ ಡ್ಯಾಂ ಅಣೆಕಟ್ಟಿನ ಗೇಟ್ ಸಮಸ್ಯೆ ಎದುರಾದ ನಂತರ ಕೆಆರ್‌ಎಸ್ ಅಣೆಕಟ್ಟಿನ ಗೇಟ್ ಬದಲಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ತಪ್ಪು ಕಂಡು ಹಿಡಿಯುವುದು, ಬೇರೆಯವರ ಮೇಲೆ ಆರೋಪ ಮಾಡುವುದು, ಚಾಡಿ ಹೇಳುವುದು ಬಹಳ ಸುಲಭ. ಇವು ಕಿವಿಗೆ ಬಹಳ ಇಂಪಾಗಿರುತ್ತದೆ. ನಾವು ಎಲ್ಲಾ ಆಯಾಮಗಳಲ್ಲೂ ಪರಿಶೀಲನೆ ಮಾಡಬೇಕು ಎಂದು ಹೇಳಿದರು.

ಡ್ರೋನ್ ಮೂಲಕ ಸಮೀಕ್ಷೆ: ಕಾವೇರಿ ನದಿ ಒತ್ತುವರಿ ಹಾಗೂ ಮಲೀನ ವಿಚಾರವಾಗಿ, ನಾನು ಈಗಾಗಲೇ ಎಲ್ಲಾ ಅಣೆಕಟ್ಟುಗಳನ್ನು ಡ್ರೋನ್ ಮೂಲಕ ಸಮೀಕ್ಷೆ ಮಾಡಲಾಗಿದೆ. ಅಣೆಕಟ್ಟು ತುಂಬಿದಾಗ ಎಲ್ಲಿಯವರೆಗೆ, ಎಷ್ಟು ಮಟ್ಟದವರೆಗೆ ನೀರು ನಿಲ್ಲಲಿದೆ ಎಂದು ಗುರುತು ಮಾಡಲಾಗಿದೆ. ಮೊನ್ನೆ ನಡೆದ ಕೆರೆ ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಕೆರೆಗಳ ಸಮೀಕ್ಷೆ ಮಾಡಲು ತೀರ್ಮಾನಿಸಲಾಗಿದೆ. ಅಣೆಕಟ್ಟಿನ ಆಸ್ತಿ ಮಾಪನ ಮಾಡಲು ಸರ್ವೆ ಇಲಾಖೆಗೂ ಹೇಳಲಾಗಿದೆ ಎಂದು ತಿಳಿಸಿದರು.

ನದಿಯಿಂದ ಕುಡಿಯುವ ನೀರು ತೆಗೆದುಕೊಂಡು ಹೋಗಲಿ, ಅಣೆಕಟ್ಟಿನಿಂದ ಬೇಡ ಎಂಬ ಜೆಡಿಎಸ್ ನಾಯಕ ತಮ್ಮಣ್ಣ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಯಾರು ಅಣೆಕಟ್ಟಿನಿಂದ ನೀರು ತೆಗೆದುಕೊಂಡು ಹೋಗುತ್ತಿದ್ದಾರೆ. ತಮ್ಮಣ್ಣ ರಾಜಕೀಯ ಮಾಡಬೇಕು, ಮಾಡುತ್ತಿದ್ದಾರೆ. ಅಣೆಕಟ್ಟಿನಿಂದ ನೀರು ತೆಗೆದುಕೊಂಡು ಹೋಗಲು ನಾವು ದಡ್ಡರಲ್ಲ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಸಕ ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ದಿನೇಶ್‌ಗೂಳಿಗೌಡ ಜಿಲ್ಲಾಧಿಕಾರಿ ಡಾ.ಕುಮಾರ, ಸಿಇಒ ನಂದಿನಿ, ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಬಿಡಬ್ಲ್ಯೂಎಸ್‌ಎಸ್‌ಬಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್, ಕಾವೇರಿ ನೀರಾವರಿ ನಿಗಮದ ಎಂ.ಡಿ. ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಮಾಲೀಕನಿಗೆ 15 ವರ್ಷದ ಬಳಿಕ ಶಿಕ್ಷೆ!

ರಸ್ತೆ ಎಡಬದಿಯ ಉಂಡಬತ್ತಿ ಕೆರೆಗೆ ಉರುಳಿತ್ತು. ಕೆರೆ ನೀರಲ್ಲಿ ಟೆಂಪೋ ಮುಳುಗಿದ ಪರಿಣಾಮ ಈ ವಾಹನದಲ್ಲಿದ್ದ ಪಾಂಡವಪುರ ತಾಲೂಕು ಅರಳಕುಪ್ಪೆ ಗ್ರಾಮದ 40 ಮಂದಿಯ ಪೈಕಿ 31 ಮಂದಿ ಜಲಸಮಾಧಿಯಾಗಿದ್ದು, ಕೆಲವರು ಗಾಯಗೊಂಡು, ಬದುಕುಳಿದಿದ್ದರು. ಘಟನೆ ನಡೆದ ವೇಳೆ ಆರೋಪಿ ಚೇತನ್‌ಕುಮಾರ್ ಯಾರಿಗೂ ಮಾಹಿತಿ ನೀಡದೇ, ಗಾಯಗೊಂಡವರನ್ನು ಆಸ್ಪತ್ರೆಗೂ ಸೇರಿಸದೇ ಟೆಂಪೋ ಬಿಟ್ಟು ಪರಾರಿಯಾಗಿದ್ದ. ಆ ವಾಹನದ ಪರವಾನಗಿ ಷರತ್ತುಗಳನ್ನೂ ಪದೇ ಪದೆ ಉಲ್ಲಂಘನೆ ಮಾಡಿದ್ದ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ.

ವಾಹನದ ಆರ್‌ಸಿ ಮಾಲೀಕನಾದ ಸಂಜೀವ್‌ಕುಮಾರ್ ಟೆಂಪೋ ಪರ್ಮಿಟ್ ಷರತ್ತುಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದು ತನಿಖೆಯಿಂದ ದೃಢಪಟ್ಟಿದೆ. ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಅಂದಿನ ಸರ್ಕಲ್ ಇನ್‌ಸ್ಪೆಕ್ಟರ್ ಗೋಪಾಲಕೃಷ್ಣ ಹಾಗೂ ಸಬ್‌ಇನ್‌ಸ್ಪೆಕ್ಟರ್ ಟಿ. ಜಗದೀಶ್ ಪ್ರಕರಣ ದಾಖಲಿಸಿಕೊಂಡಿದ್ದರು. ಪ್ರಕರಣದ ತನಿಖೆ ನಡೆಸಿದ್ದ ಅಂದಿನ ಮೈಸೂರು ಗ್ರಾಮಾಂತರ ಉಪವಿಭಾಗದ ಡಿವೈಎಸ್ಪಿ ಸಿ.ಡಿ. ಜಗದೀಶ್ ಅರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾ ರೋಪಣಾ ಪಟ್ಟಿ ಸಲ್ಲಿಸಿದ್ದರು. ಕೇಸ್‌ನ ವಿಚಾರಣೆ ನಡೆಸಿದ ಮೈಸೂರಿನ 11ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ಸಂಜಯ್ ಎಂ. ಮಲ್ಲಿಕಾರ್ಜುನಯ್ಯ, ತನಿಖಾಧಿಕಾರಿ ಸಿ.ಡಿ. ಜಗದೀಶ್ ಅವರು ಸಲ್ಲಿಸಿದ್ದ 27 ಸಾಕ್ಷಿದಾರರು ಹಾಗೂ 83 ದಾಖಲೆಗಳನ್ನು ಪರಿಶೀಲಿಸಿ ಆರೋಪ ಸಾಬೀತಾದ ಕಾರಣ, ವಾಹನ ಚಾಲಕ ಚೇತನ್‌ಕುಮಾರ್‌ಗೆ ಐಪಿಸಿ ಕಲಂ 279, 337, 304(ಎ) ರೆಡ್ ವಿತ್ 187, 177 ಮತ್ತು ಐಎಂವಿ ಕಾಯ್ದೆಯಡಿ ಆರೋಪಕ್ಕೆ 3 ವರ್ಷ 6 ತಿಂಗಳು ಜೈಲು ಶಿಕ್ಷೆ ಹಾಗೂ 12,600 ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ವಾಹನದ ಮಾಲೀಕ ಸಂಜೀವ್‌ಕುಮಾರ್‌ಗೆ 1 ವರ್ಷ ಜೈಲು ಶಿಕ್ಷೆ ಹಾಗೂ 10,000 ರೂ. ದಂಡ ವಿಧಿಸಲಾಗಿದೆ. ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕಿ ಎಂ.ಎನ್. ಸೌಮ್ಯ ವಾದ ಮಂಡಿಸಿದ್ದರು.

ಪಹಲ್ಗಾಮ್ ಹತ್ಯಾಕಾಂಡದಲ್ಲಿ ಮೃತಪಟ್ಟವರ ಆತ್ಮಕ್ಕೆ ಶಾಂತಿ ಕೋರಿ ಪಂಜಿನ ಮೆರವಣಿಗೆ



ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ನರಮೇಧ ಖಂಡಿಸಿ ವಿಹೆಚ್‌ಪಿ ಪದಾಧಿಕಾರಿಗಳು ಮೈಸೂರಿನ ಗಾಂಧಿಚೌಕದಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

ಮೈಸೂರು, ಏ.25(ಎಸ್‌ಪಿಎನ್)- ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ನರಮೇದ ಖಂಡಿಸಿ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಘಟಕದ ಪದಾಧಿಕಾರಿಗಳು ಮೈಸೂರಿನ ಗಾಂಧಿ ಚೌಕದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು. ನಂತರ ಘಟನೆಯಲ್ಲಿ ಮೃತಪಟ್ಟವರಿಗೆ ಶಾಂತಿ ಕೋರಿ ಗಾಂಧಿಚೌಕದಿಂದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದವರೆಗೆ ಪಂಜಿನ ಮೆರವಣಿಗೆ ನಡೆಸಿದರು.

ಶಾಂತಿ ಸಾಕು, ಪ್ರತೀಕಾರ ಇರಲಿ: ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಹತ್ಯೆಯನ್ನು ಖಂಡಿಸಿ, ಮಾತನಾಡಿದ ಹಿಂದೂ ಮುಖಂಡ ಕೇಶವಮೂರ್ತಿ, ಕರ್ನಾಟಕದ ಇಬ್ಬರು ಸೇರಿದಂತೆ ದೇಶದ ನಾನಾ ಭಾಗದ 26 ಮಂದಿ ಹಿಂದೂಗಳನ್ನು ಹುಡುಕಿ ಸಾಯಿಸಿದ್ದಾರೆ. ನಮ್ಮ ದೇಶದಲ್ಲಿ ಬಹುಸಂಖ್ಯಾತರ ಜೀವಕ್ಕೆ ರಕ್ಷಣೆ ಇಲ್ಲವಾದ್ದಲ್ಲಿ ಬೇರೆ ಇನ್ನೆಲ್ಲಿ ಸಿಗಲು ಸಾಧ್ಯ ಎಂದು ಪ್ರಶ್ನಿಸಿದರು.

ಪ್ರವಾಸಿಗರಲ್ಲಿ ಹಿಂದೂಗಳನ್ನು ಯಾರು ಎಂದು ಖಚಿತಪಡಿಸಿಕೊಳ್ಳಲು ಉಗ್ರರು, ಕಲ್ಮಾ ಹೇಳಿಸಿದ್ದಾರೆ. ಪ್ಯಾಂಟ್ ಬಿಚ್ಚಿಸಿ ಖಚಿತ ಪಡಿಸಿಕೊಂಡಿದ್ದಾರೆ. ಕೆಲವರ ಹೆಸರು ಕೇಳಿ ತಕ್ಷಣ ತಲೆಗೆ ಗುಂಡಿಟ್ಟು ಅಮಾನುಷವಾಗಿ ಕೊಂದಿದ್ದಾರೆ. ಒಟ್ಟಿನಲ್ಲಿ ಪಹಲ್ಗಾಮ್ ಘಟನೆ ಹಿಂದೂಗಳನ್ನು ಕೊಲ್ಲಲೇಬೇಕೆಂಬ ಉದ್ದೇಶದಿಂದ ಈ ಆಕ್ರಮಣ ಮಾಡಿರುವುದು ಅಮಾನವೀಯ ಎಂದರು.

ದೇಶದ ಹಿಂದೂಗಳು ಆತಂಕದಲ್ಲಿದ್ದಾರೆ: ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಹಿಂದೂ ಪ್ರವಾಸಿಗರ ನರಮೇಧದಿಂದ ದೇಶದ ಸಮಸ್ತ ಹಿಂದೂಗಳು ಭಯಭೀತರಾಗಿದ್ದಾರೆ. ದುಃಖ ತಪ್ತರಾಗಿದ್ದಾರೆ. ದುಃಖದ ಮನಸ್ಸಿನಲ್ಲೇ ಪ್ರತಿಕಾರದ ಮನೋಭಾವ ದೇಶದ ಜನರಲ್ಲಿ ಬೆಳೆಯುತ್ತಿದೆ. ಪ್ರಧಾನಮಂತ್ರಿ ಮೋದಿ ಅವರು, ಉಗ್ರರ ನಿರ್ನಾಮಕ್ಕೆ ಯಾವ ರೀತಿ ಪ್ರತಿಜ್ಞೆ ಮಾಡುತ್ತಾರೆ ಎಂದು ತುದಿಗಾಲದಲ್ಲಿ ನಿಂತಿದ್ದಾರೆ ಎಂದರು.

ಈಗಾಗಲೇ ಈ ಘಟನೆಯ ಪ್ರತೀಕಾರವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು, ಭಾರತ-ಪಾಕಿಸ್ತಾನ ನಡುವೆ ಆಗಿದ್ದ ಸಿಂಧೂ ನದಿ ಒಪ್ಪಂದ ಅಮಾನತು ಮಾಡಿದ್ದಾರೆ. ಪಾಕಿಸ್ತಾನ ಪ್ರಜೆಗಳಿಗೆ ನೀಡಿದ್ದ 17 ಬಗೆಯ ವೀಸಾ ರದ್ದುಪಡಿಸಿದ್ದಾರೆ. ಮುಂದೆ ಮತ್ತಷ್ಟು ಕಠಿಣ ಕ್ರಮಗಳಾಗುತ್ತವೆ. ಆದರೆ, ವಿಪಕ್ಷಗಳು ಇದಕ್ಕೆ ಸ್ಪಂದಿಸಬೇಕು ಎಂದು ಮನವಿ ಮಾಡಿದರು.

ನಾವು ಪಾಕಿಸ್ತಾನ ಜಿಂದಾಬಾದ್ ಎಂದು ಹೇಳಿದ್ದವರ ಜೊತೆಯಲ್ಲಿದ್ದೇವೆ. ಶೇ.4ರಷ್ಟು ಮೀಸಲಾತಿಯನ್ನು ಮುಸ್ಲಿಮರಿಗೆ ನೀಡಿ, ಓಲೈಕೆ ಮಾಡುವವರೂ ಇದ್ದಾರೆ. ಇದರ ನಡುವೆಯೂ ಪ್ರಧಾನಮಂತ್ರಿ ಮೋದಿ ವಿರೋಧಿಗಳಿಗೆ ತಕ್ಕ ಶಾಸ್ತಿ ನೀಡುತ್ತಿರುವುದು ಸ್ವಾಗತಾರ್ಹ ವಿಚಾರ ಎಂದರು.

ನಿರ್ಧಾರ ಕೈಗೊಳ್ಳಲು ಗಟ್ಟಿತನ ಇರಬೇಕು: ಹಿರಿಯ ರಂಗಕರ್ಮಿ ಅಡ್ಡಂಡ ಕೆ.ಕಾರ್ಯಪ್ಪ ಮಾತನಾಡಿ, ಪಹಲ್ಗಾಮ್ ಘಟನೆ ಸಮಸ್ತ ಹಿಂದೂಗಳ ಹೃದಯ ಕಲಕಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಸಿಂಧೂ ನದಿ ಒಪ್ಪಂದ ರದ್ದು ಮಾಡಿದ್ದಾರೆ. ಈ ನಿರ್ಧಾರ ಪಾಕಿಸ್ತಾನದ ಆದಾಯದ ಮೂಲಕ್ಕೆ ಕೊಡಲಿ ಪೆಟ್ಟು, ಅಲ್ಲದೆ, 17 ಬಗೆಯ ವೀಸಾ ರದ್ದು ಮಾಡಲಾಗಿದೆ. ವಿರೋಧಿಗಳ ವಿರುದ್ಧ ಮತ್ತಷ್ಟು ಗಟ್ಟಿ ನಿರ್ಧಾರ ಮಾಡಲು ನರೇಂದ್ರ ಮೋದಿಯವರಿಂದ ಮಾತ್ರ ಸಾಧ್ಯ ಎಂದರು.

ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಕಲಂ 370 ರದ್ದುಪಡಿಸಲು ಯಾರಿಂದಲೂ ಸಾಧ್ಯವಿಲ್ಲ ಎನ್ನುವ ಕಾಲವಿತ್ತು ಅದನ್ನು ವಾಪಸ್ಸು ಪಡೆದಿದ್ದು, ನರೇಂದ್ರ ಮೋದಿ ಸರ್ಕಾರ. ನೆಹರು ನಿರ್ಧಾರವನ್ನು ವಿರೋಧಿಸಿ ಪ್ರತಿಭಟನೆ ಮಾಡಿದ್ದ ಶ್ಯಾಮ್ ಪ್ರಸಾದ್ ಮುಖರ್ಜಿ ಅವರು ಜೈಲಿನಲ್ಲೇ ಸಾವನ್ನಪ್ಪಿದರು. ಈ ಹಿಂದೆ ಇದ್ದ ಸರ್ಕಾರ ಮುಸ್ಲಿಂ ಓಲೈಕೆಯಲ್ಲಿ ಕಾಲ ಕಳೆದಿತ್ತು. ಆದರೆ, ಇಂದಿನ ಪ್ರಧಾನ ಮಂತ್ರಿ ನರೇಂದ್ರ ಮೋದಿ, ದೇಶದ ಹಿತವನ್ನು ಬಲಿಕೊಡುವ ನಿರ್ಧಾರ ಎಂದಿಗೂ ತೆಗೆದುಕೊಳ್ಳುವುದಿಲ್ಲ ಎಂದರು.

ಮೈಸೂರು ಸುರಕ್ಷಿತವಲ್ಲ: ಕೆಲವು ದಿನಗಳ ಹಿಂದೆ ಮೈಸೂರಿನ ಉದಯಗಿರಿ ನಿವಾಸಿ, ಉದ್ಯಮಿ ಸತೀಶ್ ಕೆಲಸಕ್ಕೆ ಇಟ್ಟು ಕೊಂಡವರಿಂದಲೇ ಸಾಕಷ್ಟು ತೊಂದರೆ ಎದುರಿಸಬೇಕಾಗಿ ಬಂದು, ಅವರ ಮೇಲೆ ಸುಳ್ಳು ಆರೋಪ ಮಾಡಿ, ಜೈಲಿಗೆ ಕಳುಹಿಸಿದರು. ಇಂತಹ ಅಯ್ಯೋ ಪಾಪ ಮನಸ್ಥಿತಿಯಿಂದ ಹಿಂದೂಗಳು ಹೊರಬರಬೇಕು. ನಾನು ಒಕ್ಕಲಿಗ, ಕೊಡವ, ಕುರುಬ, ಬ್ರಾಹ್ಮಣ, ಇವ ಎನ್ನುವುದನ್ನು ಬಿಟ್ಟು ನಾವೆಲ್ಲರೂ ಹಿಂದೂ ಎಂಬ ಒಗ್ಗಟ್ಟಿನ ಮನೋಭಾವದಿಂದ ಬದುಕುವುದನ್ನು ಕಲಿಯಬೇಕು. ಇಲ್ಲದಿದ್ದರೆ ಸತೀಶ್ ಅವರಿಗಾದ ಗತಿ ಮಿಕ್ಕವರಿಗೂ ಆಗುತ್ತದೆ ಮುಂದೆ ಹಿಂದೂಗಳು ಸಾರ್ವಜನಿಕವಾಗಿ ಒಗ್ಗಟ್ಟು ಪ್ರದರ್ಶನ ಮಾಡದಿದ್ದರೆ ಬದುಕಲಿಕ್ಕೆ ಮೈಸೂರು ಸುರಕ್ಷಿತವಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಮೊಂಬತ್ತಿ ಮೆರವಣಿಗೆಯಲ್ಲಿ ಬಿಜೆಪಿ ನಗರ ಘಟಕದ ಅಧ್ಯಕ್ಷ ಎಲ್.ನಾಗೇಂದ್ರ, ಮುಖಂಡರಾದ ಮಧು ಶಂಕರ್, ಮಹೇಶ್ ಕಾಮತ್, ಜಗದೀಶ್ ಹೆಬ್ಬಾರ್, ನಾಗರಾಜು, ಮೋಹನ್ ಪೈ, ಅಂಬಿಕಾ, ಪುನೀತ್, ನಟ ಜಯಪ್ರಕಾಶ್ (ಜೆಪಿ.), ಜೋಗಿ ಮಂಜು, ಸವಿತಾ ಘಾಟ್ಕೆ ವೆಂಕಟೇಶ್, ವೆಂಕಟರಾಮು ಇಲವಾಲ, ಶಿವರಾಮು, ಗಿರಿಧರ್, ಕೃಷ್ಣಮೂರ್ತಿ ರಾವ್ ಸೇರಿದಂತೆ ಮತ್ತಿತರರು ಇದ್ದರು.

ಉಗ್ರರ ಸಂಪೂರ್ಣ ನಿಗ್ರಹಕ್ಕೆ ಹೊಸ ಕಾನೂನು ಜಾರಿಗೆ ತಜ್ಞರ ಸಮಿತಿ ರಚಿಸಿ

• 7 ಅಂಶಗಳ ನಿರ್ಣಯವನ್ನು ರಾಷ್ಟ್ರಪತಿಗೆ ಕಳುಹಿಸಿದ ಮೈಸೂರು ಕಾಂಗ್ರೆಸ್ • ಪ್ರತಿಜ್ಞಾವಿಧಿ ಸ್ವೀಕಾರ • ದೇಶದಲ್ಲಿ ಈಗ ಐಕ್ಯತೆ ಮುಖ್ಯ • ಪಹಲ್ಗಾಮ್ ಘಟನೆ ಬಗ್ಗೆ ಸಮಗ್ರ ಮಾಹಿತಿ ನೀಡಿ • ಈವರೆಗಿನ ದಾಳಿ ಬಗ್ಗೆಯೂ ವಿವರ ಕಲ್ಪಿಸಿ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಪಹಲ್ಗಾಮ್ ಪ್ರಕರಣದ ಹಿನ್ನೆಲೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಭಯೋತ್ಪಾದನಾ ನಿಗ್ರಹಕ್ಕೆ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.

ಮೈಸೂರು, ಏ.25(ಬಿಎಲ್‌ಯು)- ಭಯೋತ್ಪಾದನೆಯ ಸಂಪೂರ್ಣ ನಿಗ್ರಹಕ್ಕೆ ಹೊಸ ಕಾನೂನು ಜಾರಿಗೆ ತಜ್ಞರ ಸಮಿತಿ ರಚನೆ ಸೇರಿದಂತೆ ಹಲವು ತೀರ್ಮಾನ ಕೈಗೊಳ್ಳಬೇಕು ಎಂದು ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಕೇಂದ್ರ ಸರ್ಕಾರವನ್ನು ಆಗ್ರಹಿಸಿ ನಿರ್ಣಯ ಕೈಗೊಂಡಿದೆ.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪಹಲ್ಗಾಮ್ ಪ್ರಕರಣದ ಹಿನ್ನೆಲೆಯಲ್ಲಿ ಭಯೋತ್ಪಾದನಾ ವಿರೋಧಿ ಪ್ರತಿಜ್ಞಾ ವಿಧಿ ಬೋಧನೆ ಸಂದರ್ಭದಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ಇದನ್ನು ರಾಷ್ಟ್ರಪತಿಗಳಿಗೆ ರವಾನಿಸಲು ತೀರ್ಮಾನಿಸಲಾಯಿತು.

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ಮಾರಣ ಹೋಮವನ್ನು ಕಾಂಗ್ರೆಸ್ ತೀವ್ರವಾಗಿ ಖಂಡಿಸುತ್ತದೆ. ಈ ವಿಚಾರವಾಗಿ ದೇಶದ ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ನಾಗರಿಕ ಸಂಘಟನೆಗಳು ದೇಶದಲ್ಲಿ ಏಕತೆಯ ದೃಷ್ಟಿಯಿಂದ ಒಟ್ಟಾಗಿ ನಿಲ್ಲಬೇಕು.


ಪಹಲ್ಗಾಮ್ ಘಟನೆಗೆ ನಿಖರವಾದ ಕಾರಣಗಳ ಬಗ್ಗೆ ಕೇಂದ್ರದ ಬಿಜೆಪಿ ಸರ್ಕಾರ ದೇಶದ ನಾಗರಿಕರಿಗೆ ದಾಖಲೆ ಸಮೇತ ಮಾಹಿತಿ ನೀಡಬೇಕು. 2002 ರಲ್ಲಿ ಜಾರಿಗೆ ಬಂದ ಪ್ರಿವೆನ್ಷನ್ ಆಫ್ ಟೆರರಿಸಂ ಆಕ್ಟ್ (ಪಿಓಟಿಎ) ಸಂಪೂರ್ಣ ಯಶಸ್ಸು ಕಾಣದ ಹಿನ್ನೆಲೆ ಭಯೋತ್ಪಾದನೆಯ ಸಂಪೂರ್ಣ ನಿಗ್ರಹಕ್ಕೆ ಹೊಸ ಕಾನೂನು ಜಾರಿಗೆ ತಜ್ಞರ ಸಮಿತಿ ರಚನೆ ಮಾಡಬೇಕು.

ಭಯೋತ್ಪಾದನೆಯ ಸಂಪೂರ್ಣ ನಿಗ್ರಹಕ್ಕೆ ಅಂತರಾಷ್ಟ್ರೀಯ ಮಟ್ಟದ ರಾಜಕೀಯ ಹಾಗೂ ಶಾಂತಿ ಸಾಮರಸ್ಯದ ಸಂಸ್ಥೆಗಳಾದ ಸಾರ್ಕ್, ಜಿ ಟ್ವೆಂಟಿ, ಜಿ 9 ಹಾಗೂ ಏಷ್ಯಾ ರಾಷ್ಟ್ರಗಳ ಒಕ್ಕೂಟದಲ್ಲಿ ಹೊಸ ಒಡಂಬಡಿಕೆಗಾಗಿ ಮುಂದಾಗಬೇಕು.

ಈ ತನಕ ನಡೆದಿರುವ ಪುಲ್ವಾಮಾ, ಬಾಲಕೋಟ್, ಉರಿ ಸೇರಿದಂತೆ ಉಗ್ರ ಇತರೆ ದಾಳಿಗಳ ಬಗ್ಗೆ ಈಗಾಗಲೇ ನಡೆದಿರುವ ತನಿಖಾ ವರದಿಯನ್ನು ದೇಶದ ಮುಂದಿಡಬೇಕು.

ಹೀಗೆ 7 ಅಂಶಗಳ ನಿರ್ಣಯ ಕೈಗೊಂಡ ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ, ಭಯೋತ್ಪಾದನೆ ಯನ್ನು ಮುಕ್ತಗೊಳಿಸಿ, ದೇಶದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ವಿಶ್ವ ಮೈತ್ರಿ ಬೌದ್ಧ ವಿಹಾರದ ಡಾ.ಕಲ್ಯಾಣ ಸಿರಿಬಂತೆ ಜೀ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.04.2025 ಶನಿವಾರ, ಮಳೆ ನಕ್ಷತ್ರ: ಅಶ್ವಿನಿ 13.04.2025 ರಿಂದ 26.04.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಮತ್ತು ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಚರ್ಮರೋಗ ತಪಾಸಣಾ ಶಿಬಿರ ಹಾಗೂ ಪುನಶ್ಚೇತನ (ರೆಜುವಿನೇಷನ್) ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆಸ್ಪತ್ರೆಯ ಶಾಲಾಕ್ಯತಂತ್ರ ಸ್ನಾತಕೋತ್ತರ ವಿಭಾಗದಿಂದ ನೇತ್ರ, ಕಿವಿ, ಮೂಗು, ಗಂಟಲು ಮತ್ತು ಶಿರೋರೋಗಗಳ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಕಾನೂನು ಮಹಾವಿದ್ಯಾಲಯ, ಕುವೆಂಪುನಗರ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ಎನ್ ಎಂಪಿರಿಕಲ್ ಫ್ಯಾಕ್ಟ್ಸ್ ಆಫ್ ಮೋಟಾರ್ ವೆಹಿಕಲ್ ಇನ್ಸೂರೆನ್ಸ್ ಕುರಿತು ಕಾರ್ಯಾಗಾರ, ಮುಖ್ಯ ಅತಿಥಿಗಳು : ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ. ದಿನೇಶ್, ನ್ಯಾಯಾಧೀಶ ಕೆ. ಅಫ್ತಾಬ್, ಪೊಲೀಸ್ ಇನ್ಸ್‌ಪೆಕ್ಟರ್ ಎಸ್. ಮಹದೇವಸ್ವಾಮಿ, ವಕೀಲ ಬಿ. ಶರತ್‌ಕುಮಾರ್, ಜೆಎಸ್‌ಎಸ್ ಲಾ ಕಾಲೇಜು ಚೀಫ್ ಎಕ್ಸಿಕ್ಯೂಟಿವ್ ಪ್ರೊ. ಕೆ.ಎಸ್. ಸುರೇಶ್, ಪ್ರಿನ್ಸಿಪಾಲ್ ಡಾ. ಎನ್. ವಾಣಿಶ್ರೀ, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ಗೀತಯಾನ-2025, ಅಧ್ಯಕ್ಷತೆ : ಜೆಎಸ್‌ಎಸ್‌ಎಸ್ ಅಧ್ಯಕ್ಷ ಡಾ. ಎಂ. ಜಗನ್ನಾಥ್ ಶೆಣೈ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಎಂ. ಶಿವಕುಮಾರ್, ಸಿಇಓ ಆರ್.ಕೆ. ಭರತ್, ಕಾರ್ಯದರ್ಶಿ ಶ್ರೀಮತಿ ಅನುಪಮಾ ಪಂಡಿತ್, ಸ್ಥಳ: ಎಂ. ಗೋವಿಂದರಾವ್ ಮೆಮೋರಿಯಲ್ ಹಾಲ್, ಬೆಳಗ್ಗೆ 10ಕ್ಕೆ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಆರ್ಟಿಸ್ಟ್ರಿ ಶೋ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್. ರಸ್ತೆ, ಸಬ್ ಅರ್ಬನ್ ಬಸ್ ನಿಲ್ದಾಣದ ಹತ್ತಿರ.

■ **ಮೈಸೂರು ಡಿಸ್ಟ್ರಿಕ್ಟ್ ಕೆಮಿಸ್ಟ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್, ಸುವರ್ಣ ಕರ್ನಾಟಕ ಕೆಮಿಸ್ಟ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ :** ಎಂಡಿಸಿಡಿಎ ಸಮಾವೇಶ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಡೆಪ್ಯೂಟಿ ಡ್ರಗ್ ಕಂಟ್ರೋಲರ್, ಮೈಸೂರು ವಿಭಾಗ ಬಿ.ಪಿ. ಅರುಣ್, ಚಾರ್ಟರ್ಡ್ ಅಕೌಂಟೆಂಟ್ ವಿಶ್ವಾಸ್‌ಕೀರ್ತಿ ಕುಮಾರ್, ವಾಸೀಂ ಉರ್ ರೆಹಮಾನ್ ಶರೀಫ್, ಆಶಾಲತಾ, ಗೌರವ ಅತಿಥಿಗಳು : ಹರೀಶ್, ರಮೇಶ್ ನಿಡವಾಣಿ, ಅಧ್ಯಕ್ಷತೆ : ಎಂಡಿಸಿಡಿಎ ಅಧ್ಯಕ್ಷ ಎಸ್. ಮಂಜುನಾಥ್, ಸ್ಥಳ: ನಿತ್ಯೋತ್ಸವ ಕನ್ವೆನ್ಷನ್ ಹಾಲ್, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 2 ರಿಂದ.

■ **ಶಾರದಾ ವಿಲಾಸ ಕಾಲೇಜು :** ಸಂಪ್ರತಿಭೋತ್ಸವ, ವಿದ್ಯಾರ್ಥಿ ಫೋರಂ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಆದಿಚುಂಚನಗಿರಿ ವಿವಿ ಕುಲಪತಿ ಪ್ರೊ. ಎಂ.ಎ. ಶೇಖರ್, ಗೌರವ ಅತಿಥಿಗಳು: ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಕಾರ್ಯದರ್ಶಿ ಆರ್. ನರಸಿಂಹ, ಹಿರಿಯ ಸದಸ್ಯ ಎಸ್.ಎಲ್. ರಾಮಚಂದ್ರ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಸ್ಥಳ: ಎಸ್‌ವಿಇಐ ಮೈದಾನ, ಶಾರದಾ ವಿಲಾಸ ಕಾಲೇಜು, ಬೆಳಗ್ಗೆ 10ಕ್ಕೆ.

■ **ರಿಸೆಪ್ಷನ್ ಕಮಿಟಿ-ಆಲ್ ಇಂಡಿಯಾ ಇನ್ಸೂರೆನ್ಸ್ ಪೆನ್ಷನರ್ಸ್ ಅಸೋಸಿಯೇಷನ್ :** ಅನ್ ಎಂಪ್ಲಾಯ್‌ಮೆಂಟ್, ಅಂಡರ್ ಎಂಪ್ಲಾಯ್‌ಮೆಂಟ್ ಮತ್ತು ಜಾಬ್‌ಲೆಸ್ ಗ್ರೋತ್ ಕುರಿತು ವಿಚಾರ ಸಂಕಿರಣ, ಭಾಷಣಕಾರರು : ಸಿಐಟಿಯು ಜನರಲ್ ಸೆಕ್ರೆಟರಿ ಮೀನಾಕ್ಷಿ ಸುಂದರಮ್, ಹೆಚ್.ಎಸ್. ಸುನಂದ, ಎಸ್.ಎಸ್. ನಾಗೇಶ್, ಅಧ್ಯಕ್ಷತೆ : ವಿಜಯಪುರ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿವಿ ವಿಶ್ರಾಂತ ಕುಲಪತಿ ಶ್ರೀಮತಿ ಸಬಿಹಾ ಭೂಮಿಗೌಡ, ಸ್ಥಳ: ಗಾನಭಾರತೀ ಸಂಗೀತಾ ಸಭಾ, ವೀಣೆ ಶೇಷಣ್ಣ ಭವನ, ಬೆಳಗ್ಗೆ 10.30ಕ್ಕೆ

■ **ಮೈಸೂರು ವಿವಿ, ಡಾ. ಬಿ.ಆರ್. ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ಸಂದರ್ಶಕ ಪ್ರಾಧ್ಯಾಪಕ ಪ್ರೊ. ರಹಮತ್ ತರೀಕೆರೆ ಅವರಿಂದ ಡಾ. ಅಂಬೇಡ್ಕರ್ ಅವರ ಸಾಮಾಜಿಕ ಪ್ರಜ್ಞೆ ಕುರಿತು ವಿಶೇಷ ಉಪನ್ಯಾಸ, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಡಾ. ಬಿ.ಆರ್. ಅಂಬೇಡ್ಕರ್ ಕೇಂದ್ರ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಡಾ. ರಾಜ್‌ಕುಮಾರ್ ರಂಗ ಪರಿಷತ್ತು :** ರಾಜ್ಯ ಮಟ್ಟದ ಡಾ. ರಾಜ್ ರಂಗರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಕರಾಮುವಿವಿ ವಿಶ್ರಾಂತ ಕುಲಪತಿ ಡಾ. ಎನ್.ಎಸ್. ರಾಮೇಗೌಡ, ಅಧ್ಯಕ್ಷತೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಮುಖ್ಯ ಅತಿಥಿಗಳು : ಡಾ.ಎಸ್.ಪಿ. ಯೋಗಣ್ಣ, ಡಾ. ಎಸ್. ಬಸವರಾಜಪ್ಪ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 4ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ - 877, ಕಥೆ ಹೇಳುವವರು : ಕುಮಾರಿ ಜ್ಯೋತಿ ಸೋಮರಾಜು, ಶಿಕ್ಷಕಿ, ವಿಸ್ಡಮ್ ಶಾಲೆ, ನಂಜನಗೂಡು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹೀಪಾಲಾನಂದ ಅವರಿಂದ ಇನ್‌ಸೈಟ್ಸ್ ಫ್ರಂ ಪ್ಯಾರಾಬಲ್ಸ್ ಆಫ್ ಶ್ರೀರಾಮಕೃಷ್ಣ-4 ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಬಿಎಸ್‌ಎಸ್ ವಿದ್ಯೋದಯ :** ಭಗಿನಿ ಸಂಗೀತೋತ್ಸವ, ವಿದುಷಿ ಸುಮಂತ್ ಮಂಜುನಾಥ್ ಮತ್ತು ವಿದ್ವಾನ್ ಹೃಷಿಕೇಶ್ ಮುಜುಮ್‌ದಾರ್ ಅವರಿಂದ ವಯೋಲಿನ್ ವಾನ್ಸುರಿ ವಾದನ, ಸ್ಥಳ: ಶಾಲಾ ಸಭಾಂಗಣ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.

■ **ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು :** ಬೆಳಗ್ಗೆ 10ಕ್ಕೆ 'ವಿದ್ಯುತ್-2025' ಸಾಂಸ್ಕೃತಿಕ ಉತ್ಸವ, ಬೆಳಗ್ಗೆ 10ಕ್ಕೆ ಲಿಟರೇಚರ್ ಕಾರ್ನಿವಾಲ್, ಬೆಳಗ್ಗೆ 11ಕ್ಕೆ ದಿ ಆಡ್ ವೆಂಚರ್, ಬೆಳಗ್ಗೆ 11.30ಕ್ಕೆ ಸ್ಟ್ರೈಕರ್ಸ್ ಅರೆನಾ, ಮಧ್ಯಾಹ್ನ 2ಕ್ಕೆ ಕ್ಲಚ್ ಕಲ್ಚರ್, ಸಂಜೆ 6ಕ್ಕೆ ಹಿನ್ನೆಲೆ ಗಾಯಕಿ ಶಿರ್ಲಿ ಸೆಟಿಯಾ ಅವರ ತಂಡದಿಂದ ಬಾಲಿವುಡ್ ನೈಟ್ ಸಂಗೀತ ಸಂಜೆ, ಸಂಜೆ 7ಕ್ಕೆ ಅಲ್ಯೂಮ್ನಿ ಫೆಲಿಸಿಟೇಷನ್, ಸ್ಥಳ: ಕಾಲೇಜು ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ-ಡಾ. ವಿ. ರಂಗನಾಥ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ : ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ -ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮನೆ ಮನೆಯ ಹಣತೆ -ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು-ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಹೈದರಾಬಾದ್ ಸಹೋದರರು-ಯುಗಳ ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ- ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ- ಮೈಸೂರಿನ ಶಕ್ತಿಧಾಮ ವಿದ್ಯಾಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ ಸಹದೇವನ ಗುಟ್ಟು, ಮೂಲಕಥೆ-ಮನು, ಬಾನುಲಿ ನಾಟಕ ರೂಪ-ಎಸ್.ಕೆ.ಸುಬ್ಬಣ್ಣ, ನಿರ್ಮಾಣ-ಪ್ರಭುಸ್ವಾಮಿ ಮಳಿಮಠ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್‌ವಾಣಿ-ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಾವಯುವ ಕೃಷಿಯಲ್ಲಿ ಸಿರಿಧಾನ್ಯಗಳ ಮಹತ್ವ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಬೇಸಾಯ ತಜ್ಞರಾದ ಡಾ.ಸಿ.ಎಂ. ಸುನೀಲ್ ಅವರೊಂದಿಗೆ ಸಂದರ್ಶನ, ಸಂದರ್ಶಕರು : ಎನ್. ಕೇಶವಮೂರ್ತಿ, 8.00 ಸವಿನೆನಪು-ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಂ. ವಿಕಾಸ್ ಬಾಬು- ಶಹನಾಯ್ ವಾದನ

ಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ದಪ್ಪಾಜಿ ಕ್ಷೇತ್ರಗಳ ಅಭಿವೃದ್ಧಿ ಪ್ರಾಧಿಕಾರ ರಚನೆಗೆ ವಿರೋಧ

ಮೈಸೂರು, ಏ.25(ಎಸ್‌ಬಿಡಿ)– ಶ್ರೀ ಮಂಟೇಸ್ವಾಮಿ, ಶ್ರೀ ರಾಚಪ್ಪಾಜಿ, ಶ್ರೀ ಸಿದ್ದಪ್ಪಾಜಿ ಪುಣ್ಯಕ್ಷೇತ್ರಗಳ ಅಭಿವೃದ್ಧಿ ಪ್ರಾಧಿಕಾರ ರಚಿಸುವ ರಾಜ್ಯ ಸಚಿವ ಸಂಪುಟದ ನಿರ್ಣಯಕ್ಕೆ ಶ್ರೀ ಮಂಟೇಸ್ವಾಮಿ ಮಠ (ಮಳವಳ್ಳಿ, ಆದಿ–ಹೊನ್ನಾಯಕನಹಳ್ಳಿ ಮತ್ತು ಶ್ರೀ ಕಪ್ಪಡಿ ಕ್ಷೇತ್ರ)ದ ಮಠಾಧಿಪತಿ ಶ್ರೀ ಎಂ.ಎಲ್. ವರ್ಚಸ್ವೀ ಶ್ರೀಕಂಠ ಸಿದ್ದಲಿಂಗ ರಾಜೇ ಅರಸ್ ವಿರೋಧ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಈ ನಿರ್ಣಯವನ್ನು ಕೂಡಲೇ ಹಿಂಪಡೆಯುವಂತೆ ಸರ್ಕಾರವನ್ನು ಆಗ್ರಹಿಸಿದ್ದಾರೆ.



ಶ್ರೀ ಮಂಟೇಸ್ವಾಮಿ, ಶ್ರೀ ರಾಚಪ್ಪಾಜಿ ಹಾಗೂ ಶ್ರೀ ಸಿದ್ದಪ್ಪಾಜಿ ನೆಲೆಯಾಗಿರುವ ಪುಣ್ಯ ಕ್ಷೇತ್ರಗಳು ಹಾಗೂ ಇದಕ್ಕೆ ಹೊಂದಿಕೊಂಡಿರುವ ಮಠಗಳು ಸುಮಾರು ಐದು ಶತಮಾನಗಳಷ್ಟು ಪುರಾತನವಾದ ಆಧ್ಯಾತ್ಮಿಕ ಹಾಗೂ ಸಾಂಪ್ರದಾಯಿಕ ಪರಂಪರೆಯನ್ನು ಹೊಂದಿವೆ. ಇದೀಗ ಚಿಕ್ಕಲ್ಲೂರು, ಕಪ್ಪಡಿ, ಬಿ.ಜಿ.ಪುರ, ಕುರುಬನಕಟ್ಟೆ ಹಾಗೂ ಆದಿಹೊನ್ನಾಯಕನಹಳ್ಳಿ ಪುಣ್ಯಕ್ಷೇತ್ರಗಳಿಗೆ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲು ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸ ಲಾಗಿದೆ. ಇದನ್ನು ಶ್ರೀ ಮಳವಳ್ಳಿ ಮಂಟೇ ಸ್ವಾಮಿ ಮಠವು ತೀವ್ರವಾಗಿ ವಿರೋಧಿಸುತ್ತದೆ.

ಈ ಪುಣ್ಯಕ್ಷೇತ್ರಗಳ ಆಚರಣೆ, ಸಂಪ್ರದಾಯ, ಸಂಸ್ಕೃತಿ, ಆಚಾರ–ವಿಚಾರಗಳು ಐತಿಹಾಸಿಕ ಹಾಗೂ ಸಮುದಾಯ ನಂಬಿಕೆಗಳಾಗಿವೆ. ಮುಖ್ಯವಾಗಿ ನೀಲಗಾರರ ನಂಬಿಕೆಗಳು ತಲತಲಾಂತರಗಳಿಂದ ನಡೆದುಕೊಂಡು ಬಂದಿವೆ. ಈ ಕ್ಷೇತ್ರಗಳ ಪಾವಿತ್ರ್ಯತೆಯನ್ನು ಎರಡು ಅನುವಂಶಿಕ ಕುಟುಂಬಗಳು ಅತೀವ ಶ್ರದ್ಧೆ, ಭಕ್ತಿ, ನಂಬಿಕೆ ಗಳಿಂದ ರಕ್ಷಿಸುತ್ತಾ ಪೋಷಿಸಿಕೊಂಡು ಬಂದಿವೆ. ಆದರೆ ಶ್ರೀಮಠದ ಮಠಾಧಿ ಪತಿಗಳನ್ನಾಗಲೀ, ಪಾಲಕರ ನ್ನಾಗಲೀ ಸಂಪರ್ಕಿಸದೆ, ಯಾರ ಅಭಿಪ್ರಾಯವನ್ನೂ ಪಡೆಯದೆ ಸರ್ಕಾರ ಏಕಾಏಕಿ ಈ ನಿರ್ಧಾರ ತೆಗೆದುಕೊಂಡಿದೆ. ಇದು ಧಾರ್ಮಿಕ ಸ್ವಾಯತ್ತತೆಯ ಮೇಲಿನ ನೇರ ಹಸ್ತಕ್ಷೇಪ ಹಾಗೂ ಐತಿಹಾಸಿಕವಾಗಿ ನಡೆದುಕೊಂಡು ಬಂದಿರುವ ಸಂಪ್ರದಾಯಗಳ ಕಡೆಗಾಣಿಕೆಗೆ ಸಮಾನವಾಗಿದೆ.

ಶ್ರೀ ಮಳವಳ್ಳಿ ಮಂಟೇಸ್ವಾಮಿ ಮಠವು ಇಂತಹ ಯಾವುದೇ ಅಭಿವೃದ್ಧಿ ಪ್ರಾಧಿಕಾರ ರಚನೆಯನ್ನು ಬೆಂಬಲಿಸುವುದಿಲ್ಲ. ಸಚಿವ ಸಂಪುಟದ ಈ ನಿರ್ಧಾರ ಅನಧಿಕೃತ ಹಾಗೂ ಅನಗತ್ಯ. ಅಲ್ಲದೆ ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಂಪರೆಯ ಮೇಲಿನ ದಾಳಿ ಎಂದು ಪರಿಗಣಿಸುವಂತಿದೆ. ಆದ್ದರಿಂದ ಈ ಅಭಿವೃದ್ಧಿ ಪ್ರಾಧಿಕಾರ ರಚನೆಯ ಪ್ರಸ್ತಾವನೆಯನ್ನು ಈ ಕೂಡಲೇ ಹಿಂಪಡೆಯಬೇಕು. ನಮ್ಮಂತಹ ಪ್ರಾಚೀನ ಧಾರ್ಮಿಕ ಮಠಗಳು/ ಸಂಸ್ಥೆಗಳ ಸ್ವಾಯತ್ತತೆಯನ್ನು ಗೌರವಿಸಬೇಕು. ಪುಣ್ಯಕ್ಷೇತ್ರಗಳ ಮೇಲೆ ಪರಿಣಾಮ ಬೀರುವ ಯಾವುದೇ ಕ್ರಮ ಕೈಗೊಳ್ಳುವುದಕ್ಕೆ ಮುಂಚೆ ಸಂಬಂಧಪಟ್ಟವರೊಂದಿಗೆ ಚರ್ಚಿಸಬೇಕು.

ಆಕ್ಷೇಪಣೆ ಸಲ್ಲಿಕೆ



ಜಾತಿ ಗಣತಿ ವರದಿಯಲ್ಲಿ ಒಕ್ಕಲಿಗರಿಗೆ ಆಗಿರುವ ಅನ್ಯಾಯಕ್ಕೆ ಆಕ್ಷೇಪಣೆಯನ್ನು ಮೈಸೂರು–ಚಾಮರಾಜನಗರ ಒಕ್ಕಲಿಗರ ಸಂಘದ ವತಿಯಿಂದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮೈಸೂರಲ್ಲಿ ಶುಕ್ರವಾರ ಸಲ್ಲಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಮರಿಸ್ವಾಮಿ, ನಿರ್ದೇಶಕರಾದ ಎ.ರವಿ, ಮುಖಂಡರಾದ ಕುಂಬಾರಕೊಪ್ಪಲ್ ಚೇತನ್, ಮಂಚೇಗೌಡನ ಕೊಪ್ಪಲು ರವಿ(ಡೆಲ್ಲಿ), ಸುಶೀಲಾ ನಂಜಪ್ಪ ಇತರರಿದ್ದಾರೆ. ಇದೇ ವೇಳೆ ಡಿ.ಕೆ.ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು.

ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣರಿಗೆ ಸಚಿವ ಸ್ಥಾನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಕೊಡವರ ಮನವಿ

● ಮೈಸೂರಲ್ಲಿ ಮುಖ್ಯಮಂತ್ರಿಗಳ ಭೇಟಿ ಮಾಡಿದ ಕೊಡವರ ನಿಯೋಗ ● 'ಕೊಡವರು' ಪದನಾಮ; ಬೆಂಗಳೂರು ಕೊಡವ ಸಮಾಜಕ್ಕೆ 7 ಎಕರೆ ಭೂಮಿ ಕಲ್ಪಿಸಿಕೊಟ್ಟಿದ್ದಕ್ಕೆ ಕೃತಜ್ಞತೆ ಸಲ್ಲಿಕೆ ● ಆದಿಮ ಸಂಜಾತ ಕೊಡವ ಜನಾಂಗದ ಪೊನ್ನಣ್ಣರಿಗೆ ಸಚಿವ ಸ್ಥಾನ ಪ್ರಾತಿನಿಧ್ಯ ಕಲ್ಪಿಸಲು ಕೋರಿಕೆ

ಮೈಸೂರು, ಏ.25(ಎಸ್‌ಬಿಡಿ)– ಕೊಡಗು ಜಿಲ್ಲೆ, ವಿರಾಜಪೇಟೆಯ 'ಅಖಿಲ ಕೊಡವ ಸಮಾಜ' ನೇತೃತ್ವದ ಕೊಡವರ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆದ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ನೀಡುವಂತೆ ಮನವಿ ಮಾಡಿದೆ.

ಮೈಸೂರು ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಶುಕ್ರವಾರ ಭೇಟಿ ಮಾಡಿ ಮನವಿ ಸಲ್ಲಿಸಿದ ನಿಯೋಗವು, ಕೊಡಗು ಜಿಲ್ಲೆಯ ಬಹುಕಾಲದ ಸಮಸ್ಯೆಗಳ ಪರಿಹಾರ ಹಾಗೂ ಅಭಿವೃದ್ಧಿ ಜೊತೆಗೆ ರಾಜಕೀಯ ಪ್ರಾತಿನಿಧ್ಯದ ದೃಷ್ಟಿಯಿಂದ ಭಾಷಾ ಅಲ್ಪಸಂಖ್ಯಾತ ಆಧಿಮಸಂಜಾತ ಕೊಡವ ಜನಾಂಗಕ್ಕೆ ಸೇರಿದ ಎ.ಎಸ್. ಪೊನ್ನಣ್ಣನವರಿಗೆ ಸಚಿವ ಸ್ಥಾನ ಕಲ್ಪಿಸಲೇ ಬೇಕೆಂದು ಒತ್ತಾಯಿಸಿದರು. ಮನವಿ ಸ್ವೀಕರಿಸಿದ ಮುಖ್ಯಮಂತ್ರಿಗಳು, ಈ ನಿಟ್ಟಿನಲ್ಲಿ ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

'ಅಖಿಲ ಕೊಡವ ಸಮಾಜ'ದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಿಯಪ್ಪ, ಉಪಾಧ್ಯಕ್ಷ ಅಜ್ಜಿಕುಟ್ಟಿರ ಮಾದಯ್ಯ, ಗೌರವ ಕಾರ್ಯದರ್ಶಿ ತೀತಿಯಂಡ ವಿಜಯ್ ಕುಮಾರ್, ಖಜಾಂಚಿ ಮಂಡೇ ಪಂಡ ಮುತ್ತಣ್ಣ, ಜಂಟಿ ಕಾರ್ಯದರ್ಶಿ ಗಳಾದ ನಂದೇಟಿರ ಮಾದಪ್ಪ ಹಾಗೂ ಮೂವೆರ ರೇಖಾ ಪ್ರಕಾಶ್, 'ಮೈಸೂರು ಕೊಡವ ಸಮಾಜ'ದ ಅಧ್ಯಕ್ಷ ಪಿ.ಎ. ಗಣಪತಿ, ಉಪಾಧ್ಯಕ್ಷ ಎಂ.ಪಿ.ನಾಣಯ್ಯ, ಕಾರ್ಯದರ್ಶಿ ಕೆ.ಎ. ಬೆಳ್ಳಿಯಪ್ಪ ಜಂಟಿ ಕಾರ್ಯದರ್ಶಿ ಎ.ಡಯಾನಾ ಪೂವಯ್ಯ, ಖಜಾಂಚಿ ಐ.ಜಿ.ಕಾಶಿಯಪ್ಪ ಮತ್ತಿತರರು ನಿಯೋಗದಲ್ಲಿದ್ದರು.



ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆದ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ನೀಡುವಂತೆ 'ಅಖಿಲ ಕೊಡವ ಸಮಾಜ' ನೇತೃತ್ವದ ನಿಯೋಗವು ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮೈಸೂರು ನಿವಾಸದಲ್ಲಿ ಮನವಿ ಸಲ್ಲಿಸಿತು.

ಮನವಿ ಪತ್ರದ ವಿವರ: ಸರ್ಕಾರದ ಅನುಸೂಚಿತ ಪ್ರವರ್ಗಗಳಲ್ಲಿ 'ಕೊಡಗರು' ಎಂದು ತಪ್ಪಾಗಿ ವರ್ಗೀಕರಿಸಿದ್ದ ಪದನಾಮವನ್ನು ತಮ್ಮ ಅಧಿಕಾರಾವಧಿಯಲ್ಲಿ 'ಕೊಡವರು' ಎಂದು ನ್ಯಾಯಬದ್ಧವಾಗಿ ವರ್ಗೀಕರಿಸುವ ಮೂಲಕ ಹಲವು ವರ್ಷಗಳ ಬೇಡಿಕೆ ಈಡೇರಿತು. ತಮ್ಮ ಸಹಕಾರ ಹಾಗೂ ಕ್ರಿಯಾಶೀಲ ಶಾಸಕ ಎ.ಎಸ್.ಪೊನ್ನಣ್ಣನವರ ಪ್ರಯತ್ನದಿಂದ ಸಮಸ್ಯೆ ಪರಿಹರಿಸಿದ್ದಕ್ಕಾಗಿ ಪ್ರಪ್ರಥಮವಾಗಿ ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ಬುಡಕಟ್ಟು ಹಾಗೂ ಭಾಷಾ ಅಲ್ಪಸಂಖ್ಯಾತ ಆದಿಮ ಸಂಜಾತ ಕೊಡವ ಜನಾಂಗದವರಾದ ನಾವು ಆಭಾರಿಗಳಾಗಿದ್ದೇವೆ.

ಹಾಗೆಯೇ ಬೆಂಗಳೂರು ಕೊಡವ ಸಮಾಜದ ಸ್ವಾಧೀನದಲ್ಲಿದ್ದ 7 ಎಕರೆ ಸರ್ಕಾರದ ಜಾಗವನ್ನು(ಯಲಹಂಕ ತಾಲೂಕು ಹೊಸಹಳ್ಳಿ ಗ್ರಾಮ) ಖಾಯಂ ಮಂಜೂರಾತಿ ಮಾಡಿ, ರಿಯಾಯಿತಿ ದರದಲ್ಲಿ ನೇರ ಖರೀದಿ ಮಾಡಲು ಅನುವಾಗಬೇಕೆಂದು ಎ.ಎಸ್.ಪೊನ್ನಣ್ಣನವರು ವಿನಂತಿಸಿದಾಗ ತಾವು ತಕ್ಷಣ ಸಕಾರಾತ್ಮಕವಾಗಿ ಸ್ಪಂದಿಸಿ, ನಂತರ ಸಚಿವ ಸಂಪುಟದ ಅನುಮೋದನೆ ಪಡೆದು ಜಾಗ ಉಳಿಸಿಕೊಟ್ಟಿದ್ದಕ್ಕಾಗಿ ಕೊಡವ ಜನಾಂಗದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ.

ಆದಿಮ ಸಂಜಾತ ಅಲ್ಪಸಂಖ್ಯಾತ ಬುಡಕಟ್ಟು ಕೊಡವ ಜನಾಂಗಕ್ಕೆ ಸೇರಿದ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣನವರು ಸೂಕ್ಷ್ಮ ಪ್ರದೇಶವಾದ ಕೊಡಗು ಜಿಲ್ಲೆಯಲ್ಲಿ ಕೈಗೊಂಡಿರುವ ಕೆಲವು ಪ್ರಗತಿಪರ ಯೋಜನೆಗಳಿಂದಾಗಿ ಕೊಡಗಿನ ಜನಪ್ರಿಯ ಶಾಸಕರಾಗಿ ಹೊರಹೊಮ್ಮಿದ್ದಾರೆ ಎಂದು ತಿಳಿಸಲು ಹರ್ಷಿಸುತ್ತೇವೆ.

ಕೊಡಗು 1956ರವರೆಗೆ ಸಿ–ರಾಜ್ಯವಾಗಿತ್ತು ಬಳಿಕ ಮೈಸೂರು ರಾಜ್ಯದೊಂದಿಗೆ ವಿಲೀನವಾದಾಗಿನಿಂದ ಅಭಿವೃದ್ಧಿ ಕುಂಠಿತವಾಯಿತು. ಜಿಲ್ಲೆಗೆ ಈ ಹಿಂದೆ ಇದ್ದಂತಹ ಮೂರು ವಿಧಾನಸಭಾ ಕ್ಷೇತ್ರಗಳ ಸಂಖ್ಯೆ 2ಕ್ಕೆ ಇಳಿಕೆಯಾಗಿದೆ. ಕೊಡವ ಜನಾಂಗದವರು ಹಲವಾರು ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿ ಮತ್ತು ಸರ್ಕಾರದ ಉನ್ನತ ಹುದ್ದೆಗಳಿಂದ ವಂಚಿತವಾಗುತ್ತಲೇ ಇದ್ದೇವೆ. ಒಂದಲ್ಲ ಒಂದು ಕಾರಣಕ್ಕೆ ಈ ಹಿಂದಿನ ಸರ್ಕಾರಗಳು ಮೂಲೆಗುಂಪು ಮಾಡುತ್ತಲೇ ಬಂದಿವೆ. ಸುಮಾರು ಎರಡು ದಶಕಗಳಿಂದ ಕೊಡವ ಜನಾಂಗದ ಯಾವುದೇ ವ್ಯಕ್ತಿಗೆ ಸಚಿವ ಸ್ಥಾನ ದೊರಕಿಲ್ಲ. ಮಳೆಗಾಲದಲ್ಲಿ ಸಂಭವಿಸುವ ಪ್ರವಾಹ, ಭೂಕುಸಿತ, ನೆರೆ ಹಾವಳಿ, ಪ್ರಾಣಿ–ಮಾನವ ಸಂಘರ್ಷಗಳಿಂದ ಕೊಡಗು ನಲುಗುತ್ತಿರುವುದು ಅಕ್ಷರಶಃ ಸತ್ಯ. ಇಂದಿಗೂ ಹಲವು ಗ್ರಾಮಗಳಿಗೆ ರಸ್ತೆಗಳಿಲ್ಲ, ಇರುವ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ.

ಕೊಡಗಿಗೆ ಕೊಡುಗೆ: ಬೆಂಗಳೂರು, ಮೈಸೂರು, ತಮಿಳುನಾಡಿಗೆ ನೀರುಣಿಸುವ ಜೀವನದಿ ಕಾವೇರಿಯ ಉಗಮ ಸ್ಥಾನ, ಜಲಾನಯನ ಪ್ರದೇಶವಾದ ಕೊಡಗು ಜಿಲ್ಲೆಯು ಸೂಕ್ಷ್ಮ ಪರಿಸರದ ತಾಣವಾಗಿದೆ. ಕೊಡಗು ಜಿಲ್ಲೆಯವರೇ ಆದ ಎ.ಎಸ್. ಪೊನ್ನಣ್ಣರಂತಹ ಸಮರ್ಥರಿಗೆ ಪ್ರಾತಿನಿಧ್ಯ ದೊರೆತಲ್ಲಿ ಮಾತ್ರ ಜಿಲ್ಲೆಯ ಅಸ್ಮಿತೆ ಹಾಗೂ ಅಸ್ತಿತ್ವಕ್ಕೆ ಧಕ್ಕೆ ಬಾರದಂತೆ ನಿಗಾ ವಹಿಸಲು ಸಾಧ್ಯವಿದೆ. ಈ ಸಮಯದ ಕ್ಲಿಷ್ಟಕರ ಜನಜೀವನ, ಕೊಡಗಿನ ಸೂಕ್ಷ್ಮ ಸಮಸ್ಯೆಗಳು, ಜಿಲ್ಲೆಯಲ್ಲಿ ವಿವಿಧ ಜನಾಂಗಗಳ ವಿಭಿನ್ನ ಸಂಸ್ಕೃತಿಯ ಜನಜೀವನದ ನಾಡಿಮಿಡಿತ ಅರಿತಿರುವ, ಅಲ್ಲದೆ ಸ್ವತಃ ಭಾಷಾ ಅಲ್ಪಸಂಖ್ಯಾತ ಬುಡಕಟ್ಟು ಕೊಡವ ಜನಾಂಗಕ್ಕೆ ಸೇರಿದ ಎ.ಎಸ್.ಪೊನ್ನಣ್ಣನವರಿಗೆ ಮಂತ್ರಿ ಸ್ಥಾನ ದೊರೆತಲ್ಲಿ ಇದಕ್ಕಿಂತ ಕೊಡಗಿಗೆ ನೀಡುವ ದೊಡ್ಡ ಕೊಡುಗೆ ಬೇರೆ ಇಲ್ಲ.

ಹಾಗಾಗಿ, ಅಲ್ಪಸಂಖ್ಯಾತ ಹಿಂದುಳಿದ ವರ್ಗಗಳ ಆಶಾಕಿರಣವಾಗಿರುವ ತಾವು ಈ ನಿಟ್ಟಿನಲ್ಲಿ ಗಮನಹರಿಸಬೇಕು. ಕೊಡವ ಜನಾಂಗದ ಮಾತೃಸಂಸ್ಥೆ ಅಖಿಲ ಕೊಡವ ಸಮಾಜದ ಮುಂದಾಳತ್ವದಲ್ಲಿ ಕೊಡಗಿನ ವಿವಿಧೆಡೆಯಿಂದ ಬಂದಿರುವ ವಿವಿಧ ಕೊಡವ ಸಮಾಜಗಳ ಪ್ರತಿನಿಧಿಗಳ ಈ ಬೇಡಿಕೆಯನ್ನು ಪುರಸ್ಕರಿಸಿ, ಜನಾನುರಾಗಿ ಜನಪ್ರತಿನಿಧಿ ಎ.ಎಸ್.ಪೊನ್ನಣ್ಣರವರಿಗೆ ಸೂಕ್ತ ಸಚಿವ ಸ್ಥಾನ ಕಲ್ಪಿಸಬೇಕೆಂಬ ಬೇಡಿಕೆಯನ್ನು ವಿನಯಪೂರ್ವಕವಾಗಿ ತಮ್ಮ ಮುಂದಿಡುತ್ತಿದ್ದೇವೆ.

ಪಹಲ್ಗಾಮ್ ಹತ್ಯಾಕಾಂಡ ಖಂಡಿಸಿ ಯುವ ಕಾಂಗ್ರೆಸ್ ಪಂಜಿನ ಮೆರವಣಿಗೆ

ಮೈಸೂರು, ಏ.25(ಎಂಕೆ)– ಜಮ್ಮು–ಕಾಶ್ಮೀರದ ಪಹಲ್ಗಾಮ್ ಬಳಿ ಪ್ರವಾಸಿಗರ ಮೇಲೆ ಉಗ್ರರ ದಾಳಿಯನ್ನು ಖಂಡಿಸಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಪಂಜಿನ ಮೆರವಣಿಗೆ ನಡೆಸಲಾಯಿತು.

ಮೈಸೂರಿನ ಹೈವೆ ವೃತ್ತದಲ್ಲಿ ಜಮಾವಣೆಗೊಂಡ ಯುವ ಕಾಂಗ್ರೆಸ್ ಕಾರ್ಯಕರ್ತರು ಪಂಜು ಹಿಡಿದು ಬಂಬೂ ಬಜಾರ್ ವೃತ್ತ(ತಿಲಕ್‌ನಗರ ಸಿಗ್ನಲ್)ದ ವರೆಗೆ ಪಂಜಿನ ಮೆರವಣಿಗೆ ನಡೆಸಿದರಲ್ಲದೆ ಉಗ್ರರ ಪೈಶಾಚಿಕ ಕೃತ್ಯವನ್ನು ಖಂಡಿಸಿದರು. ಕೇಂದ್ರ ಸರ್ಕಾರ ಕೂಡಲೇ ಉಗ್ರರನ್ನು ಮಟ್ಟ ಹಾಕಬೇಕು ಎಂದು ಒತ್ತಾಯಿಸಿದರು.



ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಪಂಜಿನ ಮೆರವಣಿಗೆ ನಡೆಸಲಾಯಿತು.

ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯ ರಾಜ್ಯ ಉಸ್ತುವಾರಿ ನಿಗಂ ಭಂಡಾರಿ, ರಾಜ್ಯಾಧ್ಯಕ್ಷ ಮಂಜುನಾಥ್ ಗೌಡ, ಉಪಾಧ್ಯಕ್ಷರಾದ ಆರ್.ಕೆ.ದಿವ್ಯಾ, ದೀಪಿಕಾ ರೆಡ್ಡಿ, ಪ್ರಧಾನ ಕಾರ್ಯದರ್ಶಿಗಳಾದ ದೀಪಕ್ ಶಿವಣ್ಣ, ರಾಹುಲ್ ಜಾರಕಿಹೋಳಿ, ಆಸಿಕ್‌ಗೌಡ, ಲಾವಣ್ಯ, ರಿಯಾನ್ ಮತ್ತಿತರರಿದ್ದರು.

ಶಾಲಾ ಮಕ್ಕಳಿಗೆ ನೋಟ್ ಬುಕ್ ವಿತರಣೆ



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಶಾಲಾ ಮಕ್ಕಳಿಗೆ ನೋಟ್ ಬುಕ್ ವಿತರಿಸುವ ಮೂಲಕ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ, ಗ್ರಾಮ ಮಾಜಿ ಅಧ್ಯಕ್ಷ ಸಿ.ನರೇಂದ್ರ ಹೆಚ್.ಎಂ.ಮಹದೇವ, ಶಿವಣ್ಣ, ಬೊಮ್ಮೇನಹಳ್ಳಿ ಗ್ರಾಮ ಸದಸ್ಯರಾದ ಬಿ.ಕೆ.ಈಶ್ವರ್, ಪಿ.ಮಹದೇವ, ಹುಯಿಲಾಳು ಮಂಜುನಾಥ್, ಪ್ರಸಾದ್ ಉಪಸ್ಥಿತರಿದ್ದರು.

ಪಹಲ್ಗಾಮ್ ಘಟನೆ ಖಂಡಿಸಿ ಹಿಂದೂ ಸಂಘಟನೆ, ಕಾಂಗ್ರೆಸ್ ಪ್ರತಿಭಟನೆ



ಹತ್ಯೆ ಖಂಡಿಸಿ ನಾಪೋಕ್ಲು ಪಟ್ಟಣದಲ್ಲಿ ಹಿಂದೂಪರ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಯಿತು.



ಬ್ಲಾಕ್ ಕಾಂಗ್ರೆಸ್ ವತಿಯಿಂದ ಮೇಣದ ಬತ್ತಿ ಹಿಡಿದು ಪ್ರತಿಭಟನೆ ನಡೆಸಿದರು.

ನಾಪೋಕು, ಏ.25– ಪಹಲ್ಗಾಮ್‌ನಲ್ಲಿ ಭಯೋತ್ಪಾದಕರಿಂದ ಪ್ರವಾಸಿಗರ ಹತ್ಯೆ ಖಂಡಿಸಿ ಶುಕ್ರವಾರ ನಾಪೋಕ್ಲು ಪಟ್ಟಣದ ಬಸ್ಸು ನಿಲ್ದಾಣದಲ್ಲಿ ಹಿಂದೂಪರ ಸಂಘಟನೆಗಳು ದೇಶದ್ರೋಹಿಗಳಿಗೆ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದವು.

ಕಾಫಿ ಬೆಳೆಗಾರ ಕುಂಡ್ಯೋಳಂಡ ರಮೇಶ್ ಮುದ್ದಯ್ಯ ಮಾತನಾಡಿ ಹಿಂದೂ ಧರ್ಮಕ್ಕೆ ಅಳಿವು ಇಲ್ಲ. ಎಷ್ಟೇ ದುಷ್ಕೃತ್ಯಗಳನ್ನು ನಡೆಸಿದರೂ ಹಿಂದೂ ಧರ್ಮವೂ ಸಂಘಟಿತವಾಗುತ್ತದೆ. ಹಿಂದೂಗಳು ಸಂಘಟಿತರಾಗುತ್ತಾರೆ ಎಂದರು. ಭಯೋತ್ಪಾದಕರ ನಿಗ್ರಹಕ್ಕೆ ನ್ಯಾಯಾಂಗ ಹಾಗೂ ಸರಕಾರಗಳು ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಪ್ರಮುಖರಾದ ಕಂಗಾಂಡ ಜಾಲಿ ಪೂವಪ್ಪ, ಬಿ.ಎಂ. ಪ್ರ ತೀಪ, ಬಿದ್ದಾಟಂಡ ತಮ್ಮಯ್ಯ , ರಾಧಾಕೃಷ್ಣ ರೈ, ಕೇಲೇಟಿರ ದೀಪು ದೇವಯ್ಯ, ಕೇಟೋಳಿರ ಹರೀಶ್ ಪೂವಯ್ಯ, ಕೇಲೇಟಿರ ದೀಪು ದೇವಯ್ಯ, ಬಿದ್ದಾಟಂಡ ಜಿನ್ನು ನಾಣಯ್ಯ, ಸಂಪತ್, ಕುಲ್ಲೆಟ್ಟಿರ ಅಜಿತ್ ನಾಣಯ್ಯ, ಅಮ್ಮಂಡ ಮಹೇಶ್, ಕೇಲೇಟಿರ ಸಾಬು ನಾಣಯ್ಯ, ಮೂವೆರ ಪಟ್ಟು ಪೆಮ್ಮಯ್ಯ, ಶಿವಚಾಳಿಯಂಡ ಜಗದೀಶ್, ಉಮಾ ಪ್ರಭು, ಎಂ ಎಂ ನರೇಂದ್ರ, ಬೊಳ್ಳಪಂಡ ಜಾನ್, ಅಪ್ಪಚ್ಚಿರ ರಮ್ಮಿ ನಾಣಯ್ಯ, ನಾಟೋಳಂಡ ಸಚಿನ್, ಬಾಲೆಯಡ ಮೇದಪ್ಪ, ಕೇಟೋಳಿರ ಗಣಪತಿ ಮತ್ತಿತರರು ಪ್ರತಿಭಟನೆಯಲ್ಲಿ ಇದ್ದರು.

ಕಾಂಗ್ರೆಸ್ ಪ್ರತಿಭಟನೆ: ಜಮ್ಮು ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ನಡೆದ ಉಗ್ರರ ಕೃತ್ಯವನ್ನು ಖಂಡಿಸಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಮೇಣದ ಬತ್ತಿ ಹಿಡಿದು ಪ್ರತಿಭಟನೆ ನಡೆಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್ ನೇತೃತ್ವದಲ್ಲಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು ರಾಷ್ಟ್ರಧ್ವಜ ಹಾಗೂ ಮೇಣದ ಬತ್ತಿ ಹಿಡಿದು ಭಯೋತ್ಪಾದಕರ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಕೆಲಕಾಲ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು.

ಈ ಘಟನೆಗೆ ಜಾತಿ, ಭಾಷೆ, ಧರ್ಮದ ಲೇಪ ಬೇಡ ಎಲ್ಲರೂ ತೀವ್ರವಾಗಿ ಖಂಡಿಸಬೇಕಾಗಿದೆ ಎಂದು ಶಶಿಧರ್ ಹೇಳಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್, ಕೆಪಿಸಿಸಿ ಸದಸ್ಯ ಮಂಜುನಾಥ್ ಗುಂಡೂರಾವ್, ಪುರಸಭೆ ಸದಸ್ಯ ಖಾಲಿ ಮುಲ್ಲಾ, ವಿ.ಎಸ್.ಆನಂದ್ ಕುಮಾರ್, ನವೀನ್ ಕುಮಾರ್ ಮುಖಂಡರಾದ ಕೆ.ಎನ್. ಅಶೋಕ್, ಟಿ.ಬಿ.ಜಗದೀಶ್, ಕೆ.ಎಸ್.ಕೃಷ್ಣೇಗೌಡ, ಎಚ್.ಡಿ.ಚಂದ್ರು, ಸುಂಟಿಕೊಪ್ಪ ರಫೀಕ್, ಅಬ್ದುಲ್ ರಜಾಕ್, ರುಕ್ಮಿಣಿ, ಶಶಿಭೀಮಯ್ಯ, ಮಲ್ಲಿಕಾರ್ಜುನ ಪಾಲ್ಗೊಂಡಿದ್ದರು. ಮೃತರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು.

ಗಣ್ಯರ ಅಶ್ರುತರ್ಪಣದ ನಡುವೆ ಮಿಟ್ಟು ಚಂಗಪ್ಪ ಅಂತ್ಯಕ್ರಿಯೆ



ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸ್‌ರಾಜು, ಮಿಟ್ಟು ಚಂಗಪ್ಪ ಅವರ ನಿವಾಸಕ್ಕೆ ತೆರಳಿ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದರು.

ಮಡಿಕೇರಿ, ಏ.25–ವಯೋ ಸಹಜ ಅನಾರೋಗ್ಯದಿಂದ ಅಮ್ಮತ್ತಿಯ ಖಾಸಗಿ ಆಸ್ಪತೆಯಲ್ಲಿ ವಿಧಿ ವಶರಾಗಿದ್ದ ಕಾಂಗ್ರೆಸ್ ಹಿರಿಯ ಮುಖಂಡ ಮತ್ತು ಉದ್ಯಮಿ ಬೊಟ್ಟೋಳಂಡ ಮಿಟ್ಟು ಚಂಗಪ್ಪ ಅವರ ಪಾರ್ಥೀವ ಶರೀರದ ಅಂತ್ಯಕ್ರಿಯೆ ಮಡಿಕೇರಿಯಲ್ಲಿ ನಡೆಯಿತು. ಬೆಳಗ್ಗೆ 9 ಗಂಟೆಯ ವೇಳೆಗೆ ಹೆಲಿಕಾಪ್ಟರ್‌ನಲ್ಲಿ ಮಡಿಕೇರಿಗೆ ಆಗಮಿಸಿದ ಸಚಿವ ಕೆ.ಜೆ.ಜಾರ್ಜ್ ಅವರು ನಗರದ ಸ್ಟುವರ್ಟ್ ಹಿಲ್‌ನಲ್ಲಿರುವ ಮಿಟ್ಟು ಚಂಗಪ್ಪ ಅವರ ನಿವಾಸಕ್ಕೆ ತೆರಳಿ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದು ಕುಟುಂಬ ವರ್ಗಕ್ಕೆ ಸಾಂತ್ವನ ಹೇಳಿದರು. 10 ಗಂಟೆಯ ವೇಳೆಗೆ ಆಂಬುಲೆನ್ಸ್ ಮೂಲಕ ಗಾಂಧಿ ಮೈದಾನಕ್ಕೆ ಪಾರ್ಥೀವ ಶರೀರವನ್ನು ಸ್ಥಳಾಂತರಿಸಿ ಇತರ ಗಣ್ಯರು ಮತ್ತು ಸಾರ್ವಜನಿಕರ ದರ್ಶನಕ್ಕೆ ಅವಕಾಶ ನೀಡಲಾಯಿತು.

ಮಿಟ್ಟು ಚಂಗಪ್ಪ ಅವರ ಪಾರ್ಥೀವ ಶರೀರಕ್ಕೆ ಕಾಂಗ್ರೆಸ್ ಪಕ್ಷದ ಧ್ವಜ ಹೊದಿಸಿ ಇರಿಸಲಾಗಿದ್ದ ಗಾಂಧಿ ಮೈದಾನಕ್ಕೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸ್‌ರಾಜು, ಶಾಸಕರಾದ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಡಾ.ಮಂತರ್ ಗೌಡ, ಬಿಜೆಪಿ ಶಾಸಕ ಎ.ಮಂಜು, ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಬಿಜೆಪಿ ಮಾಜಿ ಶಾಸಕರಾದ ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ತೀತೀತ ಧರ್ಮಜಾ ಉತ್ತಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಹೈಕೋರ್ಟ್ ವಕೀಲ ಹೆಚ್.ಎಸ್. ಚಂದ್ರಮೌಳಿ, ಕಾಫಿ ಬೆಳೆಗಾರ ಮತ್ತು ಉದ್ಯಮಿ ವಿನೋದ್ ಶಿವಪ್ಪ ಸೇರಿದಂತೆ ಕಾಂಗ್ರೆಸ್ ಪಕ್ಷ ಪ್ರಮುಖರು ಹಾಗೂ ನೂರಾರು ಮಂದಿ ಅಗಲಿದ ಹಿರಿಯ ರಾಜಕೀಯ ಮುಖಂಡನ ಪಾರ್ಥೀವ ಶರೀರಕ್ಕೆ ಮಾಲಾರ್ಪಣೆ ಮಾಡಿ ಅಂತಿಮ ಗೌರವ ಸಲ್ಲಿಸಿದರು.

ಮಧ್ಯಾಹ್ನದ ಬಳಿಕ ಮಿಟ್ಟು ಚಂಗಪ್ಪ ಅವರು ಪಾರ್ಥೀವ ಶರೀರವನ್ನು ನಗರದ ಚೈನ್ ಗೇಟ್ ಬಳಿ ಇರುವ ಕೊಡವ ಸಮಾಜದ ರುದ್ರಭೂಮಿಗೆ ಕೊಂಡೊಯ್ದು ಕೊಡವ ಸಂಪ್ರದಾಯದಂತೆ ಅಂತ್ಯಕ್ರಿಯೆ ನೆರವೇರಿಸಲಾಯಿತು. ಕುಟುಂಬ ಸದಸ್ಯರ ಕಂಬನಿಯ ನಡುವೆ ಉದ್ಯಮಿ ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಬೊಟ್ಟೋಳಂಡ ಮಿಟ್ಟು ಚಂಗಪ್ಪ ಅವರು ಪಂಚಭೂತಗಳಲ್ಲಿ ಲೀನವಾದರು.

ಈ ವೇಳೆ ಮಿಟ್ಟು ಚಂಗಪ್ಪ ಅವರ ಪತ್ನಿ ಯಶಿ ಚಂಗಪ್ಪ, ಪುತ್ರಿಯರಾದ ಕಾವ್ಯ, ಕೃತಿ ಸೇರಿದಂತೆ ಕುಟುಂಬವರ್ಗ, ಬಂಧು–ಮಿತ್ರರು ಹಾಜರಿದ್ದರು.

ಚಿರ್ದಮ್ಮ ನಿಧನ



ವಿರಾಜಪೇಟೆ: ಪಪಂ ಮಾಜಿ ಸದಸ್ಯ ಬಿ.ಕೆ. ಚಂದ್ರು ತಾಯಿ ಚಿರ್ದಮ್ಮ (87) ನಿಧನರಾಗಿದ್ದಾರೆ. ಮೃತರು 2 ಹೆಣ್ಣು, 3 ಗಂಡು ಮಕ್ಕಳು ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಲಬಾರ್ ರಸ್ತೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ನಡೆಯಿತು.

ಮನೆಯ ಸಮೀಪವೇ ಕಾಡಾನೆಗೆ ರೈತ ಬಲಿ



ಮಡಿಕೇರಿ: ಮನೆಯ ಸಮೀಪವೇ ಬಂದ ಕಾಡಾನೆಯೊಂದು ರೈತರೊಬ್ಬರ ಮೇಲೆ ದಾಳಿ ಮಾಡಿ ಕೊಂದಿರುವ ಘಟನೆ ಸಿದ್ದಾಪುರ ಗ್ರಾಮ ಪಂಚಾಯತಿ ವ್ಯಾಪ್ತಿ ಅವರೆಗುಂದ ಹಾಡಿಯಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಚಿನ್ನಪ್ಪ(76) ಎಂಬವರು ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟ ವ್ಯಕ್ತಿಯಾಗಿದ್ದಾರೆ. ಮಧ್ಯರಾತ್ರಿ ವೇಳೆ ಕಾಡಾನೆ ಘೀಳಿಟ್ಟ ಶಬ್ದ ಕೇಳಿ ಹೊರಗೆ ಬಂದಾಗ ಏಕಾಏಕಿ ಚಿನ್ನಪ್ಪ ಮೇಲೆ ದಾಳಿ ಮಾಡಿದ ಪರಿಣಾಮ ಅವರು ಸ್ಥಳದಲ್ಲೇ ಮೃತ ಪಟ್ಟಿದ್ದಾರೆ. ಪೊಲೀಸರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಮೃತದೇಹವನ್ನು ಸಿದ್ದಾಪುರ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಮರಣೋತ್ತರ ಪರೀಕ್ಷೆ ನಡೆಸಿ ಬಳಿಕ ಕುಟುಂ ಬಕ್ಕೆ ಹಸ್ತಾಂತರಿಸಲಾಯಿತು.

ಘಟನೆಯ ಬಗ್ಗೆ ಮಾಹಿತಿ ತಿಳಿದ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಬೆಳಗಿನ ಜಾವ 4 ಗಂಟೆ ವೇಳೆಗೆ ಸ್ಥಳಕ್ಕೆ ಆಗಮಿಸಿ ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು. ಮೃತರ ಕುಟುಂಬಕ್ಕೆ ತಕ್ಷಣವೇ ಪರಿಹಾರ ವಿತರಿಸುವ ಸಂಬಂಧ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಶಾಸಕ ಎ.ಎಸ್. ಪೊನ್ನಣ್ಣ ಮಾತುಕತೆ ನಡೆಸಿದ್ದಾರೆ ಎಂದು ಪೂವಯ್ಯ, ಸುದ್ದಿಗಾರರಿಗೆ ಮಾಹಿತಿ ನೀಡಿದರು.

ವಿರಾಜಪೇಟೆ ಡಿಎಫ್‌ಓ ಜಗನ್ನಾಥ್ ಮಾತನಾಡಿ, ದುಬಾರೆ ಅರಣ್ಯ ವ್ಯಾಪ್ತಿಯ ಅವರೆಗುಂದ ಹಾಡಿಯಲ್ಲಿ ಘಟನೆ ನಡೆದಿದ್ದು ಪರಿಹಾರ ವಿತರಣೆ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಸಿದ್ದಾಪುರ ವಲಯ ಕಾಂಗ್ರೆಸ್ ಅಧ್ಯಕ್ಷ ಎಸ್.ಬಿ.ಪ್ರತೀಶ್, ವಲಯ ಅರಣ್ಯ ಅಧಿಕಾರಿ ರತನ್, ಸಿದ್ದಾಪುರ ಠಾಣಾಧಿಕಾರಿ ರಾಘವೇಂದ್ರ ಹಾಗೂ ಸಿಬ್ಬಂದಿಗಳು ಘಟನಾ ಸ್ಥಳದಲ್ಲಿ ಹಾಜರಿದ್ದರು.

ಉಗ್ರರ ಅಟ್ಟಹಾಸ ಖಂಡಿಸಿ ವಕೀಲರ ಪ್ರತಿಭಟನೆ



ಕೆ.ಆರ್. ಪೇಟೆಯಲ್ಲಿ ಶುಕ್ರವಾರ ವಕೀಲರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಕೆ.ಆರ್.ಪೇಟೆ, ಏ.25– ಜಮ್ಮು–ಕಾಶ್ಮೀರದ ಪ್ರವಾಸ ತಾಣ ಪಹಲ್ಗಾಮ್ ಪ್ರದೇಶದಲ್ಲಿ ಉಗ್ರರು ನಡೆಸಿರುವ ದಾಳಿಯನ್ನು ಖಂಡಿಸಿ ಕೆ.ಆರ್.ಪೇಟೆ ತಾಲೂಕು ವಕೀಲರ ಸಂಘದ ಸದಸ್ಯರು ಪಟ್ಟಣದ ವಕೀಲರ ಭವನದಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಸಾಗಿ ತಹಸೀಲ್ದಾರ್ ಕಚೇ ರಿಯ ಮುಂದೆ ಪ್ರತಿಭಟನೆ ನಡೆಸಿದರು.

ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಎಂ.ಆರ್.ನಾಗೇಗೌಡ ಮಾತನಾಡಿ ಜಮ್ಮು–ಕಾಶ್ಮೀರದ ಪ್ರವಾಸಿ ತಾಣದಲ್ಲಿ ಉಗ್ರರು ಅಮಾನುಷವಾಗಿ ನರಮೇಧ ನಡೆಸಿದ ಕೃತ್ಯವನ್ನು ಉಗ್ರವಾಗಿ ಖಂಡಿಸಿದ್ದು, ಈ ಕೃತ್ಯಕ್ಕೆ ಕಾರಣರಾದ ಉಗ್ರರಿಗೆ ತಕ್ಕ ಪಾಠ ಕಲಿಸಬೇಕೆಂದು ಆಗ್ರಹಿಸಿದರು.

ತಾಲ್ಲೂಕು ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಸಾಧುಗೋನಹಳ್ಳಿ ಎಸ್.ಜೆ. ಮಂಜೇಗೌಡ, ವಕೀಲರ ಸಂಘದ ಪದಾಧಿಕಾರಿಗಳಾದ ದೊಡ್ಡಯ್ಯ, ಅವಿನಾಶ್, ಜನಾರ್ಧನ್, ಬಿಜೆಪಿ ಪ್ರವೀಣ್, ಶಿವಕುಮಾರ್, ಪ್ರತಾಪ್, ಹಿರಿಯ ವಕೀಲರಾದ ಜಿ.ಆರ್. ಅನಂತರಾಮಯ್ಯ, ಎಂ.ಆರ್.ಪ್ರಸನ್ನಕುಮಾರ್, ಕೆ.ಎನ್.ನಾಗರಾಜು, ಬಿ.ಗಣೇಶ್, ಕೆ.ಆರ್. ಮಹೇಶ್, ಎಸ್.ಆರ್.ನವೀನ್ ಕುಮಾರ್, ಕೆ.ಆರ್.ಇಂದ್ರಕುಮಾರ್, ನೋಟರಿ ವಕೀಲರಾದ ಸ್ವರೂಪ, ಎಂ.ರಾಣಿ, ರೇಷ್ಮ ಭಾಷಾ, ಸುಪ್ರಿತಾ, ಅನುಷ, ಕೇಸರಿ ಶ್ರೀನಿವಾಸ್, ಗಂಜಿಗೆರೆ ಜಿ.ಜೆ.ಲೋಕೇಶ್, ಪಿ.ಬಿ.ಮಂಜುನಾಥ್, ಕೆಬೋರೇಗೌಡ, ಅರುಣ್‌ಕುಮಾರ್, ಚಲುವರಾಯಿ, ನಿರಂಜನ್, ಮೋಹನ್, ಎನ್.ಮಂಜುನಾಥ್, ಪಾಂಡು, ಬಿ.ಸಿ.ಹರ್ಷ, ಅನ್ವೇಶ್, ಎಂ.ವಿ.ಪ್ರಭಾಕರ್, ಯೋಗೇಶ್, ಸತೀಶ್, ಯೋಗೇಶ್.ಡಿ.ಅನುಷ, ಅಂಜಲಿ, ಸುಪ್ರಿತಾ ಸೇರಿದಂತೆ ನೂರಾರು ವಕೀಲರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಇಂದಿನಿಂದ 7ನೇ ಸುತ್ತಿನ ಕಾಲುಬಾಯಿ ಜ್ವರದ ಲಸಿಕೆ



ಕಾಲುಬಾಯಿ ಜ್ವರದ ಲಸಿಕೆ ಕುರಿತು ಅಧಿಕಾರಿಗಳು ಚರ್ಚೆ ನಡೆಸಿದರು.

ಮಂಡ್ಯ: ರಾಜ್ಯಾದ್ಯಂತ ಪಶು ಸಂಗೋಪಾಲನೆ ಇಲಾಖೆ ಏ.26 ರಿಂದ 7ನೇ ಸುತ್ತಿನ ಕಾಲುಬಾಯಿ ಜ್ವರದ ಲಸಿಕಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಶು ಸಂಗೋಪನೆ ಇಲಾಖೆಯ ಉಪ ನಿರ್ದೇಶಕ ಡಾ. ಎಸ್.ಸಿ. ಸುರೇಶ್ ಹೇಳಿದರು.

ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 7ನೇ ಸುತ್ತಿನ ಕಾಲುಬಾಯಿ ಜ್ವರದ ಲಸಿಕಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ 4.79 ಲಕ್ಷ ಜಾನುವಾರುಗಳ ಇದ್ದು ಮನೆ ಮನೆಗೂ ಭೇಟಿ ನೀಡಿ ಲಸಿಕೆ ಹಾಕುವ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಮನ್‌ಮುಲ್ ಸಹಯೋಗದೊಂದಿಗೆ ಕಾಲುಬಾಯಿ ಜ್ವರದ ಲಸಿಕೆ ನೀಡಲು ಈಗಾಗಲೇ 469 ಲಸಿಕಾದಾರರನ್ನು ನೇಮಿಸಲಾಗಿದೆ, ಸುಮಾರು ಒಂದೂವರೆ ತಿಂಗಳೊಳಗೆ ಮನೆ ಮನೆ ತೆರಳಿ ಉಚಿತವಾಗಿ ಲಸಿಕೆ ಹಾಕುವ ಯೋಜನೆ ಕೈಗೊಂಡಿದ್ದೇವೆ, ಮನ್‌ಮುಲ್ ಸಿಬ್ಬಂದಿವರ್ಗದವರು ಲಸಿಕಾ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಹಾಗೂ ನಮಗೆ ಬೇಕಾದ ಎಲ್ಲಾ ಮೂಲ ಸೌಕರ್ಯಗಳನ್ನು ನೀಡಲು ಅನುಮತಿ ಸೂಚಿಸಿದ್ದಾರೆ ಎಂದರು.

ಜೊತೆಗೆ 7ನೇ ಸುತ್ತಿನ ಕಾಲುಬಾಯಿ ಜ್ವರದ ಲಸಿಕಾ ಕಾರ್ಯಕ್ರವನ್ನು ಹಾಲು ಉತ್ಪಾದಕ ಸಹಕಾರ ಸಂಘಗಳ ಮೂಲಕ ಪ್ರಚಾರ ಪಡಿಸಲು ನಿರ್ದೇಶನ ನೀಡಲಾಗಿದೆ, ಲಸಿಕಾದಾರರಿಗೆ ಪ್ರಯಾಣ ವೆಚ್ಚವನ್ನು ಮನ್‌ಮುಲ್ ನೀಡಲಿದೆ ಎಂದರು.

ಮನ್‌ಮುಲ್ ವ್ಯವಸ್ಥಾಪಕ ನಿರ್ದೇಶಕ ಡಾ. ಮಂಜೇಶ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ತಾಲೂಕಿನ ಉಪ ನಿರ್ದೇಶಕರು ಮತ್ತು ಸಹಾಯಕ ನಿರ್ದೇಶಕರು ಉಪಸ್ಥಿತರಿದ್ದರು.

ಅಂತರರಾಷ್ಟ್ರೀಯ ಕ್ರೀಡಾಪಟು ಜಿ.ಕೆ.ವಿಜಯಕುಮಾರಿಗೆ ಗೌರವ



ಕಿಕ್ಕೇರಿ ಹೋಬಳಿಯ ಗೌಡೇನಹಳ್ಳಿಯ ಅಂತರರಾಷ್ಟ್ರೀಯ ಅಥ್ಲೇಟಿಕ್ ಕ್ರೀಡಾಪಟು ಜಿ.ಕೆ. ವಿಜಯಕುಮಾರಿ ಅವರಿಗೆ ಕಿಕ್ಕೇರಮ್ಮ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಮಂಗಳವಾರ ಗೌರವಿಸಲಾಯಿತು. ಎಲ್.ಎಸ್.ಧರ್ಮಪ್ಪ, ಕೆ.ಎಸ್. ಮಂಜುನಾಥ್, ಚಂದ್ರಮೋಹನ್, ದಿನೇಶ್‌ಬಾಬು, ಕೇಶವಮೂರ್ತಿ, ರಮೇಶ್, ಮಧುಕರ್, ಕುಮಾರಸ್ವಾಮಿ, ಹೇಮಣ್ಣಶೆಟ್ಟಿ, ಬೇಲೂರೇಗೌಡ ಮತ್ತಿತರರಿದ್ದರು.

ಹೋಳಿ ಊಟ ಮಾಡಿ ಅಸ್ವಸ್ಥರಾಗಿದ್ದ ಮಕ್ಕಳು ಈಗ ಸುರಕ್ಷಿತವಾಗಿ ಪೋಷಕರ ವಶಕ್ಕೆ

ಮಂಡ್ಯ: ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಅನಧಿಕೃತ ಖಾಸಗಿ ವಸತಿ ಶಾಲೆಯಲ್ಲಿದ್ದ ಮೇಘಾಲಯ ರಾಜ್ಯದ 22 ಮಕ್ಕಳನ್ನು ಕರ್ನಾಟಕ ಸರ್ಕಾರ ಮತ್ತು ಮಂಡ್ಯ ಜಿಲ್ಲಾಡಳಿತದ ಅಧಿಕಾರಿಗಳು ಮೇಘಾಲಯಕ್ಕೆ ತೆರಳಿ ಸುರಕ್ಷಿತವಾಗಿ ಪೋಷಕರಿಗೆ ಹಸ್ತಾಂತರಿಸಿದ್ದಾರೆ.

ಈ ಮಕ್ಕಳು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಟಿ.ಕಾಗೇಪುರ ಗ್ರಾಮದ ಗೋಕುಲ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಕಳೆದ ತಿಂಗಳು ಹೋಳಿ ಊಟ ಸೇವಿಸಿ ಇಬ್ಬರು ಮಕ್ಕಳು ಮೃತಪಟ್ಟಿದ್ದರೆ, ಹಲವರು ಅಸ್ವಸ್ಥಗೊಂಡಿದ್ದರು.

ಮಕ್ಕಳನ್ನು ಮರಳಿ ಮೇಘಾಲಯಕ್ಕೆ ಕಳುಹಿಸುವಂತೆ ಪೋಷಕರು ಕರ್ನಾಟಕ ರಾಜ್ಯದ ಹೈಕೋರ್ಟ್ ಮೆಟ್ಟಿಲೇರಿದ್ದರು. ಬಳಿಕ ಕೋರ್ಟ್ ಸೂಚನೆಯಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಮೇಘಾಲಯಕ್ಕೆ ಹೋಗಿ ಅಲ್ಲಿನ ಅಧಿಕಾರಿಗಳ ಸಮ್ಮುಖದಲ್ಲಿ ಮಕ್ಕಳ ಪೋಷಕರ ಖಾತ್ರಿ ಮಾಡಿಕೊಂಡು ಅವರಿಗೆ ಹಸ್ತಾಂತರಿಸಿದ್ದಾರೆ.

ಚಿಕ್ಕಾಯರಹಳ್ಳಿ ಸೊಸೈಟಿ ರೈತಸಂಘ–ಕಾಂಗ್ರೆಸ್ ತೆಕ್ಕೆಗೆ



ಚಿಕ್ಕಾಯರಹಳ್ಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಎಲ್ಲಾ ಮುಖಂಡರು ಅಭಿನಂಧಿಸಿದರು.

ಪಾಂಡವಪುರ, ಏ.25– ತಾಲೂಕಿನ ಚಿಕ್ಕಾಯರಹಳ್ಳಿ(ನಾರ್ಥ್‌ಬ್ಯಾಂಕ್) ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ರೈತಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಕೆ.ಪಿ.ಚಂದ್ರಶೇಖರ್, ರಜಿನಿಕಾಂತ್ ಉಪಾಧ್ಯಕ್ಷರಾಗಿ ಶುಕ್ರವಾರ ಆಯ್ಕೆಯಾದರು.

ಅಧ್ಯಕ್ಷ ಸ್ಥಾನಕ್ಕೆ ರೈತಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಕೆ.ಪಿ.ಚಂದ್ರಶೇಖರ್ ಹಾಗೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಕೆ.ವಿ. ಮಹೇಶ್ ನಾಮಪತ್ರ ಸಲ್ಲಿದರು. ಉಪಾಧ್ಯಕ್ಷ ಸ್ಥಾನಕ್ಕೆ ರೈತಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರಜಿನಿಕಾಂತ್ ಹಾಗೂ ಜೆಡಿಎಸ್ ಬೆಂಬಲಿತ ಭಾಗ್ಯಮ್ಮ ನಾಮಪತ್ರ ಸಲ್ಲಿಸಿದರು. ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಎರಡು ನಾಮಪತ್ರಗಳು ಸಲ್ಲಿಸಿದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾದ ವಸೀಂಪಾಷ ಗುಪ್ತ ಮತದಾನ ನಡೆಸಿದರು. ಜೆಡಿಎಸ್ ಬೆಂಬಲಿತ ಅಭ್ಯರ್ಥಿ ವಿರೂಪಾಕ್ಷಪ್ಪಗೈರು ಹಾಜರಾಗಿದ್ದರು. ಉಳಿದ 10 ಮಂದಿ ಚುನಾಯಿತ ನಿರ್ದೇಶಕರು ಹಾಗೂ ಡಿಸಿಸಿ ಬ್ಯಾಂಕ್ ನಾಮಿನಿ ಪ್ರತಿನಿಧಿ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಜಗಜ್ಯೋತಿ ಬಸವೇಶ್ವರ ಪ್ರತಿಮೆ ಅನಾವರಣ

ಮಹರ್ಷಿ ವಾಲ್ಮೀಕಿ, ಭಗೀರಥ, ಕನಕದಾಸರ ಪುತ್ಥಳಿ ನಿರ್ಮಾಣಕ್ಕೆ ಶಂಕುಸ್ಥಾಪನೆ



ಜಗಜ್ಯೋತಿ ಬಸವೇಶ್ವರರ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಿದರು.

ಚಾಮರಾಜನಗರ, ಏ.25– ಜಗಜ್ಯೋತಿ ಬಸವೇಶ್ವರರ ಪ್ರತಿಮೆಯನ್ನು ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣ ಗೊಳಿಸಿದರು ಮತ್ತು ಮಹರ್ಷಿ ಭಗೀರಥ, ಮಹರ್ಷಿ ವಾಲ್ಮೀಕಿ ಹಾಗೂ ಸಂತ ಕನಕದಾಸರ ಪುತ್ಥಳಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಅದ್ದೂರಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ, ದಾವಣಗೆರೆಯ ರಾಜನಹಳ್ಳಿ ಶ್ರೀ ವಾಲ್ಮೀಕಿ ಗುರುಪೀಠದ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮಿ, ಕೆ.ಆರ್. ನಗರ ಕನಕಗುರು ಪೀಠದ ಡಾ. ಶ್ರೀ ಶಿವಾನಂದಪುರಿ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಸಮಾಜದ ನಿರ್ಮಾತೃ, ಮಹಾನ್ ಸಮಾಜ ಸುಧಾರಕ, ಬಸವಣ್ಣನವರ ಕಂಚಿನ ಪ್ರತಿಮೆ ಅನಾವರಣಗೊಳಿಸಿ, ಪುಷ್ಪಾರ್ಚನೆಗೈದ ಬಳಿಕ ಜಿಲ್ಲಾಡಳಿತ ಭವನದ ಆವರಣದಲ್ಲಿಯೇ ಮಹರ್ಷಿ ಭಗೀರಥ, ಮಹರ್ಷಿ ವಾಲ್ಮೀಕಿ ಹಾಗೂ ಸಂತ ಕನಕದಾಸರ ಪುತ್ಥಳಿಗಳ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ನಾಮಫಲಕಗಳನ್ನು ಅನಾವರಣ ಮಾಡಿದರು.

ಪಶು ಸಂಗೋಪನೆ, ರೇಷ್ಮೆ ಸಚಿವರು ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್, ಸಮಾಜ ಕಲ್ಯಾಣ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ ಹಾಗೂ ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ, ಲೋಕಸಭಾ ಸದಸ್ಯರಾದ ಸುನಿಲ್ ಬೋಸ್, ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಎಚ್.ಎಂ. ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಚುಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ಪಂಚ ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷರಾದ ಎಚ್.ವಿ. ಚಂದ್ರು, ನಗರಸಭೆ ಅಧ್ಯಕ್ಷರಾದ ಎಸ್. ಸುರೇಶ್, ಉಪಾಧ್ಯಕ್ಷರಾದ ಮಮತಾ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸಾಮಾಜಿಕ ನ್ಯಾಯದ ಪರ ಕೆಲಸ ಮಾಡುತ್ತೇನೆ : ಸಿದ್ದರಾಮಯ್ಯ



ಮಂಗಲ ಗ್ರಾಮದಲ್ಲಿ ಜಿಲ್ಲಾ ಕುರುಬರ ಸಂಘದ ಕನಕ ಸಮುದಾಂಯ ಭವನಕ್ಕೆ ಸಿದ್ದರಾಮಯ್ಯ ಭೂಮಿಪೂಜೆ ನೆರವೇರಿಸಿದರು.

ಚಾಮರಾಜನಗರ, ಏ.25–ನಾನು ಯಾವಾಗಲೂ ಸಾಮಾಜಿಕ ನ್ಯಾಯದ ಪರವಾಗಿ ಕೆಲಸ ಮಾಡುತ್ತೇನೆ. ಜನರ ಸಹಕಾರ, ಬೆಂಬಲ ಯಾವಾಗಲೂ ನನ್ನ ಮೇಲೆ ಇದೇ ರೀತಿ ಇರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೊಂಡಿದ್ದಾರೆ

ತಾಲೂಕಿನ ಮಂಗಲ ಗ್ರಾಮದಲ್ಲಿ ಜಿಲ್ಲಾ ಕುರುಬರ ಸಂಘದ ಕನಕ ಸಮುದಾಯ ಭವನಕ್ಕೆ ಭೂಮಿಪೂಜೆ ನೆರವೇರಿಸಿ, ಮಾತನಾಡಿದ ಅವರು, ಜಿಲ್ಲೆಯಲ್ಲಿ ಶೇ.80ರಷ್ಟು ಜನರ ಬೆಂಬಲ ನನ್ನ ಮೇಲೆ ಇದೆ. ಹೀಗಾಗಿಯೇ ನಾನು 2ನೇ ಬಾರಿ ಮುಖ್ಯಮಂತ್ರಿಯಾಗಿದ್ದೇನೆ. ಬಂಗಾರಪ್ಪ, ವಿರಪ್ಪಮೊಯ್ಲಿ ಕೂಡ ಪೂರ್ಣ ಅಧಿಕಾರ ನಡೆಸಲು ಸಾಧ್ಯವಾಗಲಿಲ್ಲ. ದೇವರಾಜು ಅರಸು ಅವರನ್ನು ಬಿಟ್ಟರೇ ನಾನು ಮಾತ್ರ 5 ವರ್ಷ ಆಡಳಿತ ನಡೆಸಿದ್ದೇನೆ. ಇದಕ್ಕೆ ನಿಮ್ಮೆಲ್ಲರ ಸಹಕಾರ ಕಾರಣವಾಗಿದೆ ಎಂದರು.

ಸಾಮಾಜಿಕ ಸಮೀಕ್ಷೆ: ಸಂವಿಧಾನ ಬಂದು 75 ವರ್ಷವಾದರೂ ಸಾಮಾಜಿಕ ನ್ಯಾಯ ಈಡೇರಿಲ್ಲ. ಅವಕಾಶ ವಂಚಿತ ಸಮುದಾಯಗಳ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ಅರಿಯಲು ಸಮೀಕ್ಷೆ ನಡೆಸಿದ್ದೇವೆ. 2015ರಲ್ಲಿ ನಡೆಸಿದ ಸಮೀಕ್ಷೆ ವರದಿಯನ್ನು ಯಾವ ಸಿಎಂಗಳು ಸ್ವೀಕರಿಸಿಲ್ಲ. ಆದರೆ ನಾನು ಸ್ವೀಕರಿಸಿ ಕ್ಯಾಬಿನೆಟ್ ಮುಂದೆ ಇಟ್ಟಿದ್ದೀನಿ. ಇದು ಯಾರ ವಿರುದ್ಧವೂ ಇರುವ ಸಮೀಕ್ಷೆ ಅಲ್ಲ. ಎಲ್ಲರ ಸ್ಥಿತಿಗತಿ ತಿಳಿಯುವ ಸಮೀಕ್ಷೆ ಮಾತ್ರ ಆಗಿದೆ ಎಂದರು.

2 ಕೋಟಿ ಅನುದಾನ: ಸಮುದಾಯ ಭವನ ನಿರ್ಮಾಣಕ್ಕೆ ಈಗಾಗಲೇ 2 ಕೋಟಿ ಅನುದಾನ ಮಂಜೂರು ಮಾಡಲಾಗಿದ್ದು, ಮುಂಗಡವಾಗಿ 50 ಲಕ್ಷ ರೂ. ಬಿಡುಗಡೆಯಾಗಿದೆ. ಭವನ ನಿರ್ಮಾಣಕ್ಕೆ ದೇಣಿಗೆ ಕೊಟಿರುವರೆಲ್ಲರಿಗೂ ಒಳ್ಳೆಯದಾಗಲಿ ಎಂದರು.

ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಚಿವರಾದ ಕೆ. ವೆಂಕಟೇಶ್, ಎಚ್.ಸಿ. ಮಹದೇವಪ್ಪ, ಸಂಸದ ಸುನೀಲ್‌ಬೋಸ್, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಚ್.ಎಂ.ಗಣೇಶ ಪ್ರಸಾದ್, ಎಂ.ಆರ್. ಮಂಜುನಾಥ, ಡಾ.ತಿಮ್ಮಯ್ಯ, ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ರಾಮಯ್ಯ, ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ನಂಜೇಗೌಡ, ತಾಲೂಕು ಅಧ್ಯಕ್ಷ ಎಸ.ವಿ. ಕೆ. ಉಮೇಶ, ಗ್ರಾ.ಪಂ. ಅಧ್ಯಕ್ಷ ಸುಬ್ರಹ್ಮಣ್ಯ, ಕರ್ನಾಟಕ ಪ್ರದೇಶ ಕುರುಬರ ಸಂಘದ ಹಿರಿಯ ಉಪಾಧ್ಯಕ್ಷರಾದ ರಾಜೇಶ್ವರಿ, ಮಂಗಲ ಗ್ರಾಪಂ ಅಧ್ಯಕ್ಷ ಎಂ.ಎಸ್.ಅಣ್ಣಪ್ಪಸ್ವಾಮಿ, ಜಿಲ್ಲಾ ಕುರುಬರ ಸಂಘದ ಗೌರವ ಅಧ್ಯಕ್ಷ ಜನ್ನೂರು ಮಹದೇವು ಇತರರು ಹಾಜರಿದ್ದರು.

ಹನೂರಲ್ಲಿ ಇಂದಿರಾ ಕ್ಯಾಂಟೀನ್ ಉದ್ಘಾಟನೆ



ಹನೂರು: ಪಟ್ಟಣದ ರಾಜ್ಯ ಸಾರಿಗೆ ಬಸ್ ನಿಲ್ದಾಣದ ಪಕ್ಕದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಇಂದಿರಾ ಕ್ಯಾಂಟೀನ್‌ನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನಾಮಫಲಕ ಅನಾವರಣಗೊಳಿಸಿದರು.

ಸಿದ್ದರಾಮಯ್ಯನವರ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದಾದ ಇಂದಿರಾ ಕ್ಯಾಂಟೀನ್ ಉದ್ಘಾಟನೆ ಮಾಡಿ ನಂತರ ಉಪ್ಪಿಟ್ಟು ಕೇಸರಿ ಬಾತ್‌ನ ರುಚಿ ನೋಡಿ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ಸೂಚಿಸಿದರು. ಬಡವರಿಗೆ ಇಷ್ಟವಾಗುವ ರೀತಿಯಲ್ಲಿ ಇಂದಿರಾ ಕ್ಯಾಂಟೀನ್‌ನಲ್ಲಿ ವಾರದ ಮೆನುವಂತೆ ಸದ್ಬಳಕೆ ಮಾಡಿಕೊಳ್ಳಲು ಸೂಕ್ತಕ್ರಮ ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹಾಗೂ ಸಮಾಜ ಕಲ್ಯಾಣ ಸಚಿವ ಹೆಚ್‌ಸಿ ಮಹದೇವಪ್ಪ ಕ್ಷೇತ್ರ ಶಾಸಕರಾದ ಎಂ.ಆರ್.ಮಂಜುನಾಥ್ ಎ.ಆರ್. ಕೃಷ್ಣಮೂರ್ತಿ, ಜಿಲ್ಲಾಧಿಕಾರಿ ಶಿಲ್ಪನಾಗ್, ಎಸ್‌ಪಿ ಕೆ.ಟಿ.ಕವಿತಾ ಡಿವೈಎಸ್‌ಪಿ ಧರ್ಮೇಂದರ್ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಶ್ರೀರಂಗಪಟ್ಟಣ, ಭೊಮ್ಮುರು, ಅಗ್ರಹಾರ ತೋಟ ಮತ್ತು ಫಾರಂ ಹೌಸ್‌ನಲ್ಲಿ ಕೆಲಸ ಮಾಡಲು ದಂಪತಿಗಳು ಬೇಕಾಗಿದ್ದಾರೆ. ವಸತಿ ಸೌಕರ್ಯವಿದೆ. ಆಕರ್ಷಕ ಸಂಬಳ. ಸಂಪರ್ಕಿಸಿ:
9380640361, 6361669828

ಭೋಗ್ಯಕ್ಕೆ ಅಥವಾ ಬಾಡಿಗೆಗೆ ಮನೆ ಬೇಕಾಗಿದೆ
ಇಂಡಿಪೆಂಡೆಂಟ್ 2 BHK or 3 BHK ವಾಸ್ತು, ಮನೆ ಬೇಕಾಗಿದೆ, ಮೈಸೂರು ಮಧ್ಯವರ್ತಿಗಳು ಕ್ಷಮಿಸಿ Good Location
9343361444

ಮಾರಾಟಕ್ಕಿವೆ
30x40 ಸೈಟ್ East 40 ಅಡಿ ರಸ್ತೆ ವಿಜಯನಗರ 4ನೇ ಹಂತ, 40x60 2 ಫ್ಲೋರ್ ಮನೆ, 7 ಬೆಡ್ ರೂಂ ರಿಂಗ್ ರಸ್ತೆ ಶ್ರೀರಾಂಪುರ ಸರ್ಕಲ್ ಹತ್ತಿರ
9945622196

ಸೈಟು ಮಾರಾಟಕ್ಕಿದೆ
30x40 ದ್ವಾರಕನಗರ ಶ್ರೀರಾಂಪುರ ರಿಂಗ್ ರೋಡ್ ಸಂಪರ್ಕಿಸಿ:
9538412881

ಬೇಕಾಗಿದ್ದಾರೆ
1) ಲೇಡಿ ಸಚರರ್
2) ಸೆಕ್ಯೂರಿಟಿ ಗಾರ್ಡುಗಳು
ಸ್ಥಳ: ವರುಣಾ ಗ್ರಾಮ ಸುತ್ತಮುತ್ತ
2) ಮಾನಸಿನಗರ
3) ಬನ್ನೂರು ರಸ್ತೆ
9242406261
9686422400

ಹೊಸ ಮನೆ ಮಾರಾಟಕ್ಕಿದೆ
20x33, 3BHK #144, ಶ್ರೀನಿಧಿ ಎನ್‌ಕ್ಲೈವ್ ನಿಂಗದೇವರ ಕೊಪ್ಪಲು ಹಿಂಭಾಗ, ಇಲವಾಲ, ಮೈಸೂರು
9902634441

ಮನೆ ಬಾಡಿಗೆಗೆ ಬೇಕಾಗಿದೆ
ಮೈಸೂರಿನ ವಿಜಯನಗರ, ಜಯಲಕ್ಷ್ಮಿಪುರಂ, ದಟ್ಟಗಳ್ಳಿ, ರಾಮಕೃಷ್ಣನಗರದ ಕಡೆ 3 ಬೆಡ್ ರೂಂ ಇರುವ ಎಲ್ಲಾ ಸೌಕರ್ಯಗಳನ್ನು ಹೊಂದಿರುವ ಮನೆ ಬಾಡಿಗೆಗೆ ಬೇಕಾಗಿದೆ.
9148376464

ಜಮೀನು ಮಾರಾಟಕ್ಕಿದೆ
7 ಎಕರೆ ನೀರಾವರಿ ಜಮೀನು ಪಾಂಡವಪುರದ ಹತ್ತಿರ ಮಾರಾಟಕ್ಕಿದೆ
LAND FOR SALE
7 acre land is for sale near Pandavapura
8496000727
9632434689

ಸೈಟ್ ಮಾರಾಟಕ್ಕಿದೆ
30x40 ಪಶ್ಚಿಮ ದಿಕ್ಕು BSNL ಲೇಔಟ್ ಕುಬೇರಾನಂದ ಸಾಗರ 2nd ಫೇಸ್ ಸುಂದರ ತಾಣ, ಇಲವಾಲ 36 ಲಕ್ಷ, ನೆಗೋಷಿಯಬಲ್ (ಹರೀಶ್)
9663311557

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್ನಲ್ಲಿ ಸಿಸ್ಟಮ್ ಸರ್ವಿಸ್ ಇಂಜಿನಿಯರ್ ಕೆಲಸಕ್ಕೆ, ಸಿಸ್ಟಮ್ ಮತ್ತು ಪ್ರಿಂಟರ್ ರಿಪೇರಿ ಗೊತ್ತಿರುವ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಅನುಭವ ಮತ್ತು ದ್ವಿಚಕ್ರ ವಾಹನ ಹೊಂದಿದವರಿಗೆ ಹೆಚ್ಚಿನ ಆದ್ಯತೆ.. ಹೊಸಬರೂ ಟ್ರೈನಿ ಇಂಜಿನೀಯರ್ ಕೆಲಸಕ್ಕೆ ಬೇಕಾಗಿದ್ದಾರೆ.
8073393505

ತಕ್ಷಣ ಬೇಕಾಗಿದ್ದಾರೆ
ಸೌತ್ ಅಡುಗೆ (ವೆಜ್) ಭಟ್ರು, ದೋಸಾ ಭಟ್ರು, South ಅಸಿಸ್ಟೆಂಟ್ (ಹೆಲ್ಪರ್), Indian Chef (ನಾರ್ತ್ ಚೈನೀಸ್) ವಾಷಿಂಗ್ & ಕ್ಲೀನಿಂಗ್ ಮೈಸೂರ್‌ನಲ್ಲಿ ಕಾಳಿದಾಸ ರೋಡ್ –ಜಯಲಕ್ಷ್ಮೀಪುರಂನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ, ಉತ್ತಮ ಕೆಲಸಗಾರರಿಗೆ ಅತ್ಯುತ್ತಮ ಸಂಬಳ, ESI ಕೊಡಲಾಗುವದು.
9019916266

ಬೇಕಾಗಿದ್ದಾರೆ
ವಯೋವೃದ್ಧ ಪುರುಷರ ಸೇವೆಗಾಗಿ ಮತ್ತು ಮನೆಕೆಲಸವನ್ನು ಮಾಡಲು ಮೂವತ್ತು ವರ್ಷದೊಳಗಿನ ವ್ಯಕ್ತಿ ಬೇಕಾಗಿದ್ದಾರೆ. ಕರ್ತವ್ಯದ ಅವಧಿ ಸಂಜೆ 7 ಗಂಟೆಯಿಂದ ಬೆಳಗ್ಗೆ 8:00ರ ವರೆಗೆ. (ರಾತ್ರಿಯ ಪಾಳಿ)ವೇತನ ತಿಂಗಳಿಗೆ ರೂಪಾಯಿ 9,000 ಆಸಕ್ತರು ಈ ಕೆಳಗಿನ ದೂರವಾಣಿಯನ್ನು ಸಂಪರ್ಕಿಸಿ :
8310284504
9481319026

ಜಮೀನು ಮಾರಾಟಕ್ಕಿವೆ
ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕಿನ ಸಂಗಮ್ ರಸ್ತೆಯಲ್ಲಿ 1 ಎಕರೆ ಜಮೀನು ಇದೆ ಎದುರುಗಡೆ ಕೆರೆ ಇದೆ ಜಮೀನಿನಲ್ಲಿ ಬೋರ್‌ವೆಲ್ ತಂತಿ ಬೇಲಿ ಕಾಂಪೌಂಡ್ ಗೇಟು ಹಾಕಲಾಗಿದೆ. ಬೆಲೆ 40 ಲಕ್ಷ ಮಾರಾಟಕ್ಕಿದೆ. ಪಕ್ಕದಲ್ಲಿ ಕಬಿನಿ ಚಾಲನ್ ಇದೆ.
9945980000

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡಲು Security Gaurd ಬೇಕಾಗಿದ್ದಾರೆ. ಸಂಬಳ: 19500/– ವಯಸ್ಸು: 19 ರಿಂದ 50, ವಿದ್ಯಾಭ್ಯಾಸ: SSLC, PUC Anydegree Pass or Fail ESI, PF, Bonus ಸೌಲಭ್ಯವಿದೆ.
9880116412

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಮನೆ ಬಾಡಿಗೆಗೆ ಇದೆ
ಪೂರ್ವದಿಕ್ಕು (Gnd Floor) 2BHK + 1 Kids Room ಕಾವೇರಿ ನೀರು, Solar+Geyser Vehicle Parking Vidyaranya Puram
9611263045

6 ದಿನಗಳ ಶ್ರೀಲಂಕಾ ಪ್ರವಾಸ
(ದಂಬುಲ್ಲಾ, ಕ್ಯಾಂಡಿ ನುವಾರ ಎಲಿಯ ಬೆಂಟಾಟೋ, ಕೊಲಂಬೊ) 9/5/2025. 7 ದಿನಗಳ ಸಿಂಗಾಪುರ ಮಲೇಷಿಯಾ ಪ್ರವಾಸ (ಗಾರ್ಡನ್ ಬೇ, ಮರೀನಾ ಬೇ ಸ್ಯಾಂಡ್ ಬಟು ಕೇವ್ಸ್) 6/6/2025.
ಸುವರ್ಣ ಯಾತ್ರ
6360146483 / 9019462508

SBIT TRAVELS
Group Tour
BAKU 5 DAYS
19 May| 7,14,19 June | 11,18 July
Air tickets | Entry tickets | Meals
Hotel | Visa | All tours and transfers
9343524127
(Saraswathipuram, Mysuru)

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

COMMERCIAL PROPERTY FOR RENT
100x40, 1st Floor, Lakshmipuram, Mysore. Contact:
Ph: 8892835885

ಶ್ರೀ ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆ (ರಿ)
ಆಂಗ್ಲ ಮಾಧ್ಯಮ ಪ್ರೌಢಶಾಲೆ, ಹೆಡಿಯಾಲ, ನಂಜನಗೂಡು ತಾಲ್ಲೂಕು–571315
ಶಿಕ್ಷಕರು ಬೇಕಾಗಿದ್ದಾರೆ
Posts: Science, Physics, Chemistry. Qlfn: M.Sc. with B.Ed.
Kannada: M.A. B.Ed.
Hindi - M.A., B.Ed.
ಕಛೇರಿಯಲ್ಲಿ ಭೇಟಿಯ ಸಮಯ ಬೆಳಗ್ಗೆ 10.30 ರಿಂದ 1 ಹಾಗೂ ಸಾಯಂಕಾಲ 3 ರಿಂದ 4.
–ಕಾರ್ಯದರ್ಶಿ / ಮುಖ್ಯೋಪಾಧ್ಯಾಯರು

ಜಮೀನು ಮಾರಾಟಕ್ಕಿದೆ
ನಿವೇಶನಕ್ಕೆ ಯೋಗ್ಯವಾದ 20 ಗುಂಟೆ ಜಮೀನು ಮಾರಾಟಕ್ಕಿದೆ ಬೋಗಾದಿ ರಿಂಗ್ ರೋಡ್‌ನಿಂದ 8 ಕಿ.ಮೀ ದೂರದಲ್ಲಿದೆ (1 ಗುಂಟೆಗೆ 9.5 ಲಕ್ಷ) ಹಾಗೂ 1 ಎಕರೆ 16 ಗುಂಟೆ ಜಮೀನು (1 ಗುಂಟೆಗೆ 7 ಲಕ್ಷ)
9343036405

ಸೂರ್ಯ ಕೋಚಿಂಗ್ (ಕಾಮರ್ಸ್)
Excellent Coaching for 2nd PUC ಕಾಮರ್ಸ್ in Accounts Statistics, Economics, Business Studies etc. Low Fees, FREE COACHING for DOOR Students only 6 to 8 Students per Batch. 100% Individual Attention for each Student. Contact: Professor at
9901932751

SITE FOR SALE
30x40, 30x50 Ready for Registration Srirampura Ring Road &
HOUSE FOR SALE
20x30 Lalbahadur Shastri Nagar, Mysuru. Contact:
Mob: 8050345574

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT
Pharma Assistant	PUC / Degree

0821-2499188 / 9880186386

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
Mob: 6360884930

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಅಂಜನ ಶಾಸ್ತ್ರದ ಮೂಲಕ ಪರಿಹಾರ ಶ್ರೀ ಅಂಜನ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ಬೇಕಾಗಿದ್ದಾರೆ
ಇಟ್ಟಿಗೆಗೂಡಿನಲ್ಲಿರುವ ಫೋಭನ್ ಫುಡ್ ಡಿಸ್ಟ್ರಿಬ್ಯೂಟರ್‌ಗೆ ಕೆಲಸ ಮಾಡಲು ಡೆಲಿವರಿ ಹುಡುಗರು ಬೇಕಾಗಿದ್ದಾರೆ.
9742278099
9916531172

ಜಮೀನುಗಳು ಮಾರಾಟಕ್ಕಿವೆ
ಮೈಸೂರು ತಾಲ್ಲೂಕು ಕಂಚಮಳ್ಳಿ, ಮುಖ್ಯರಸ್ತೆಯಲ್ಲಿ 1 ಎಕರೆ 09 ಗುಂಟೆ 1 ಎಕರೆ 04 ಗುಂಟೆ 20 ಗುಂಟೆ 19 ಗುಂಟೆ 32 ಗುಂಟೆ 25 ಗುಂಟೆ, 3 ಎಕರೆ 07 ಗುಂಟೆ ಜಮೀನುಗಳು ರಿಂಗ್ ರಸ್ತೆಯ ಹತ್ತಿರದಲ್ಲಿದೆ. ಮಾರಾಟಕ್ಕಿವೆ ಸಂಪರ್ಕಿಸಿ:
9945661696
9945980000

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/ PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 - 86000.
Mob: 7892046990

R S CONSTRUCTION ENGINEERS & CONTRACTORS
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ
9538575009
7019151884

CONSTRUCTION
ಮೈಸೂರಿನಲ್ಲಿ ಪ್ರಥಮ ಬಾರಿಗೆ ಆಕರ್ಷಕ ಬೆಲೆಯಲ್ಲಿ ಮನೆ ನಿರ್ಮಾಣ
1) ಉತ್ತಮ ಗುಣಮಟ್ಟದ ಸಾಮಾಗ್ರಿಗಳಿಂದ ಮನೆ ನಿರ್ಮಿಸಲಾಗುವುದು.
2) ಮನೆಯನ್ನು 6 ತಿಂಗಳಿನಲ್ಲಿ ಪೂರ್ಣ ಗೊಳಿಸಿ Key Handover ಮಾಡಲಾಗುವುದು.
3) ಉಚಿತ ಇಂಟೀರಿಯರ್ ಮಾಡಿಕೊಡಲಾಗುವುದು. ಸಂಪರ್ಕಿಸಿ:
Mob: 9379888558

JOB ALERT
Process Associate and Quality Analyst are required
Vacancy 100+. Qualification: Any Degree. Salary Rs. 12000 - 15000 + ESI & PF
VITAL RECORDS PVT LTD. #42, JCK Industrial Park, Metagalli, Mysore.
Contact: 8867064586

ಬೇಕಾಗಿದ್ದಾರೆ
ಸುವರ್ಣಾವಕಾಶ ಪ್ರಸಿದ್ಧ ಷೋರೂಮ್ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ, ಯುವಕರು ಮತ್ತು ಯುವತಿಯರು, 22000/–salary. 100% ಗ್ಯಾರೆಂಟಿ ಕೆಲಸ
9482369816
9482360136

ಪ್ರವೇಶ ತೆರೆದಿದೆ
